"VARTHA JANAPADA" Monthly - May 2020
"ವಾರ್ತಾ ಜನಪದ" ಮಾಸಿಕ – ಮೇ 2020
Page No. -52
RNI No. KAR/KAN/2017/75029
Regd No.KA/BGGPO/2583/2018-20 Licensed to post without prepayment Licence No. PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




#KarnatakafightsCorona

# ಕರ್ನಾಟಕ ಸರ್ಕಾರ
## ಕೊರೋನಾ ಸಹಾಯವೇದಿಕೆ
## 87509 71717

ಸಂಖ್ಯೆಯನ್ನು ಸೇವ್ ಮಾಡಿ
ವಾಟ್ಸಪ್ ನಲ್ಲಿ 'Hi' ಎಂದು ಕಳುಹಿಸಿ

| | | | |
|---|---|---|---|
| ಕೋವಿಡ್ 19 ಕುರಿತ ಮಾಹಿತಿಗಾಗಿ | ನಿಮ್ಮ ಹಾಗೂ ನಿಮ್ಮ ಕುಟುಂಬದವರ ರಕ್ಷಣೆ ಹೇಗೆ? | ವೈದ್ಯಕೀಯ ನೆರವು ಹಾಗೂ ಸಹಾಯ ಎಲ್ಲಿ ಪಡೆಯಬಹುದು? | ಕರ್ನಾಟಕದ ಇತ್ತೀಚಿನ ಕೋವಿಡ್ 19 ಅಪ್‌ಡೇಟ್‌ಗಳು |

ತಪ್ಪು ಮಾಹಿತಿಯಿಂದ ದೂರವಿರಿ
ನಮ್ಮನ್ನು ಸಂಪರ್ಕಿಸಿ


ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ


Downloaded From: www.kpscvaani.com

# ವಾರ್ತಾ ಜನಪದ

ವಾರ್ಷಿಕ ಚಂದಾ ರೂ.25/-

ಮೇ 2020














ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಏಪ್ರಿಲ್ 12 ರಂದು ಬೆಂಗಳೂರು ನಗರ ವೀಕ್ಷಣೆ ಮಾಡಿ ಸಾರ್ವಜನಿಕರು ಮತ್ತು ಪೊಲೀಸ್ ಸಿಬ್ಬಂದಿಗಳೊಂದಿಗೆ ಕೊರೊನಾ ಸಂಬಂಧ ಆಗುತ್ತಿರುವ ಅನಾನುಕೂಲಗಳ ಕುರಿತು ಮಾತುಕತೆ ನಡೆಸಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಏಪ್ರಿಲ್ 12 ರಂದು ಬೆಂಗಳೂರು ನಗರ ವೀಕ್ಷಣೆ ಮಾಡಿ ಹಣ್ಣು ತರಕಾರಿ ವ್ಯಾಪಾರಿಗಳು, ಅಂಗಡಿ, ಮಾಲ್, ಮಾಲೀಕರೊಂದಿಗೆ ಕೊರೊನಾ ಸಂಬಂಧ ಆಗುತ್ತಿರುವ ಅನಾನುಕೂಲಗಳ ಕುರಿತು ಮಾತುಕತೆ ನಡೆಸಿದರು.

Downloaded From: www.kpscvaani.com

# ವಾರ್ತಾ ಜನಪದ

ಸಂಪುಟ–03 • ಸಂಚಿಕೆ–08 • ಮೇ 2020


**05** ಕೋವಿಡ್–19 ತಡೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆಗೆದುಕೊಂಡ ಪ್ರಮುಖ ನಿರ್ಧಾರಗಳು
• ಬಿ.ಜಿ.ಪೂರ್ಣಿಮ

**15** ಕಾರ್ಮಿಕರ ಹಿತರಕ್ಷಣೆಗಾಗಿ ಸಮರೋಪಾದಿಯಲ್ಲಿ ತೊಡಗಿರುವ ಕಾರ್ಮಿಕ ಇಲಾಖೆ
• ಉಮೇಶ್ ಕೂಲಿಗೆರೆ

**20** ವಾರ್ತಾ ಇಲಾಖೆಯಲ್ಲಿ ಕೊರೊನಾ ವಾರ್‌ರೂಂ ಸ್ಥಾಪನೆ
• ಸಂಹಿತಾ

**22** ಕೋವಿಡ್ ಅಂಕುಶಕ್ಕೆ ಟೊಂಕ ಕಟ್ಟಿ ನಿಂತ ಕರ್ನಾಟಕ ರಾಜ್ಯ ಆರೋಗ್ಯ ಇಲಾಖೆ
• ಚಂದ್ರಮುಖಿ

**28** ಹಗಲಿರುಳು ಜನರ ರಕ್ಷಣೆಯಲ್ಲಿ ನಿರತರಾದ ಪೊಲೀಸರು
• ಹೆಚ್. ಶಿವಣ್ಣ

**32** ಕೊರೊನಾ: ಜಾಗೃತರಾಗಿರೋಣ
• ಡಾ.ರವಿಪ್ರಸಾದ್ ಸಜ್ಜನ್

**36** ಕೊರೊನಾ ಸೋಂಕಿತರ ಪತ್ತೆಗೆ ಮೊಬೈಲ್ ತಂತ್ರಜ್ಞಾನ ಅಭಿವೃದ್ಧಿ
• ಶಿವಕುಮಾರ್ ಬೆಳ್ಳಿತಟ್ಟೆ

**39** ಕೊರೊನಾದಿಂದ ಪಾರಾಗಲು ತಂಬಾಕಿನಿಂದ ದೂರವಿರಿ
• ಮಹದೇವ್

**41** ಕೊರೊನಾ ತಡೆಗೆ ಜಿಲ್ಲಾಡಳಿತ ತೆಗೆದುಕೊಂಡ ಕ್ರಮಗಳು



ಪ್ರಧಾನ ಸಂಪಾದಕರು
ಎಸ್. ಎನ್. ಸಿದ್ದರಾಮಪ್ಪ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಬಸವರಾಜ ಎಂ ಕಂಬಿ
ಜಂಟಿ ನಿರ್ದೇಶಕರು

ಸಹನಾ ಎಂ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
Ph : 080-22028103 / 22028023
email : varthajanapada@yahoo.co.in
www.karnatakainformation.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 10



ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From: www.kpscvaani.com





## ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದ ಜನರಿಗೆ ನೀಡಿದ ಏಳು ಸಲಹೆಗಳು

- ವೃದ್ಧರನ್ನು ವಿಶೇಷವಾಗಿ ದೀರ್ಘಕಾಲಿಕ ಅನಾರೋಗ್ಯಕ್ಕೆ ಒಳಗಾಗಿರುವವರನ್ನು ಹೆಚ್ಚಿನ ಕಾಳಜಿಯಿಂದ ನೋಡಿಕೊಳ್ಳಿ.
- ಅನವಶ್ಯಕವಾಗಿ ಮನೆಯಿಂದ ಹೊರಗೆ ಹೋಗಬೇಡಿ. ಮನೆಯಿಂದ ಹೊರಗೆ ಹೋಗಲೇ ಬೇಕಾದ ಪ್ರಸಂಗ ಬಂದರೆ ಮನೆಯಲ್ಲೇ ತಯಾರಿಸಿದ ಮಾಸ್ಕ್‌ಗಳನ್ನು ಬಳಸಿ.
- ನಿಮ್ಮ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಆಯುಷ್ ಸಚಿವಾಲಯದ ಸೂಚನೆಯನ್ನು ಪಾಲಿಸುವ ಜೊತೆಗೆ ಬಿಸಿನೀರು ಹಾಗೂ ಕಷಾಯವನ್ನು ನಿರಂತರವಾಗಿ ಸೇವಿಸುತ್ತಿರಿ.
- ಕೊರೊನಾ ಸೋಂಕು ನಿಯಂತ್ರಣಕ್ಕಾಗಿ ಕೇಂದ್ರ ಆರೋಗ್ಯ ಸಚಿವಾಲಯ ಸಿದ್ಧಪಡಿಸಿರುವ ಆರೋಗ್ಯ ಸೇತು ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಿ ಮತ್ತು ತಮ್ಮ ಆಪ್ತರಿಗೂ ಈ ಆ್ಯಪ್ ಹಾಕಿಕೊಳ್ಳಲು ತಿಳಿಸಿ.
- ನಿಮ್ಮ ಸುತ್ತ ಮುತ್ತಲಿರುವ ಬಡ ಕುಟುಂಬದವರಿಗೆ ನಿಮ್ಮಿಂದ ಆಗುವಷ್ಟು ಸಹಾಯ ಮಾಡಿ.
- ನಿಮ್ಮ ಮನೆಯಲ್ಲಿ, ಕಚೇರಿಗಳಲ್ಲಿ, ಕಂಪನಿಗಳಲ್ಲಿ, ಕಾರ್ಖಾನೆಗಳಲ್ಲಿ ಕೆಲಸ ಮಾಡುವವರನ್ನು ಕೆಲಸದಿಂದ ತೆಗೆದು ಹಾಕಬೇಡಿ.
- ನಿಮ್ಮ ರಕ್ಷಣೆಗಾಗಿ ಹಗಲಿರುಳು ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು, ಪೊಲೀಸರು, ನೈರ್ಮಲ್ಯ ಸಿಬ್ಬಂದಿ ಅವರನ್ನು ಗೌರವದಿಂದ ಕಾಣಿರಿ.

'ವಾರ್ತಾ ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/-

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಕಡ್ಡಾಯವಾಗಿ
ಸೇವಾಸಿಂಧುವಿನ ಮೂಲಕ ಆನ್ ಲೈನ್ ಅರ್ಜಿಯನ್ನು ಅಥವಾ
"The Commissioner, Department of Information & Public Relations"
ಹೆಸರಿನಲ್ಲಿ ಡಿ.ಡಿ. ಮುಖಾಂತರವೇ ಕಳುಹಿಸಬೇಕು.
ಮನಿ ಆರ್ಡರ್ ಮೂಲಕ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು
ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From: www.kpscvaani.com

# ಕೋವಿಡ್-19 ತಡೆಗೆ

## ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆಗೆದುಕೊಂಡ ಪ್ರಮುಖ ನಿರ್ಧಾರಗಳು

ಬಿ.ಜಿ. ಪೂರ್ಣಿಮಾ



**ಭಾ**ರತ ದೇಶವು ಸೇರಿದಂತೆ 202 ದೇಶ/ಪ್ರದೇಶಗಳನ್ನು ಬಾಧಿಸಿರುವ ನೋವೆಲ್ ಕೊರೊನಾ ವೈರಸ್(ಕೋವಿಡ್–19) ಅನ್ನು ಅಂತರರಾಷ್ಟ್ರೀಯ ಕಾಳಜಿಯು ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ (ಪಿ.ಹೆಚ್.ಐ.ಸಿ) ಎಂದು ವಿಶ್ವ ಆರೋಗ್ಯ ಸಂಸ್ಥೆಯು ಘೋಷಿಸಿದೆ. ಮಾರ್ಚ್ 11, 2020 ರಂದು ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್ –19 ಅನ್ನು ಸರ್ವವ್ಯಾಪಿ ರೋಗ ಎಂದು ಘೋಷಿಸಿದೆ.

ಮೊಟ್ಟಮೊದ ಬಾರಿಗೆ ಚೀನಾ ದೇಶದಲ್ಲಿ ನವೆಂಬರ್ 17 ರಂದು ಮೊದಲ ಕೊರೊನಾ ಸೋಂಕು ಪ್ರಕರಣ ದಾಖಲಾಯಿತು. ಆದರೆ ಭಾರತದಲ್ಲಿ ಮೊದಲ ಕೊರೊನಾ ಸೋಂಕು ಪತ್ತೆಯಾದುದು ಜನವರಿ 30 ರಂದು. ಈ ಪ್ರಕರಣದ ನಂತರ ಕೇಂದ್ರ ಸರ್ಕಾರವು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿತು. ವಿದೇಶದಿಂದ ಆಗಮಿಸಿದ ಪ್ರಯಾಣಿಕರ ಆರೋಗ್ಯ ತಪಾಸಣೆಗೆ ಹೆಚ್ಚಿನ ಮಹತ್ವವನ್ನು ನೀಡಿತು. ಸೋಂಕು ಪ್ರಕರಣಗಳು ಹೆಚ್ಚಾಗತೊಡಗಿದರಿಂದ ದೇಶದೊಳಗೆ ಅಂತರರಾಷ್ಟ್ರೀಯ ವಿಮಾನಗಳ ಹಾರಾಟವನ್ನು ನಿರ್ಬಂಧಿಸಿತು.

ಕೊರೊನಾ ಸೋಂಕು ಒಬ್ಬರಿಂದ ಒಬ್ಬರಿಗೆ ಹರಡುವ



ಸಾಂಕ್ರಾಮಿಕ ರೋಗವಾಗಿದ್ದು, ಇದನ್ನು ತಡೆಗಟ್ಟಲು ಜನಸಂದಣಿಯಿಂದ ದೂರವಿರುವುದೊಂದೇ ಮಾರ್ಗವೆಂದು ವಿಷಯ ತಜ್ಞರು ಮತ್ತು ಖ್ಯಾತ ವೈದ್ಯರುಗಳು ಅಭಿಪ್ರಾಯಪಟ್ಟ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು, ಕೊರೊನಾ ಸೋಂಕು ತಗಲುವ ಭೀತಿಯಿದ್ದರೂ ಕೂಡ ತಮ್ಮ ವೃತ್ತಿಧರ್ಮ ಪಾಲಿಸಲು ಸೋಂಕಿತರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯಕೀಯ ಸಿಬ್ಬಂದಿಗಳು, ಔಷಧ ತಯಾರಕರು, ವಿತರಕರು, ನಗರಗಳನ್ನು ಸ್ವಚ್ಛಗೊಳಿಸುವ ಪೌರಕಾರ್ಮಿಕರು, ಸರ್ಕಾರಿ ನೌಕರರು, ಪೊಲೀಸರು, ಸೈನಿಕರು, ಸಾರಿಗೆ ಸಿಬ್ಬಂದಿಗಳು, ಮತ್ತು ಮಾಧ್ಯಮ ಪ್ರತಿನಿಧಿಗಳ ನಿಸ್ವಾರ್ಥ ಸೇವೆಯನ್ನು ಗೌರವಿಸುವ ಸಲುವಾಗಿ ಮಾರ್ಚ್ 22 ರಂದು ಒಂದು ದಿನ ಪೂರ್ತಿ ದೇಶದ ಜನರೆಲ್ಲಾ ಮನೆಯಲ್ಲೇ ಇದ್ದು, "ಜನತಾ ಕರ್ಫ್ಯೂ"ಗೆ ಒಳಗಾಗುವಂತೆ ಮತ್ತು ಅಂದು ಸಂಜೆ ತಮ್ಮ ಮನೆಯ ಬಾಗಿಲು, ಕಿಟಕಿ, ಬಾಲ್ಕನಿಯಲ್ಲಿ ನಿಂತು 5 ನಿಮಿಷ ಚಪ್ಪಾಳೆ ತಟ್ಟುವ ಮೂಲಕ ಅವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸೋಣ ಎಂದು ದೇಶದ ಜನತೆಗೆ ಕರೆ ನೀಡಿದರು. ಅವರ ಈ ಕರೆಗೆ ದೇಶವ್ಯಾಪಿ ಅಭೂತಪೂರ್ವ ಸ್ಪಂದನೆ ದೊರೆಯಿತು.

## ಕೊರೊನಾ ಅನುಮಾನಗಳಿಗೆ ಸಹಾಯವಾಣಿ ಸ್ಥಾಪನೆ

**ಸಾಮಾಜಿಕ ಜಾಲತಾಣಗಳ ಮೂಲಕ ಕೆಲವರು ಕೊರೊನಾ ಸಂಬಂಧ ಸುಳ್ಳು ಸುದ್ದಿಗಳನ್ನು ಹರಿಯಬಿಡುತ್ತಿದ್ದ ಕಾರಣ ಸರ್ಕಾರವು ಸಾರ್ವಜನಿಕರಿಗೆ ನಿಖರವಾದ ಸುದ್ದಿಯನ್ನು ನೀಡಲು ಉಚಿತ ಆರೋಗ್ಯ ಸಹಾಯವಾಣಿಯನ್ನು ಆರಂಭಿಸಿತು. ಸುಳ್ಳು ಸುದ್ದಿಗಳನ್ನು ಯಾವುದೇ ಕಾರಣಕ್ಕೂ ನಂಬದಿರುವಂತೆ ಮತ್ತು ಕೋವಿಡ್–19 ಗೆ ಸಂಬಂಧಿಸಿದಂತೆ ಯಾವುದೇ ಅನುಮಾನಗಳಿದ್ದರೆ ಉಚಿತ ಆರೋಗ್ಯ ಸಹಾಯವಾಣಿ 104 ಅಥವಾ 9745697456 ಕ್ಕೆ ಸಂಪರ್ಕಿಸಿ ಸಾರ್ವಜನಿಕರು ಮಾಹಿತಿಯನ್ನು ಪಡೆದುಕೊಳ್ಳಬಹುದು.**



ಆದರೆ ಅಂದೇ ದೇಶದಾದ್ಯಂತ 81 ಹೊಸ ಪ್ರಕರಣಗಳು ಹಾಗೂ ಕರ್ನಾಟಕದಲ್ಲಿ 6 ಸೋಂಕಿತರು ಪತ್ತೆಯಾದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಬೆಂಗಳೂರು ಸೇರಿದಂತೆ ಸೋಂಕು ಪತ್ತೆಯಾದ 9 ಜಿಲ್ಲೆಗಳನ್ನು ಮಾರ್ಚ್ 31 ರವರೆಗೆ ಲಾಕ್‌ಡೌನ್ ಮಾಡಲಾಗುವುದೆಂದು ಘೋಷಣೆ ಮಾಡಿತು.

ಮಾರ್ಚ್ 22 ರ "ಜನತಾ ಕರ್ಫ್ಯೂ" ನಂತರ ಜನರು ಮತ್ತೆ ಸಾಮಾನ್ಯದಂತೆ ಓಡಾಟವನ್ನು ಪ್ರಾರಂಭಿಸಿದ ಹಿನ್ನೆಲೆಯಲ್ಲಿ ಪ್ರಧಾನಿಯವರು ಮಾರ್ಚ್ 24 ರಂದು ದೇಶದ ಜನತೆಯನ್ನು ಉದ್ದೇಶಿಸಿ ಮಾತನಾಡಿ, ಕೊರೊನಾ ವೈರಸ್ ಹರಡುವುದನ್ನು ತಡೆಯುವುದಕ್ಕಾಗಿ ದೇಶದ ಪ್ರತಿಯೊಬ್ಬರು ಮಂಗಳವಾರ ಮಧ್ಯರಾತ್ರಿಯಿಂದ ಅಗತ್ಯ ಸೇವೆಗಳ ಹೊರತಾಗಿ ಮನೆಯಿಂದ ಹೊರಗೆ ಬರದಂತೆ ಮನವಿ ಮಾಡಿಕೊಂಡು, 21 ದಿನಗಳ ಕಾಲ ಅಂದರೆ ಏಪ್ರಿಲ್ 14 ರವರೆಗೆ ದೇಶದಲ್ಲಿ ಲಾಕ್‌ಡೌನ್ ದಿಗ್ಬಂಧನ ವಿಧಿಸಲಾಗಿದೆ ಎಂದು ಘೋಷಿಸಿದರು.

## 50 ಲಕ್ಷ ವಿಮೆ ಪರಿಹಾರ

**ಕೊರೊನಾ ವಿರುದ್ಧದ ಸಮರದಲ್ಲಿ ಮುಂಚೂಣಿಯಲ್ಲಿ ಇರುವ ವೈದ್ಯರು, ದಾದಿಯರು, ಆರೋಗ್ಯ ಕಾರ್ಯಕರ್ತರು, ಆಶಾ ಕಾರ್ಯಕರ್ತೆಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗೆ ರೂ 50 ಲಕ್ಷ ಮೊತ್ತದ ವಿಮೆ ಯೋಜನೆಯನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿತು.**



ದಕ್ಷಿಣ ಕೊರಿಯಾ ದೇಶವು 3 ನೇ ಹಂತ ತಲುಪುವ ಹಂತದಲ್ಲಿ ಇಡೀ ದೇಶಕ್ಕೆ ಲಾಕ್‌ಡೌನ್ ನಿರ್ಬಂಧ ವಿಧಿಸಿದ ಪರಿಣಾಮ ಸೋಂಕು ಹರಡುವುದನ್ನು ದೇಶವು ತಡೆಯಿತು. ತಜ್ಞರಿಂದ ಕೊರೊನಾ ಸೋಂಕು ಉಲ್ಬಣವು ನಮ್ಮ ದೇಶದಲ್ಲೂ 3 ನೇ ಹಂತ ತಲುಪಿದರೆ ಭಾರೀ ಅಪಾಯಕ್ಕೆ ತುತ್ತಾಗಲಿದೆ ಎಂದು ಅಭಿಪ್ರಾಯಪಟ್ಟ ಹಿನ್ನೆಲೆಯಲ್ಲಿ ದಕ್ಷಿಣ ಕೊರಿಯಾ ದೇಶದ ಮಾದರಿಯಂತೆ ನಮ್ಮ ದೇಶದಲ್ಲೂ ಮೂರು ವಾರಗಳ ಕಾಲ ಲಾಕ್‌ಡೌನ್ ಅನ್ನು ಜಾರಿಗೆ ತರಲಾಯಿತು.

ಕೆಲವು ಸಂದರ್ಭಗಳಲ್ಲಿ ಐಟಿ–ಬಿಟಿ, ಮ್ಯಾನೇಜ್‌ಮೆಂಟ್ ಕಂಪನಿಗಳ ನೌಕರರಿಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶವಿತ್ತು, ಆದರೆ ಕೊರೊನಾ ಹರಡುವಿಕೆಯ ಸೂಚನೆಯನ್ನು ಅರಿತ ಖಾಸಗಿ ಕಂಪನಿಗಳು ಆದಾಗಲೇ ವರ್ಕ್ ಫ್ರಮ್ ಹೋಂ ನೀಡಿದ್ದರು. ಆದರೆ ಖಾಸಗಿ ಕಂಪನಿಗಳಂತೆ ಸರ್ಕಾರದ ಎಲ್ಲಾ ಕಚೇರಿಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯವರಿಗೆ ವರ್ಕ್ ಫ್ರಮ್ ಹೋಂ ನೀಡಲು ಸಾಧ್ಯವಿಲ್ಲ.

ಹಾಗಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯ್ ಬಾಸ್ಕರ್ ಅವರು ಈ ಸಂಬಂಧ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಒಳಾಡಳಿತ, ಕಂದಾಯ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಆಹಾರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಸಾರಿಗೆ, ಪಶುವೈದ್ಯಕೀಯ ಮತ್ತು ಇಂಧಿನ ಇಲಾಖೆಗಳನ್ನು ಅತ್ಯಗತ್ಯ ಇಲಾಖೆಗಳಾಗಿದ್ದು, ಈ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಎಂದಿನಂತೆ ಕೆಲಸ ನಿರ್ವಹಿಸುವಂತೆ ಸುತ್ತೋಲೆಯನ್ನು ಹೊರಡಿಸಿದರು. ಉಳಿದ ಇಲಾಖೆಗಳ ಗ್ರೂಪ್–ಬಿ, ಗ್ರೂಪ್–ಸಿ, ಮತ್ತು ಗ್ರೂಪ್–ಡಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಏಪ್ರಿಲ್ 14 ರ ವರೆಗೆ ಕಚೇರಿಗೆ ಬರುವುದಕ್ಕೆ ವಿನಾಯ್ತಿ ನೀಡಲಾಯಿತು. ಆದರೆ ಕೋವಿಡ್–19 ನಿಯಂತ್ರಣ ಕಾರ್ಯಕ್ಕೆ ಅಗತ್ಯ ಬಿದ್ದರೆ ಈ ಇಲಾಖೆಗಳ ಅಧಿಕಾರಿಗಳ ಸೇವೆಯನ್ನು ಜಿಲ್ಲಾಡಳಿತವು ಪಡೆದುಕೊಳ್ಳಲು ಅನುಮತಿ ನೀಡಲಾಯಿತು,

## ಮೇ 31 ರ ತನಕ ಇಎಂಐ ಮುಂದೂಡಿಕೆ

**ಲಾಕ್‌ಡೌನ್‌ನಿಂದ ಉದ್ಯೋಗ ನಷ್ಟ ಉಂಟಾಗಿರುವ ಪರಿಣಾಮವಾಗಿ ಹಣಕಾಸು ಮುಗ್ಗಟ್ಟಿಗೆ ಒಳಗಾಗಿರುವ ಗ್ರಾಹಕರು ಗೃಹ ಸಾಲ, ವಾಹನ ಸಾಲ, ಕ್ರೆಡಿಟ್‌ಕಾರ್ಡ್ ಮುಂತಾದ ಸಾಲದ ಇಎಂಐ ಅನ್ನು 3 ತಿಂಗಳು ಕಟ್ಟದಿರಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಅವಕಾಶ ಮಾಡಿಕೊಟ್ಟಿತು. ಆದರೆ ಈ ಮೂರು ತಿಂಗಳ ಅವಧಿಯ ಬಡ್ಡಿ, ಮರುಪಾವತಿ ಸಮಯ ಇತ್ಯಾದಿ ನಿಯಮಗಳನ್ನು ಆಯಾ ಬ್ಯಾಂಕ್‌ಗಳೇ ನಿರ್ಧರಿಸಬೇಕು ಎಂದು ಆರ್.ಬಿ.ಐ ಸೂಚನೆ ನೀಡಿದೆ.**

## ಪ್ರಧಾನಮಂತ್ರಿಗಳಿಂದ ಶ್ಲಾಘನೆ

**ಕೊರೊನಾ ನಿಯಂತ್ರಣ ಸಂಬಂಧ ತಂತ್ರಜ್ಞಾನವನ್ನು ಅಳವಡಿಸಿಕೊಂಡು ವಾರ್ ರೂಂ ತೆಗೆದಿರುವ ಬಗ್ಗೆ ಹಾಗೂ ಹೋಮ್ ಕ್ವಾರಂಟೈನ್‌ನಲ್ಲಿ ಇರುವವರ ಮೇಲೆ ನಿಗಾ ಇಡಲು ಅಭಿವೃದ್ಧಿ ಪಡಿಸಿರುವ ಆ್ಯಪ್ ಕುರಿತು ಪ್ರಧಾನಿಯವರು ಮುಖ್ಯಮಂತ್ರಿಗಳ ಜತೆಗಿನ ಸಂವಾದದ ವೇಳೆ ಪ್ರಸ್ತಾಪಿಸಿ ರಾಜ್ಯದ ಕಾರ್ಯಚಟುವಟಿಕೆಗೆ ಶ್ಲಾಘನೆ ವ್ಯಕ್ತಪಡಿಸುವ ಜೊತೆಗೆ ಇತರೆ ರಾಜ್ಯಗಳೂ ಇಂತಹ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಂತೆ ಸೂಚಿಸಿದರು.**



## ಒಂದು ವರ್ಷದ ವೇತನ ದೇಣಿಗೆ ನೀಡಿದ ಮುಖ್ಯಮಂತ್ರಿಗಳು

**ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ತಮ್ಮ ಒಂದು ವರ್ಷದ ವೇತನದ ಒಟ್ಟು ಮೊತ್ತ 24.10 ಲಕ್ಷ ರೂ ಅನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ದೇಣಿಗೆಯಾಗಿ ನೀಡಿದರು. ಮುಖ್ಯಮಂತ್ರಿಗಳು ದೇಣಿಗೆಯನ್ನು ನೀಡುತ್ತಿದ್ದಂತೆ ಸಚಿವರಾದ ಬಸವರಾಜ್ ಬೊಮ್ಮಾಯಿ, ಜಗದೀಶ್ ಶೆಟ್ಟರ್ ಅವರುಗಳು ಕೂಡ ಒಂದು ವರ್ಷದ ವೇತನವನ್ನು ದೇಣಿಗೆಯಾಗಿ ನೀಡುವುದಾಗಿ ಪ್ರಕಟಿಸಿದರು. ಸರ್ಕಾರಿ ನೌಕರರ ಒಂದು ದಿನದ ವೇತನ ಒಟ್ಟು 200 ಕೋಟಿ ರೂಗಳನ್ನು ನೀಡುವುದಾಗಿ ರಾಜ್ಯ ಸರ್ಕಾರಿ ನೌಕರರ ಸಂಘದವರು ತಿಳಿಸಿದರು. ನಟ ಪುನೀತ್ ರಾಜ್‌ಕುಮಾರ್ 50 ಲಕ್ಷ ರೂ ನೀಡಿದರು. ಅವರಂತೆ ಇನ್ನೂ ಹಲವಾರು ಸೆಲೆಬ್ರಿಟಿಗಳು, ಉದ್ಯಮಿಗಳು, ಖಾಸಗಿ ಸಂಸ್ಥೆಯವರು ಸಹಾಯ ಹಸ್ತವನ್ನು ಚಾಚಿದರು.**



Downloaded From: www.kpscvaani.com



## ರೈತರ ಕಂತು ಮರುಪಾವತಿ ಅವಧಿ ವಿಸ್ತರಣೆ

**ಸಹಕಾರ ಸಂಘಗಳಲ್ಲಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ಪಡೆದಿರುವ ಎಲ್ಲಾ ರೈತರು ಪಾವತಿಸಬೇಕಾದ ಕಂತು ಮರುಪಾವತಿಯ ಅವಧಿಯನ್ನು ಮೂರು ತಿಂಗಳು ಮುಂದೂಡಿ ಮುಖ್ಯಮಂತ್ರಿಗಳು ಆದೇಶ ಹೊರಡಿಸಿದರು. ಹಾಗೆಯೇ ಶೇಕಡ 3 ರ ಬಡ್ಡಿದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಂಬಂಧಿತ ಸಾಲ ಪಡೆದ ರೈತರು ಮಾರ್ಚ್ 31 ರೊಳಗೆ ಸಾಲದ ಅಸಲನ್ನು ಪಾವತಿಸಿದರೆ ಬಡ್ಡಿ ಮನ್ನಾ ಮಾಡುವುದಾಗಿ ಘೋಷಿಸಿತು. ನಂತರ ಜೂನ್ ಅಂತ್ಯದವರೆಗೆ ಅಸಲು ಪಾವತಿಗೆ ಅವಧಿಯನ್ನು ವಿಸ್ತರಿಸಲಾಯಿತು.**

ಸೋಂಕಿತ ವ್ಯಕ್ತಿಯ ಸಂಪರ್ಕದಲ್ಲಿರುವವರಿಗೆ, ವಿದೇಶಗಳಿಂದ ಬಂದವರಿಗೆ ಕೊರೊನಾ ರೋಗಲಕ್ಷಣಗಳು ಕಂಡುಬರದಿದ್ದರೂ ಕೂಡ ಅವರನ್ನು ಹೋಮ್ ಕ್ವಾರಂಟೈನ್‌ನಲ್ಲಿ ಇರಿಸುವ ವ್ಯವಸ್ಥೆ ಮಾಡುವ ಜೊತೆಗೆ ದಿನಕ್ಕೆ 2 ಬಾರಿಯಂತೆ 14 ದಿನಗಳ ಕಾಲ ಅವರ ಆರೋಗ್ಯ ತಪಾಸಣೆಯನ್ನು ಮಾಡಿಸುವ ವ್ಯವಸ್ಥೆಯನ್ನು ರಾಜ್ಯ ಸರ್ಕಾರದ ಮಾಡಿತು,

ಇದುವರೆಗೆ ವಿದೇಶ ಪ್ರಯಾಣದಿಂದ ಬಂದವರಿಂದ ಸೋಂಕು ಹರಡುತ್ತಿರುವುದರಿಂದ ಇಲ್ಲಿಯವರೆಗೂ ನಗರ ಪ್ರದೇಶದಲ್ಲಿ ಸದ್ಯ ಸೋಂಕು ಹರಡಿದೆ. ಕೊರೊನಾ ಭೀತಿಯಿಂದ ನಗರಗಳಿಂದ ಸ್ವಗ್ರಾಮಗಳಿಗೆ ನಗರವಾಸಿಗರು ಪ್ರಯಾಣ ಬೆಳಸಲು ಆರಂಭಿಸಿದರು. ಆದರೆ ಇದರಿಂದ ರೋಗವು ನಗರವಾಸಿಗರಿಂದ ಗ್ರಾಮೀಣ ಪ್ರದೇಶದವರಿಗೂ ಹರಡುವ ಸಾಧ್ಯತೆ ಹೆಚ್ಚಿರುವುದರಿಂದ ಪ್ರಧಾನಿಯವರು ಮತ್ತು ಮುಖ್ಯಮಂತ್ರಿಯವರು ನಗರವಾಸಿಗರು ಗ್ರಾಮಾಂತರ ಪ್ರದೇಶಗಳಿಗೆ ಹೋಗದಿರುವಂತೆ ಮನವಿ ಮಾಡಿದರು.

ರಾಜ್ಯದಲ್ಲಿ ಕೊರೊನಾ ಸೋಂಕು ಹರಡುವಿಕೆ ಹಾಗೂ ನಿಯಂತ್ರಣದ ಉದ್ದೇಶದಿಂದ ಕೋವಿಡ್–19 ಉಸ್ತುವಾರಿಯನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ.ಸುಧಾಕರ್ ಅವರಿಗೆ ವಹಿಸುವಂತೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯಪಾಲರಿಗೆ ಶಿಫಾರಸ್ಸು ಮಾಡಿದರು. ಅದರಂತೆ ರಾಜ್ಯಪಾಲ ವಜುಭಾಯಿವಾಲಾ ಅವರು ಡಾ.ಸುಧಾಕರ್ ಅವರಿಗೆ ಕೋವಿಡ್–19 ಉಸ್ತುವಾರಿಯನ್ನು ವಹಿಸಿ ಆದೇಶ ಹೊರಡಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಖ್ಯಾತ ವೈದ್ಯರಾದ ಡಾ.ದೇವಿಶೆಟ್ಟಿ ಅವರನ್ನೊಳಗೊಂಡಂತೆ, ಹಲವಾರು ಪ್ರಖ್ಯಾತ ತಜ್ಞರುಗಳು, ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಸೋಂಕು ತಡೆಗಟ್ಟುವ ಸಂಬಂಧ ಹಲವು ಬಾರಿ ವಿಡಿಯೋ ಕಾನ್ಫರೆನ್ಸ್ ಮೂಲಕ ಜಿಲ್ಲಾಧಿಕಾರಿಗಳು, ಸಿಇಒ, ಎಸ್.ಪಿ ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ ಜಿಲ್ಲೆಗಳಲ್ಲಿ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಸೂಚನೆಗಳನ್ನು ನೀಡಿದರು.

ಸಚಿವ ಸಂಪುಟ ಸಹೋದ್ಯೋಗಿಗಳೊಂದಿಗೆ ಈ ಕುರಿತು ಚರ್ಚಿಸುವ ಜೊತೆಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸರ್ವಪಕ್ಷಗಳ ಸಭೆಯನ್ನು ಕರೆದು ಸರ್ವ ಪಕ್ಷಗಳ ಮುಖಂಡರೊಂದಿಗೆ ಕೋವಿಡ್–19 ತಡೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಸಲಹೆ ಸೂಚನೆಗಳನ್ನು ಪಡೆದುಕೊಳ್ಳುವ ಮೂಲಕ ಕೋವಿಡ್–19 ವಿರುದ್ಧ ಹೋರಾಟಕ್ಕೆ ಪ್ರತಿ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡರು,

ಬೆಂಗಳೂರು ಮಹಾನಗರಪಾಲಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕಾರ್ಮಿಕ ಇಲಾಖೆಗಳಲ್ಲಿ ಕೋವಿಡ್–19 ತಡೆಯ ಕಾರ್ಯಾಚರಣೆಗೆ ಮೂರು "ವಾರ್ ರೂಂ"ಗಳನ್ನು ರಚಿಸಿದರಲ್ಲದೆ ಅದರ ಮೇಲುಸ್ತುವಾರಿಯನ್ನು ತಾವೇ ವಹಿಸಿಕೊಂಡು ಪ್ರತಿದಿನದ ಆಗು ಹೋಗುಗಳ ಪರಾಮರ್ಶೆಯನ್ನು ನಡೆಸುತ್ತಿದ್ದಾರೆ.

ದೆಹಲಿಯ ನಿಜಾಮುದ್ದೀನ್ ಪ್ರದೇಶದಲ್ಲಿ ತಬ್ಲಿಘ್ ಜಮಾತ್ ಕೇಂದ್ರ ಕಛೇರಿಯಲ್ಲಿ ಜರುಗಿದ ಸಭೆಯಲ್ಲಿ ನಮ್ಮ ರಾಜ್ಯದ ಬೆಂಗಳೂರು, ಬೀದರ್, ಕಲಬುರ್ಗಿ, ಬಳ್ಳಾರಿ ಮತ್ತು ತುಮಕೂರು ಜಿಲ್ಲೆಗಳಿಂದ ಸುಮಾರು 300ಕ್ಕೂ ಹೆಚ್ಚು ಮಂದಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೆಂಬ ಮಾಹಿತಿ ದೊರೆಯಿತು. ಕೂಡಲೇ ಅವರೆಲ್ಲರನ್ನು ಗುರುತಿಸಿ ಕ್ವಾರಂಟೈನ್‌ನಲ್ಲಿ ಇಡಲು ಗೃಹ ಸಚಿವರಾದ ಬಸವರಾಜ ಬೊಮ್ಮಾಯಿ ಅವರು ರಾಜ್ಯಮಟ್ಟದ ವಿಶೇಷ ತಂಡವನ್ನು ರಚಿಸಿ ಕಾರ್ಯಾಚರಣೆಯನ್ನು ಚುರುಕುಗೊಳಿಸಿದರು.

ಈ ಸಭೆಯಲ್ಲಿ ಭಾಗವಹಿಸಿದ್ದವರು ಮತ್ತು ಅವರ ಒಡನಾಟವನ್ನು ಹೊಂದಿದ್ದವರು ಸ್ವಯಂ ಪ್ರೇರಣೆಯಿಂದ ಆರೋಗ್ಯ ಇಲಾಖೆಯ ಉಚಿತ ಸಹಾಯವಾಣಿ 080–29711171 ಕ್ಕೆ ಸಂಪರ್ಕಿಸಿ ವರದಿ ಮಾಡಿಕೊಳ್ಳುವ ಮೂಲಕ ತಮ್ಮ ಕುಟುಂಬದ ಸದಸ್ಯರಿಗೆ ಮತ್ತು ಸಮುದಾಯಕ್ಕೆ ಕೊರೊನಾ ಸೋಂಕು ಹರಡುವುದರಿಂದ ತಪ್ಪಿಸುವಂತೆ ಸ್ವತಃ ಮುಖ್ಯಮಂತ್ರಿಗಳು ಮನವಿ ಮಾಡಿಕೊಂಡರು. ಅಲ್ಲದೆ ಅವರ ತಪಾಸಣೆ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂಬ ಭರವಸೆಯನ್ನು ನೀಡಿದರು.

ದೇಶದಲ್ಲಿ ಕೊರೊನಾ ರೋಗ ಹರಡುವಿಕೆ ತಡೆಗಟ್ಟಲು 21 ದಿನ ಲಾಕ್‌ಡೌನ್ ಮಾಡಿದ್ದರಿಂದಾಗಿ ಅಗತ್ಯ ವಸ್ತುಗಳನ್ನು ಪಡೆದುಕೊಳ್ಳಲು ತೊಂದರೆಯಾಗಬಾರದೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡವರು, ಮಹಿಳೆಯರು, ವೃದ್ಧರು, ರೈತರು, ಕಾರ್ಮಿಕರನ್ನು ಗಮನದಲ್ಲಿಟ್ಟುಕೊಂಡು ಹಲವಾರು ಪರಿಹಾರ ಕೊಡುಗೆಯನ್ನು ಘೋಷಿಸಿತು.

**ಮುಖ್ಯಮಂತ್ರಿಗಳು ರಾಜ್ಯದ ಜನತೆಗೆ ಘೋಷಿಸಿದ ಪರಿಹಾರಗಳು:**

- 62 ಲಕ್ಷ ಫಲಾನುಭವಿಗಳಿಗೆ ಸಾಮಾಜಿಕ ಭದ್ರತಾ ಪಿಂಚಣಿಗಳ ಎರಡು ತಿಂಗಳ ಮೊತ್ತವನ್ನು ಮುಂಚಿತವಾಗಿ ಬಿಡುಗಡೆ.
- 2018 ರಿಂದ ಬಡವರ ಬಂಧು ಯೋಜನೆಯಡಿ ಸಾಲ ಪಡೆದಿದ್ದ 21,620 ಮಂದಿ ಬೀದಿಬದಿ ವ್ಯಾಪಾರಿಗಳ ಸಾಲ ಮನ್ನಾ.
- 15.65 ಲಕ್ಷ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ತಲಾ 1 ಸಾವಿರ ಬಿಡುಗಡೆ. ಬಿಪಿಎಲ್ ಕುಟುಂಬಗಳಿಗೆ ಎರಡು ತಿಂಗಳ ಪಡಿತರ ಒಟ್ಟಿಗೆ ವಿತರಣೆ.

**ಸಾರ್ವಜನಿಕ ಸ್ಥಳಗಳಲ್ಲಿ ಔಷಧ ಸಿಂಪಡಣೆ:**

ಕೊರೊನಾ ವೈರಸ್ ಹರಡದಂತೆ ಮುನ್ನೆಚ್ಚರಿಕೆ ವಹಿಸುವ ಸಲುವಾಗಿ ಸೋಂಕು ಹರಡುವ ಸಾಧ್ಯತೆ ಇರುವ ಬಿಬಿಎಂಪಿಯ ಪ್ರಮುಖ ಸ್ಥಳಗಳನ್ನು ಗುರುತಿಸಿ ಸೋಂಕು ನಿವಾರಕ





### ಕೇಂದ್ರ ಸರ್ಕಾರದಿಂದ ಘೋಷಿಸಲ್ಪಟ್ಟ ಕೊಡುಗೆಗಳು:

- ಮೂರು ತಿಂಗಳವರೆಗೆ ಉಜ್ವಲ ಫಲಾನುಭವಿಗಳಿಗೆ ಉಚಿತ ಅಡುಗೆ ಅನಿಲ.
- ಮಹಿಳಾ ಸ್ವಸಹಾಯ ಗುಂಪುಗಳಿಗೆ ಆಧಾರ ರಹಿತ ಸಾಲ ದುಪ್ಪಟ್ಟು,
- ಬಡವರಿಗೆ ಮುಂದಿನ ಮೂರು ತಿಂಗಳು ಪಡಿತರದಲ್ಲಿ ದೊರೆಯುವುದಕ್ಕಿಂತ ಹೆಚ್ಚುವರಿಯಾಗಿ ತಿಂಗಳಿಗೆ 5 ಕೆ.ಜಿ ಅಕ್ಕಿ ಅಥವಾ ಗೋಧಿಯನ್ನು ಉಚಿತವಾಗಿ ನೀಡುವ ಜೊತೆಗೆ ಆಯಾ ಪ್ರದೇಶದ ಅಗತ್ಯಕ್ಕೆ ತಕ್ಕಂತೆ ಉಚಿತವಾಗಿ 1 ಕೆ.ಜಿ. ಬೇಳೆ.
- ಜನಧನ್ ಖಾತೆ ಹೊಂದಿರುವ ಮಹಿಳೆಯ ಖಾತೆಗೆ ತಿಂಗಳಿಗೆ 500 ರೂ ನಂತೆ ಮೂರು ತಿಂಗಳು 1500 ರೂ ನೆರವು ಪಾವತಿ.
- 100ಕ್ಕಿಂತ ಕಡಿಮೆ ಉದ್ಯೋಗಿಗಳು ಇರುವ ಉದ್ದಿಮೆಗಳ ಸಿಬ್ಬಂದಿಯ ಭವಿಷ್ಯ ನಿಧಿಗೆ (ಇಪಿಎಫ್) ಕಾರ್ಮಿಕರ ಶೇಕಡ 12 ಮತ್ತು ಮಾಲೀಕರ ಶೆ 12 ಸೇರಿ ಒಟ್ಟು 24 ರಷ್ಟು ಹಣವನ್ನು 3 ತಿಂಗಳ ಕಾಲ ಕೇಂದ್ರ ಸರ್ಕಾರದಿಂದಲೇ ಪಾವತಿ.
- ಏಪ್ರಿಲ್ ಮೊದಲವಾರದಲ್ಲೇ ರೈತರ ಖಾತೆಗೆ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ 2000 ರೂ ಪಾವತಿ.
- ಬಡ ಹಿರಿಯ ನಾಗರಿಕರು, ವಿಧವೆಯರು, ಅಂಗವಿಕಲರಿಗೆ 1000 ರೂ ಎಕ್ಸ್‌ಗ್ರೇಶಿಯಾ.
- ಕೆಲಸವಿಲ್ಲದೆ ಅತಂತ್ರವಾಗಿರುವ ಕಟ್ಟದ ನಿರ್ಮಾಣ ಕಾರ್ಮಿಕರಿಗಾಗಿ ರೂ 31 ಸಾವಿರ ಕೋಟಿ ಮೊತ್ತದ ಕಲ್ಯಾಣ ನಿಧಿ ಬಳಸಿಕೊಳ್ಳಲು ರಾಜ್ಯ ಸರ್ಕಾರಗಳಿಗೆ ನಿರ್ದೇಶನ.
- ನರೇಗಾ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ದಿನಗೂಲಿ ಕೆಲಸ ಮಾಡುವ ದಿನಗೂಲಿಯನ್ನು ರೂ 182 ರಿಂದ ರೂ 202 ಕ್ಕೆ ಏರಿಕೆ ಮಾಡುವ ಜೊತೆಗೆ ಪ್ರತಿಯೊಬ್ಬರಿಗೂ ತಿಂಗಳಿಗೆ ರೂ 2000 ಹೆಚ್ಚುವರಿ ಮೊತ್ತ ಸಹಾಯಧನ.



Downloaded From: www.kpscvaani.com

## ರೈತರಿಗಾಗಿ ಅಗ್ರಿ ವಾರ್‌ರೂಮ್ ಸಹಾಯವಾಣಿ ಸ್ಥಾಪನೆ

ಲಾಕ್‌ಡೌನ್‌ದಿಂದಾಗಿ ವಾಹನ ಸಂಚಾರದ ಅಡಚಣೆ ಉಂಟಾದ ಕಾರಣ ರೈತರು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲು ಸಮಸ್ಯೆ ಎದುರಾಯಿತು. ಈ ಹಿನ್ನೆಲೆಯಲ್ಲಿ ಕೃಷಿ ಮತ್ತು ತೋಟಗಾರಿಕಾ ಇಲಾಖೆಯಿಂದ ರಾಜ್ಯದ ರೈತರ ಹಿತರಕ್ಷಣೆಗೆ ಸರ್ಕಾರವು ಮಹತ್ವದ ಕ್ರಮಗಳನ್ನು ತೆಗೆದುಕೊಂಡಿತು. ರಾಜ್ಯದ ಎಲ್ಲಾ ಎಪಿಎಂಸಿಗಳನ್ನು ತೆರೆದಿರಲು, ರೈತರು ಬೆಳೆದ ತರಕಾರಿ ಹಣ್ಣುಗಳನ್ನು ಹೆಚ್ಚುವರಿಯಾಗಿ ಖರೀದಿಸಲು ಹಾಪ್‌ಕಾಮ್ಸ್‌ಗೆ ಆದೇಶ ನೀಡಿತು. ಕೃಷಿ ಉತ್ಪನ್ನಗಳ ಸಾಗಾಣಿಕೆಗೆ ಅಡ್ಡಿ ಉಂಟುಮಾಡದಂತೆ ಪೊಲೀಸರಿಗೆ ಸೂಚನೆ ನೀಡಲಾಯಿತು. ರೈಲುಗಳ ಮೂಲಕ ಹೊರ ರಾಜ್ಯಗಳಿಗೆ ಹಣ್ಣು ತರಕಾರಿ ಸಾಗಾಟಕ್ಕೆ ಅನುಮತಿ ನೀಡಲಾಯಿತು. ವಿಜಯಪುರ, ಬಾಗಲಕೋಟೆ ಹಾಗೂ ಹುಮ್ನಾಬಾದ್‌ಗಳಲ್ಲಿ ಕೋಲ್ಡ್ ಸ್ಟೋರೇಜ್ ಅನ್ನು ಉಚಿತವಾಗಿ ಉಪಯೋಗಿಸಲು ರೈತರಿಗೆ ಅನುಮತಿ ನೀಡಲಾಯಿತು. ರಾಜ್ಯಾದ್ಯಂತ 27 ರೇಷ್ಮೆ ಮಾರುಕಟ್ಟೆಗಳನ್ನು ತೆರೆಯಲು ಮುಖ್ಯಮಂತ್ರಿಗಳು ಸೂಚನೆ ನೀಡಿದರು. ಅಲ್ಲದೆ ರೈತರ ಎಲ್ಲಾ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರದ ಮಟ್ಟದಲ್ಲಿ "ಅಗ್ರಿ ವಾರ್ ರೂಮ್" ಸಹಾಯವಾಣಿ ಸಂಖ್ಯೆ–080–22210237 ಅನ್ನು ಸ್ಥಾಪಿಸಲಾಯಿತು. ರೈತರು ಈ ಸಂಖ್ಯೆಗೆ ಕರೆ ಮಾಡಿ ತಮ್ಮ ಸಮಸ್ಯೆಗಳನ್ನು

ದ್ರಾವಣ(ಸೋಡಿಯಂ ಹೈಪೊಕ್ಲೋರೈಡ್) ವನ್ನು ಮೇಲಿಂದ ಮೇಲೆ ಸಿಂಪಡಣೆ ಮಾಡಲಾಯಿತು.

**ಎರಡು ತಿಂಗಳ ಪಡಿತರ ವಿತರಣೆ:**

ಕೊರೊನಾ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಪಡಿತರದಾರರಿಗೆ ಏಪ್ರಿಲ್ ಮೊದಲ ವಾರದಲ್ಲಿ ಎರಡು ತಿಂಗಳ ಪಡಿತರವನ್ನು ವಿತರಿಸಿತು. ಅಂತ್ಯೋದಯ ಕಾರ್ಡುದಾರರಿಗೆ ತಿಂಗಳಿಗೆ 35 ಕೆ.ಜಿ ಯಂತೆ ಎರಡು ತಿಂಗಳಿಗೆ 70 ಕೆ.ಜಿ ಅಕ್ಕಿಯನ್ನು, ಬಿಪಿಎಲ್ ಕಾರ್ಡುದಾರರಿಗೆ ತಲಾ 5 ಕೆ.ಜಿ ಅಕ್ಕಿಯಂತೆ ಎರಡು ತಿಂಗಳಿಗೆ 10 ಕೆ.ಜಿ ಅಕ್ಕಿ ಹಾಗೂ 2 ಕೆ.ಜಿ ಗೋದಿಯಂತೆ 2 ತಿಂಗಳಿಗೆ 4 ಕೆ.ಜಿ ಗೋಧಿಯನ್ನು ಉಚಿತವಾಗಿ ವಿತರಿಸಲಾಯಿತು.

ಎಪಿಎಲ್ ಕಾರ್ಡುದಾರರಿಗೆ ಒಬ್ಬ ಸದಸ್ಯರು ಇರುವ ಪಡಿತರ ಚೀಟಿಗೆ 5 ಕೆ.ಜಿ ಮತ್ತು ಒಬ್ಬರಿಗಿಂತ ಹೆಚ್ಚು ಸದಸ್ಯರು ಇರುವ ಪಡಿತರ ಚೀಟಿಗೆ 10 ಕೆ.ಜಿ ಅಕ್ಕಿಯನ್ನು 15 ರೂ ದರದಲ್ಲಿ ವಿತರಿಸಲಾಗುತಿತ್ತು. ಆದರೆ ಕೊರೊನಾ ಹಿನ್ನೆಲೆಯಲ್ಲಿ ಒಬ್ಬ ಸದಸ್ಯ ಇರುವ ಕಾರ್ಡಿಗೆ 10 ಕೆ.ಜಿ ಹಾಗು ಒಬ್ಬರಿಗಿಂತ ಹೆಚ್ಚು ಸದಸ್ಯರಿರುವ ಪಡಿತರ ಚೀಟಿಗೆ 20 ಕೆ.ಜಿ ಅಕ್ಕಿ ಹಂಚಿಕೆ



ಮಾಡಲಾಯಿತು.

**ಗ್ರಾಮದಲ್ಲೇ ಉದ್ಯೋಗ ಅವಕಾಶ:**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯವರು ಕೋವಿಡ್–19 ಸಂಬಂಧಿಸಿದಂತೆ ಕೃಷಿ ಕೂಲಿಕಾರ್ಮಿಕರು ವಲಸೆ ಹೋಗುವುದನ್ನು ತಡೆಯುವ ಸಲುವಾಗಿ ಕೂಲಿ ದರವನ್ನು ರೂ 249 ರಿಂದ 275 ಕ್ಕೆ ಹೆಚ್ಚಳ ಮಾಡಿತು. ಅಲ್ಲದೆ ರೈತರು ತಮ್ಮ ಜಮೀನುಗಳಲ್ಲಿ ತೋಟಗಾರಿಕೆ, ರೇಷ್ಮೆ, ಕೃಷಿ, ಜಲಾನಯನ, ಅರಣ್ಯ, ಪಶುಸಂಗೋಪನೆ ಕಾಮಗಾರಿಗಳನ್ನು ನರೇಗಾ ಒಗ್ಗೂಡಿಸುವಿಕೆಯ ಅಡಿಯಲ್ಲಿ ಗರಿಷ್ಠ ರೂ 2 ಲಕ್ಷ ಸಹಾಯದಡಿಯಲ್ಲಿ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿತು. ಜೊತೆಗೆ ಕಾರ್ಮಿಕರು ತಮ್ಮ ಗ್ರಾಮ ಪಂಚಾಯಿತಿಯಲ್ಲಿ ನಮೂನೆ–06 ರ ಅರ್ಜಿಯನ್ನು ಸಲ್ಲಿಸಿ ಉದ್ಯೋಗವನ್ನು ಪಡೆಯುವ ವ್ಯವಸ್ಥೆಯನ್ನು ಮಾಡಿತು.

**ಉಚಿತವಾಗಿ ಹಾಲು ವಿತರಣೆ:**

### ಸಗಟು ವಹಿವಾಟುದಾರರಿಗಾಗಿ ಸಹಾಯವಾಣಿ ಸ್ಥಾಪನೆ

**ದೇಶದಾದ್ಯಂತ ಜಾರಿಯಲ್ಲಿರುವ ದಿಗ್ಬಂಧನದ ಕಾರಣದಿಂದ ಅಗತ್ಯ ಸರಕು ಪೂರೈಕೆಗೆ ಅಡ್ಡಿ ಆಗಬಾರದೆಂದು ಕೇಂದ್ರ ಸರ್ಕಾರವು ಕಂಟ್ರೋಲ್ ರೂಮ್ ಅನ್ನು ಸ್ಥಾಪಿಸಿತು. ಸರಕುಗಳ ಸಂಗ್ರಹ, ಸಾರಿಗೆ ಮತ್ತು ವಿತರಣೆಗೆ ಸಂಬಂಧಿಸಿದಂತೆ ಎದುರಾಗುವ ತೊಂದರೆಗಳ ಬಗ್ಗೆ ಸಗಟು ವಹಿವಾಟುದಾರರು ಮತ್ತು ಇ–ಕಾಮರ್ಸ್ ಕಂಪನಿಗಳು ಯಾವುದೆ ಸಮಸ್ಯೆಗಳಿದ್ದರೆ ಸಹಾಯವಾಣಿ ಸಂಖ್ಯೆ 011–23062487 ಗೆ ಬೆಳಿಗ್ಗೆ 8 ರಿಂದ ಸಂಜೆ 6 ಗಂಟೆಯವರೆಗೆ ಕರೆ ಮಾಡಿ ತಿಳಿಸಬಹುದು.**



ಕೊರೊನಾ ಲಾಕ್‌ಡೌನ್ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಅಧಿಸೂಚಿತ ಕೊಳಗೇರಿಗಳು ಅಧಿಸೂಚಿತವಲ್ಲದ ಗುರುತಿಸಲ್ಪಟ್ಟ ಕೊಳಗೇರಿಗಳು, ಕಟ್ಟಡಗಳ ಕಾರ್ಮಿಕರ ವಸತಿ ತಾಣಗಳು, ಕಾರ್ಮಿಕರಿಗಾಗಿ ಸರ್ಕಾರದಿಂದ ಸ್ಥಾಪಿಸಲಾಗಿರುವ ಪುನರ್ವಸತಿ ಶಿಬಿರಗಳ ನಿವಾಸಿಗಳಿಗೆ ತಲಾ ಒಂದು ಲೀಟರ್ ನಂದಿನಿ ಹಾಲನ್ನು ವಿತರಿಸುವ ವ್ಯವಸ್ಥೆಗೆ ಮುಖ್ಯಮಂತ್ರಿಗಳು ಚಾಲನೆ ನೀಡಿದರು. ಮುಖ್ಯಮಂತ್ರಿಗಳೇ ಸ್ವತಃ ಬೆಂಗಳೂರಿನ ಅಶ್ವತ್ಥ ನಗರದ ಕೊಳಗೇರಿಗೆ ಭೇಟಿ ನೀಡಿ ಹಾಲಿನ ಪ್ಯಾಕೇಟ್ ವಿತರಿಸಿದರು.



**ಮಾಂಸಾಹಾರಿಗಳಿಗೆ ಸರ್ಕಾರದಿಂದ ಭರವಸೆ:**

ಕೋಳಿಮಾಂಸ ಹಾಗೂ ಕೋಳಿ ಮೊಟ್ಟೆಗಳ ಸೇವನೆಯಿಂದ ಕೊರೊನಾ ರೋಗ ಮನುಷ್ಯರಿಗೆ ಹರಡುವುದಾಗಿ ಕೆಲವು ಸಾಮಾಜಿಕ ಜಾಲತಾಣಗಳು ಮತ್ತು ಇತರೆ ಮಾಧ್ಯಮಗಳಲ್ಲಿ ಸುಳ್ಳು ವದಂತಿ ಹರಡಲಾಗಿ ಕುಕ್ಕುಟೋದ್ಯಮಕ್ಕೆ ಅಪಾರ ನಷ್ಟ ಉಂಟಾಯಿತು. ಈ ಹಿನ್ನೆಲೆಯಲ್ಲಿ ಕೋಳಿಮಾಂಸ ಮತ್ತು ಮೊಟ್ಟೆಗಳನ್ನು ಬೇಯಿಸಿ ಸೇವಿಸುವುದರಿಂದ ಮನುಷ್ಯರಲ್ಲಿ ಕೊರೊನಾ ರೋಗ ಹರಡುವುದಿಲ್ಲ ಎಂದು ರಾಷ್ಟ್ರೀಯ ಆರೋಗ್ಯ ಸಂಶೋಧನಾ ಸಂಸ್ಥೆ(ಐಸಿಎಂಆರ್) ಸಹ ಹೇಳಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ಮಾಂಸಾಹಾರಿಗಳಲ್ಲಿ ಉಂಟಾಗಿದ್ದ ಭಯವನ್ನು ಹೋಗಲಾಡಿಸಿತು. ಸರ್ಕಾರದ ಭರವಸೆಯಿಂದ ಜನರು ಕೂಡ ಕ್ರಮೇಣವಾಗಿ ಮಾಂಸಾಹಾರವನ್ನು ಸೇವಿಸಲಾರಂಭಿಸಿದರು.

ಏಪ್ರಿಲ್ 11 ರಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕೋವಿಡ್ –19 ಕುರಿತು ಹಮ್ಮಿಕೊಂಡಿದ್ದ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ವಿಡಿಯೊ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಿದ ನಂತರ ಪತ್ರಿಕಾಗೋಷ್ಠಿಯನ್ನು ಮಾಡುವ ಮೂಲಕ ಪ್ರಧಾನಿಯವರು ನೀಡಿದ ಸಲಹೆ ಸೂಚನೆಗಳ ಬಗ್ಗೆ ಮಾಹಿತಿ ನೀಡಿದರು. ಮಾಹಿತಿಯನ್ನು ನೀಡುವಾಗ ಲಾಕ್‌ಡೌನ್ ಇನ್ನೂ ಎರಡು ವಾರ ಮುಂದುವರೆಯಲಿದೆ

### ವಾಟ್ಸಪ್ ಸಹಾಯವೇದಿಕೆ

**ರಾಜ್ಯ ಸರ್ಕಾರವು ರಾಜ್ಯದ ಜನತೆಗೆ ಕೋವಿಡ್–19 ಕುರಿತ ಮಾಹಿತಿ ನೀಡಲು 8750971717 ವಾಟ್ಸಪ್ ಸಂಖ್ಯೆಯನ್ನು ಸಹಾಯವೇದಿಕೆಯಾಗಿ ಪ್ರಾರಂಭಿಸಿದೆ. ಈ ಸಂಖ್ಯೆಯನ್ನು ಸಾರ್ವಜನಿಕರು ತಮ್ಮ ಮೊಬೈಲ್‌ನಲ್ಲಿ ಸೇವ್ ಮಾಡಿಕೊಂಡು 'Hi' ಎಂದು ಕಳುಹಿಸಿದರೆ ಸಾಕು ಕೊರೊನಾದಿಂದ ನಿಮ್ಮ ಮತ್ತು ನಿಮ್ಮ ಕುಟುಂಬದವರ ರಕ್ಷಣೆ ಹೇಗೆ? ವೈದ್ಯಕೀಯ ನೆರವು ಹಾಗೂ ಸಹಾಯವನ್ನು ಎಲ್ಲಿ ಪಡೆಯಬಹುದು? ಹಾಗೂ ಕರ್ನಾಟಕದ ಇತ್ತೀಚಿನ ಕೋವಿಡ್–19 ಕುರಿತ ಅಪ್‌ಡೇಟ್‌ಗಳನ್ನು ಪಡೆದುಕೊಳ್ಳಬಹುದು. ಇದರಿಂದಾಗಿ ಕೋವಿಡ್–19 ಕುರಿತು ನಿಖರ ಮಾಹಿತಿಯನ್ನು ಪಡೆದುಕೊಳ್ಳುವ ಮೂಲಕ ತಪ್ಪು ಮಾಹಿತಿಯಿಂದ ದೂರವಿರಬಹುದು.**





Downloaded From: www.kpscvaani.com




ಎಂಬ ಸುಳಿವು ನೀಡಿದರು. ಆದರೆ ಮುಂದಿನ ಎರಡು ವಾರ ಹಿಂದಿನ ಮೂರು ವಾರಗಳಿಗಿಂತಲೂ ಭಿನ್ನವಾಗಿರುತ್ತದೆ ಎಂದು ಹೇಳಿದರು.

ಕೋವಿಡ್–19 ನಿಯಂತ್ರಣಕ್ಕೆ ನಾವು ಒಗ್ಗಟ್ಟಿನಿಂದ ಹೋರಾಡಿದರೆ ಮಾತ್ರವೇ ಯಶಸ್ವಿಯಾಗಲು ಸಾಧ್ಯ. ದೇಶದಲ್ಲಿ ಕೋವಿಡ್ ಪ್ರಕರಣಗಳ ಬೆಳವಣಿಗೆಯ ದರ ಲಾಕ್‌ಡೌನ್ ನಂತರ ಶೇ 28 ರಿಂದ ಶೇ 14 ಕ್ಕೆ ಇಳಿದಿರುವುದು ಸಮಾಧಾನದ ಸಂಗತಿಯಾಗಿದೆ ಎಂದು ಪ್ರಧಾನಿಯವರು ತಿಳಿಸಿದರು ಎಂದು ಮುಖ್ಯಮಂತ್ರಿಗಳು ಹೇಳಿದರು.

ರಾಜ್ಯದಲ್ಲಿ ಏಪ್ರಿಲ್ 11 ರಂದು 7 ಪ್ರಕರಣಗಳು ವರದಿಯಾಗಿದ್ದು, ಒಟ್ಟಾರೆ ಸಂಖ್ಯೆ 814 ಕ್ಕೆ ಏರಿದೆ. ಭಾರತದಲ್ಲಿ ಕೋವಿಡ್ –19 ಪ್ರಕರಣಗಳು ವರದಿಯಾದ ರಾಜ್ಯದಲ್ಲಿ 3 ನೇ ಸ್ಥಾನದಲ್ಲಿದ್ದ ಕರ್ನಾಟಕ ಇಂದು 11 ಸ್ಥಾನದಲ್ಲಿದೆ ಇದೆ. ಇದಕ್ಕೆ ಸಾರ್ವಜನಿಕರು ಲಾಕ್‌ಡೌನ್ ಅನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವುದೇ ಕಾರಣ. ಹಾಗಾಗಿ ಮುಂದಿನ ಅವಧಿಯಲ್ಲೂ ಕೂಡ ಕೋವಿಡ್–19 ಅನ್ನು ತಡೆಗಟ್ಟಲು ಇದೇ ರೀತಿಯಲ್ಲಿ ಸಹಕಾರ ನೀಡುವಂತೆ ಮುಖ್ಯಮಂತ್ರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಮಾನ್ಯ ಮುಖ್ಯಮಂತ್ರಿ ಅವರು ಏಪ್ರಿಲ್ 12 ರಂದು ಬೆಂಗಳೂರು ನಗರ ವೀಕ್ಷಣೆ ನಡೆಸಿ, ನಾಗರಿಕರು, ಹಣ್ಣು ತರಕಾರಿ ವ್ಯಾಪಾರಿಗಳು, ಅಂಗಡಿ ಮತ್ತು ಮಾಲ್‌ಗಳ



ಮಾಲೀಕರು, ಮತ್ತು ಕೋವಿಡ್–19 ತಡೆಯ ಕರ್ತವ್ಯ ನಿರ್ವಹಣೆಯಲ್ಲಿರುವ ಪೊಲೀಸರುಗಳನ್ನು ಮಾತನಾಡಿಸಿದರು. ಅವರಿಂದ ಕೊರೊನಾ ಸಂಬಂಧ ಆಗುತ್ತಿರುವ ಸಮಸ್ಯೆಗಳನ್ನು ತಿಳಿದುಕೊಂಡರಲ್ಲದೆ ಆ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದಾಗಿ ಕೂಡ ಭರವಸೆ ನೀಡಿದರು.

ಏಪ್ರಿಲ್ 14 ರಂದು ದೇಶದ ಜನತೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾರತವು ಕೋವಿಡ್–19 ರ ನಿಯಂತ್ರಣಕ್ಕೆ ಸರಿಯಾದ ಮಾರ್ಗವನ್ನು ಅನುಸರಿಸುತ್ತಿದೆ. ವೈರಸ್‌ನಿಂದ ಆಗುವ ಅನಾಹುತವನ್ನು ಭಾರಿ ಪ್ರಮಾಣದಲ್ಲಿ ತಪ್ಪಿಸಿದೆ. ಕೊರೊನಾ ವೈರಸ್ ದೇಶದ ಯಾವುದೇ ಭಾಗಕ್ಕೂ ಹಬ್ಬದಂತೆ ನಾವು ನೋಡಿಕೊಳ್ಳಬೇಕಾಗಿದೆ. ಲಾಕ್‌ಡೌನ್‌ನಿಂದ ದೇಶಕ್ಕೆ ಆರ್ಥಿಕ ನಷ್ಟವಾಗುತ್ತಿದೆ. ಆದರೆ ಆರ್ಥಿಕ ನಷ್ಟಕ್ಕಿಂತ ನಮ್ಮ ದೇಶದ ಜನತೆಯ ಪ್ರಾಣ ಮುಖ್ಯ. ಹಾಗಾಗಿ ಎಲ್ಲರ ಸಲಹೆಗಳನ್ನು ಪಡೆದು ಮೇ 3 ರವರೆಗೂ ಲಾಕ್‌ಡೌನ್ ವಿಸ್ತರಿಸುವ ನಿರ್ಧಾರ ಕೈಗೊಂಡಿರುವುದಾಗಿ ಪ್ರಕಟಿಸಿದರು.

ಕೋವಿಡ್–19 ತಡೆಯಲು ಶ್ರಮಿಸುತ್ತಿರುವ ವೈದರು ಮತ್ತು ವೈದ್ಯಕೇತರ ಸಿಬ್ಬಂದಿಗಳು, ಪೊಲೀಸರು ತಮ್ಮ ಆರೋಗ್ಯವನ್ನು ಪಣಕ್ಕಿಟ್ಟು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಇವರು ತಮ್ಮ ಕರ್ತವ್ಯ ನಿರ್ವಹಿಸಿ ನೆಮ್ಮದಿಯಾಗಿ ಮನೆಗೆ ಹೋಗಿ ತಮ್ಮ ಕುಟುಂಬದವರೊಂದಿಗೆ ಆರಾಮವಾಗಿ ಕಾಲ ಕಳೆಯಲು ಸಾಧ್ಯವಾಗುತ್ತಿಲ್ಲ. ಎಷ್ಟೋ ಮಂದಿ ಹಲವಾರು ದಿನಗಳಿಂದ ಮನೆಗೆ ಹೋಗಲೇ ಆಗುತ್ತಿಲ್ಲ. ಮನೆಗೆ ಹೋಗುವ ಕೆಲವರು ಹೆಂಡತಿ ಮತ್ತು ಮಕ್ಕಳಿಂದ ದೂರವಿದ್ದು ಸಾಮಾಜಿಕ ಅಂತರ ಕಾಯ್ದು ಕೊಳ್ಳುತ್ತಿದ್ದಾರೆ. ಸಮಾಜದ ಕಾಳಜಿಯ ಜೊತೆಗೆ ಕುಟುಂಬದ ಕಾಳಜಿಯನ್ನು ಕೂಡ ಇವರು ಮಾಡಬೇಕಾಗಿದೆ. ಇಂತಹ ಮನಮಿಡಿಯುವ ಪ್ರಸಂಗಗಳನ್ನು ಮಾಧ್ಯಮಗಳ ಮೂಲಕ ವೀಕ್ಷಿಸಿದ ಮುಖ್ಯಮಂತ್ರಿಗಳೇ ಅವರುಗಳಿಗೆ ಖುದ್ದು ದೂರವಾಣಿ ಕರೆ ಮಾಡಿ ಅವರ ಕರ್ತವ್ಯ ನಿಷ್ಠೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಏಪ್ರಿಲ್ 17ರ ವರೆಗೆ 1,39,986 ಪ್ರಯಾಣಿಕರ ತಪಾಸಣೆ ಮಾಡಲಾಗಿದೆ. ಅವರಲ್ಲಿ 1,31,182 ಮಂದಿಯ ಮೇಲೆ ನಿಗಾ ವಹಿಸಲಾಗಿದೆ. 14,418 ಮಾದರಿಗಳನ್ನು ಪರೀಕ್ಷಿಸಲಾಗಿದ್ದು, ಅದರಲ್ಲಿ 14,105 ಮಾದರಿಗಳು ನೆಗೆಟಿವ್ ಫಲಿತಾಂಶ ಬಂದಿದೆ. 313 ಮಂದಿ ಪಾಸಿಟಿವ್ ಪ್ರಕರಣಗಳು ವರದಿಯಾಗಿವೆ. ಅದರಲ್ಲಿ 13 ಜನರು ಸಾವನ್ನಪ್ಪಿದ್ದಾರೆ. 82 ಮಂದಿ ಗುಣಮುಖರಾಗಿದ್ದಾರೆ. ಇದರಲ್ಲಿ 6 ಪ್ರಕರಣಗಳು ಕೇರಳ ರಾಜ್ಯದವರಾಗಿದ್ದು, ಪ್ರಯಾಣದ ವೇಳೆಗೆ ಪ್ರಕರಣ ಪತ್ತೆಯಾಗಿದ್ದವು. ಹಾಗೆಯೇ ವರದಿಯಾದ ಪ್ರಕರಣಗಳ 1,130 ಪ್ರಾಥಮಿಕ ಸಂಪರ್ಕಗಳು 5,281 ದ್ವಿತೀಯ ಹಂತ ಸಂಪರ್ಕಗಳನ್ನು ಪತ್ತೆ ಹಚ್ಚಿ ಕ್ವಾರಂಟೈನ್‌ನಲ್ಲಿಡಲಾಗಿದೆ. ಕೋವಿಡ್–19 ಸೋಂಕಿತರು ಮತ್ತು ಅವರ ನಿಕಟ ಸಂಪರ್ಕ ಹೊಂದಿದವರಿಗೆ ಆಪ್ತ ಸಲಹೆ ನೀಡಲಾಗುತ್ತಿದ್ದು, ಈವರೆಗೆ 36,188 ಮಂದಿಗೆ ಆಪ್ತ ಸಲಹೆ ನೀಡಲಾಗಿದೆ.

ಹೀಗಾಗಿ ಕೊರೊನಾ ತಡೆಯುವಲ್ಲಿ ವಿವಿಧ ಇಲಾಖೆಯ ಸಿಬ್ಬಂದಿಯವರು ಹಗಲಿರುಳು ಶ್ರಮಿಸುತ್ತಿರುವುದರಿಂದ ಲಾಕ್‌ಡೌನ್ ಮುಗಿಯುವವರೆಗೆ ಅಗತ್ಯ ಸೇವೆಗಳಿಗೆ ಹೊರತು ಪಡಿಸಿ ಯಾರೂ ಕೂಡ ಮನೆಯಿಂದ ಹೊರಗೆ ಹೋಗದೇ ಮನೆಯಲ್ಲೇ ಇರುವ ಮೂಲಕ ಈ ಕೊರೊನಾ ಮಾರಿಯನ್ನು ಹೊಡೆದೋಡಿಸೋಣ. ಸರ್ಕಾರದ ಮತ್ತು ವೈದರ ಸಲಹೆಯನ್ನು ಮೀರಿ ಅನಾವಶ್ಯಕವಾಗಿ ತಿರುಗಾಡಿದರೆ ಊರು ಮಾರಿ ಕೊರೊನಾ ನಿಮ್ಮ ಹೆಗಲು ಏರಿ ನಿಮ್ಮ ಮನಗೇ ಬರುತ್ತಾಳೆ.



### ದೇಣಿಗೆ ಸಲ್ಲಿಸುವವರಿಗಾಗಿ

ಕೊರೊನಾ ನಿಯಂತ್ರಣಕ್ಕಾಗಿ ದೇಣಿಗೆ ನೀಡಲು ಇಚ್ಛಿಸುವ ಸಾರ್ವಜನಿಕರು ಕೇಂದ್ರ ಸರ್ಕಾರ **"PMCARES"** ಫಂಡ್, ರಾಜ್ಯ ಸರ್ಕಾರ ವಿಧಾನಸೌಧದ ಎಸ್.ಬಿ.ಐ ಖಾತೆ 39234923151, (ಐ ಎಫ್ ಎಸ್ ಸಿ ಕೋಡ್ **SBIN0040277**) ಕಳುಹಿಸಬಹುದು. ಚೆಕ್ ಮತ್ತು ಡಿಡಿಯನ್ನು ನಂ 235–ಎ, 2 ನೇ ಮಹಡಿ ಮುಖ್ಯಮಂತ್ರಿಗಳ ಪರಿಹಾರ ನಿಧಿ ಶಾಖೆ ವಿಧಾನಸೌಧ ಇಲ್ಲಿಗೆ ಕಳುಹಿಸಬಹುದು. ಯುಪಿಐ ಆ್ಯಪ್‌ಗಳ ಮೂಲಕವು ದೇಣಿಗೆ ನೀಡಬಹುದು. ಹೆಚ್ಚಿನ ಮಾಹಿತಿಗೆ cmrf.karnataka.gov.in ವೆಬ್ ಸೈಟ್ ನಲ್ಲಿ ಪಡೆಯಬಹುದು.



## ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಂದ ಜನತೆಗೆ ಮನವಿ

ಕೊರೊನಾ ನಮ್ಮ ತಾಳ್ಮೆಯನ್ನು ಪರೀಕ್ಷಿಸಲೆಂದೇ ಬಂದಿರುವಂತಿದೆ. ದೇಶದಾದ್ಯಂತ 21 ದಿನ ಲಾಕ್‌ಡೌನ್ ವಿಧಿಸಿದ್ದಕ್ಕೆ ಸ್ವತಃ ಪ್ರಧಾನಮಂತ್ರಿಯವರೇ ದೇಶದ ಜನತೆಯಲ್ಲಿ ಕ್ಷಮೆ ಕೇಳಿದ್ದಾರೆ. ಪ್ರಧಾನಿಯವರೇ ಕ್ಷಮೆ ಕೇಳುವ ಅನಿವಾರ್ಯತೆ ಇದೆಯೆಂದರೆ ಪರಿಸ್ಥಿತಿಯ ಗಂಭೀರತೆಯನ್ನು ರಾಜ್ಯದ ಜನರೂ ಅರ್ಥ ಮಾಡಿಕೊಳ್ಳಬೇಕು.

ರಾಜ್ಯದಲ್ಲಿ ಕರ್ಫ್ಯೂ ಜಾರಿಯಲ್ಲಿದ್ದರೂ ಕೆಲವು ನಗರ ಪ್ರದೇಶಗಳಲ್ಲಿನ ಜನರು ಅದನ್ನು ಧಿಕ್ಕರಿಸಿ ರಸ್ತೆಯಲ್ಲಿ ಓಡಾಡುತ್ತಿದ್ದಾರೆ.

ಅದನ್ನು ಬಿಟ್ಟು ಮನೆಯಲ್ಲೇ ಇದ್ದು ಲಾಕ್ ಡೌನ್ ಆದೇಶ ಪಾಲಿಸಿ. ಪೊಲೀಸರು ನಿಮ್ಮ ವೈರಿಗಳಲ್ಲ. ಅವರು ನಿಮ್ಮ ಹಿತವನ್ನೇ ಬಯಸುತ್ತಾರೆ, ಅವರು ಕಾನೂನು ಕೈಗೆತ್ತಿಕೊಳ್ಳುವ ಅನಿವಾರ್ಯತೆಯನ್ನು ಸೃಷ್ಟಿಸಬೇಡಿ ಎಂದು ರಾಜ್ಯದ ಜನತೆಯಲ್ಲಿ ಮನವಿ ಮಾಡಿದರು. ಕೊರೊನಾ ಸೋಂಕಿಗೆ ಒಳಗಾದವರ ಪ್ರಾಣ ಉಳಿಸಲು ಸತತವಾಗಿ ಕೆಲಸ ಮಾಡುತ್ತಿರುವ ವೈದ್ಯರು, ನರ್ಸ್‌ಗಳು, ಆರೋಗ್ಯ ಸಿಬ್ಬಂದಿ ಹಾಗೂ ನಾಗರಿಕ ಸೇವೆಯಲ್ಲಿ ತೊಡಗಿರುವ ಕಾರ್ಯಕರ್ತರಿಗೆ ನಾವು ನೈತಿಕ ಸ್ಥೈರ್ಯ ಹೇಳಬೇಕು.

ಹೊರಗೆ ಓಡಾಡಿ ಸೋಂಕನ್ನು ಹರಡುವ ಮೂಲಕ ಸೋಂಕಿತರ ಸಂಖ್ಯೆಯನ್ನು ಹೆಚ್ಚಿಸಿ ಆರೋಗ್ಯ ಸೇವೆಯಲ್ಲಿ ತೊಡಗಿರುವವರ ಮನೋಬಲ ಕುಗ್ಗುವಂತೆ ಮಾಡಬೇಡಿ ಎಂದು ಅವರು ಜನತೆಯಲ್ಲಿ ಮನವಿ ಮಾಡಿದರು.



Downloaded From: www.kpscvaani.com



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು



ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

## ಸಹೃದಯಿ ಸಾರ್ವಜನಿಕ ಬಂಧುಗಳಲ್ಲಿ ಮನವಿ

ಕೋವಿಡ್-19 ಎಂಬ ಪೆಡಂಭೂತವು ಇಡೀ ಪ್ರಪಂಚವನ್ನು ಕಾಡುತ್ತಿದೆ. ಇದಕ್ಕೆ ಕರ್ನಾಟಕವು ಹೊರತಾಗಿಲ್ಲ. ಇದರ ವಿರುದ್ಧ ನಾವು ಒಟ್ಟಾಗಿ ಹೋರಾಡೋಣ. ಮಾನ್ಯ ಪ್ರಧಾನ ಮಂತ್ರಿಯವರು ಕರೆ ನೀಡಿದಂತೆ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ನಮ್ಮ ಆದ್ಯ ಕರ್ತವ್ಯ. ದೇಶದ ಲಾಕ್‌ಡೌನ್ ಅವಧಿಯಲ್ಲಿ ಸಂಯಮದಿಂದ ಬದುಕೋಣ. ಮನೆ ಬಿಟ್ಟು ಹೊರಗೆ ಬರದೇ ಸಾಮಾಜಿಕ ಅಂತರವನ್ನು ಚಾಚೂ ತಪ್ಪದೇ ಕಾಯ್ದುಕೊಳ್ಳೋಣ.

ಯಾವುದೇ ಮನೆ ಮಾಲೀಕರು ತಮ್ಮ ಮನೆಗಳಲ್ಲಿ ಬಾಡಿಗೆಗೆ ವಾಸವಿರುವ ವೈದ್ಯರು/ಶುಶ್ರೂಷಕರು/ವೈದ್ಯಕೀಯ ಸಿಬ್ಬಂದಿಗಳನ್ನು ವೈರಿಯಂತೆ ನೋಡದೇ ಯಾವುದೇ ಕಾರಣಕ್ಕೂ ಅವರನ್ನು ಮನೆ ತೆರವುಗೊಳಿಸಲು ಒತ್ತಾಯಿಸಬಾರದು. ಒಂದು ವೇಳೆ ಖಾಲಿ ಮಾಡುವಂತೆ ಒತ್ತಾಯಿಸಿದರೆ ಅಂತಹ ಮನೆ ಮಾಲೀಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.

ಈ ವೈರಸ್ ಪಿಡುಗನ್ನು ತೊಲಗಿಸಲು ಸರ್ಕಾರವು ಅವಿರತವಾಗಿ ಶ್ರಮಿಸುತ್ತಿದೆ. ಯುದ್ಧೋಪಾದಿಯಲ್ಲಿ ಕ್ರಮ ಕೈಗೊಳ್ಳುತ್ತಿದೆ. ಈ ಸಂದರ್ಭದಲ್ಲಿ ನಿಮ್ಮೆಲ್ಲರ ಸಹಕಾರ ಬಹು ಮುಖ್ಯ. ಈ ವೈರಾಣು ಹರಡುವುದನ್ನು ನಿಯಂತ್ರಿಸಲು ಮಹತ್ವದ ನಿರ್ಧಾರಗಳನ್ನು ಕೈಗೊಂಡಿರುತ್ತದೆ. ಸದರಿ ರೋಗದಿಂದ ಬಳಲುತ್ತಿರುವ ಸಾರ್ವಜನಿಕರಿಗೆ ವೈದ್ಯೋಪಚಾರಗಳನ್ನು ಸರ್ಕಾರದ ವತಿಯಿಂದ ಮಾಡಿಸುತ್ತಿದ್ದು, ರೋಗವನ್ನು ಪತ್ತೆ ಹಚ್ಚಲು ಹೆಚ್ಚಿನ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿರುತ್ತದೆ.

ನೀವು ಮಾಡುವ ಆರ್ಥಿಕ ಸಹಕಾರವು ನಮಗೆ ಬಲ ನೀಡುತ್ತದೆ. ರಾಜ್ಯ ಸರ್ಕಾರದ ಈ ಕಾರ್ಯಕ್ಕಾಗಿ ದೇಣಿಗೆ ಸಲ್ಲಿಸಲು ಇಚ್ಛಿಸುವ ದಾನಿಗಳು ಸರ್ಕಾರದ ಅಧಿಕೃತ
**Chief Minister Relief Fund Covid-19 SBI ಬ್ಯಾಂಕ್ ಖಾತೆ**
**A/c No.39234923151 (IFSC-SBIN0040277, MICR-560002419)**
ಉದಾರವಾಗಿ ದೇಣಿಗೆ ಸಲ್ಲಿಸಲು ವಿನಂತಿಸುತ್ತೇನೆ.

ಹಲವಾರು ಮುಂದುವರೆದ ದೇಶಗಳು ಕೋವಿಡ್-19 ಮಹಾಮಾರಿಯನ್ನು ನಿಯಂತ್ರಿಸಲು ವಿಫಲವಾಗಿದ್ದು, ಐತಿಹಾಸಿಕ ಪರಂಪರೆಯುಳ್ಳ ಭಾರತೀಯರಾದ ನಾವುಗಳು ಈ ರೋಗವನ್ನು ನಿಯಂತ್ರಿಸಿ ಜಗತ್ತಿಗೆ ಮಾದರಿಯಾಗೋಣ. ಬನ್ನಿ ಒಟ್ಟಾಗಿ ಈ ಕೋವಿಡ್-19 ಮಾಹಾಮಾರಿಯನ್ನು ಸೋಲಿಸೋಣ. ಗೆಲುವು ಭಾರತವರ್ಷದ್ದಾಗಲಿ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" –ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ


Downloaded From: www.kpscvaani.com



# ಕಾರ್ಮಿಕರ ಹಿತರಕ್ಷಣೆಗಾಗಿ

## ಸಮರೋಪಾದಿಯಲ್ಲಿ ತೊಡಗಿರುವ ಕಾರ್ಮಿಕ ಇಲಾಖೆ

ಉಮೇಶ್ ಕೂಲಿಗೆರೆ

ಹಿಂದೆಂದು ಕಾಣದಂತಹ ಘನಘೋರ ಪರಿಸ್ಥಿತಿಯನ್ನು ಕೊರೊನಾ ಎಂಬ ಕಣ್ಣಿಗೆ ಕಾಣದ ಸೂಕ್ಷ್ಮಾಣು ಕ್ರಿಮಿ ತಂದೊಡ್ಡಿದೆ. ದೇಶವಷ್ಟೇ ಅಲ್ಲ ಜಗತ್ತೇ ಕೊರೊನಾದಿಂದ ತಲ್ಲಣಗೊಂಡು ಲಾಕ್‌ಡೌನ್, ಸೀಲ್‌ಡೌನ್ ನಂತರ ಉಪಕ್ರಮಗಳ ಮೊರೆ ಹೋಗಿದೆ. ಅನಿವಾರ್ಯವಾಗಿ ಎದುರಾಗಿರುವ ಈ ಪರಿಸ್ಥಿತಿಯಲ್ಲಿ ಜನ ಜೀವನದ ಹಾಗೂ-ಹೋಗುಗಳನ್ನು ನಿಭಾಯಿಸುವುದು ಸುಲಭದ ಮಾತಲ್ಲ. ಅಂತಹ ಬೃಹತ್ ಜವಾಬ್ದಾರಿಯನ್ನು ಹೊತ್ತುಕೊಂಡ ಕಾರ್ಮಿಕ ಇಲಾಖೆ ಪ್ರತಿದಿನ ಸುಮಾರು 1.65 ಲಕ್ಷ ಜನರಿಗೆ ಉಚಿತ ಊಟ ಒದಗಿಸುವ ಕೆಲಸ ಮಾಡುತ್ತಿದೆ.

ಪ್ರಧಾನಿ ನರೇಂದ್ರ ಮೋದಿಯವರು ಮಾರ್ಚ್ 24ರಂದು ದೇಶಾದ್ಯಂತ ಲಾಕ್‌ಡೌನ್ ಘೋಷಣೆ ಮಾಡಿದರು. ಇದರಿಂದ ಏಕಾಏಕಿ ಅಂಗಡಿಗಳು, ಸಾರಿಗೆ ಸೇವೆ, ಕೈಗಾರಿಕೆ, ವ್ಯಾಪಾರೋದ್ಯಮ, ಸೇವಾ ವಲಯ ಸೇರಿ ಎಲ್ಲವೂ ಸ್ಥಗಿತಗೊಂಡಿತ್ತು. ದಿನ ನಿತ್ಯದ ದುಡಿಮೆಯನ್ನೇ ನಂಬಿಕೊಂಡು ಬದುಕುತ್ತಿದ್ದ ಜನ ಏಕಾಏಕಿ ಕಂಗಾಲಾದರು.

ದೇಶದ ರಾಜಧಾನಿ ದೆಹಲಿಯಲ್ಲಿ ಸಾವಿರಾರು ಮಂದಿ ನೂರಾರು ಕಿಲೊಮೀಟರ್ ದೂರ ಇರುವ ತಮ್ಮ ಹುಟ್ಟೂರಿಗೆ ಕಾಲ್ನಡಿಗೆಯಲ್ಲಿ ನಡೆದು ಹೋದರು. ಇದು ವ್ಯಾಪಕ ಚರ್ಚೆಗೆ ಕಾರಣವಾಯಿತು. ಅಲ್ಲಿನ ಪರಿಸ್ಥಿತಿಯನ್ನು ಕಂಡು ತಕ್ಷಣವೇ ಎಚ್ಚೆತ್ತುಕೊಂಡ ಕರ್ನಾಟಕ ಸರ್ಕಾರ ರಾಜ್ಯದಲ್ಲಿರುವ ಕಾರ್ಮಿಕರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿತು.

> ಕಾರ್ಮಿಕ ಇಲಾಖೆಯು ಸಂಕಷ್ಟದಲ್ಲಿರುವ ಕಾರ್ಮಿಕರಿಗೆ ಊಟವನ್ನು ಸರಬರಾಜು ಮಾಡುವ ಸಲುವಾಗಿ ಶೀಘ್ರಗತಿಯಲ್ಲಿ ಸಹಾಯವಾಣಿಯನ್ನು ಆರಂಭಿಸಿ ಅದಕ್ಕೆ ದಾಸೋಹ ಎಂದು ನಾಮಕರಣ ಮಾಡಿತು. ಈ ದಾಸೋಹ ಯೋಜನೆಯು ಲಾಕ್‌ಡೌನ್ ಅವಧಿಯಲ್ಲಿ ಕಾರ್ಮಿಕರ ಹಸಿವನ್ನು ನೀಗಿಸುತ್ತಿದೆ.



ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಹಿತ ರಕ್ಷಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡು ತೆಗೆದುಕೊಂಡ ತುರ್ತು ಹಾಗೂ ಮಾನವೀಯ ಕ್ರಮಗಳಿಂದ ಕಾರ್ಮಿಕರು ನಿಟ್ಟುಸಿರು ಬಿಡುವಂತಾಯಿತು.

ರಾಜ್ಯದಲ್ಲಿ ಸರಿ ಸುಮಾರು 6.5 ಲಕ್ಷ ಖಾಸಗಿ ಉದ್ದಿಮೆಗಳಿವೆ. ಅದರಲ್ಲಿ 65 ಲಕ್ಷಕ್ಕೂ ಹೆಚ್ಚು ಮಂದಿ ಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ನಿರ್ಮಾಣ ಕ್ಷೇತ್ರದಲ್ಲಿ ಸುಮಾರು 21 ಲಕ್ಷ ಕಾರ್ಮಿಕರಿದ್ದಾರೆ. ಅವರಲ್ಲಿ ನೋಂದಾಯಿತ 15 ಲಕ್ಷ ಕಾರ್ಮಿಕರಿದ್ದಾರೆ. ಇದಲ್ಲದೆ ಚಾಲಕರು, ವೃತ್ತಿ ಆಧಾರಿತ ಉದ್ಯೋಗಿಗಳು, ಬಡವರು, ನಿರ್ವಸತಿಗರು ಲಾಕ್‌ಡೌನ್ ಸಂದರ್ಭದಲ್ಲಿ ಕಂಗಾಲಾಗಿದ್ದರು. ಕೆಲವೆಡೆ ಖಾಸಗಿ ವ್ಯಕ್ತಿಗಳು ಉಚಿತ ಆಹಾರ ಪೂರೈಕೆ ಮಾಡುತ್ತಿದ್ದರಾದರೂ ಅದು ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತಾಗಿತ್ತು.

ಆಗ ಮಧ್ಯ ಪ್ರವೇಶಿಸಿದ ಮುಖ್ಯಮಂತ್ರಿ ಯಡಿಯೂರಪ್ಪ ಅವರು, ಹಸಿದವರಿಗೆ ಆಹಾರ ಒದಗಿಸುವ ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಕ್ಷಿಪ್ರ ಅವಧಿಯಲ್ಲಿ ದಾಸೋಹ ಸಹಾಯವಾಣಿಯನ್ನು ಆಂಭಿಸಿ ಲಾಕ್‌ಡೌನ್ ಸಂದರ್ಭದಲ್ಲಿ ಕಾರ್ಮಿಕರಿಗೆ ಹಾಗೂ ಜನ ಸಾಮಾನ್ಯರಿಗೆ ಆಹಾರದ ಸಮಸ್ಯೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಯಿತು.

ಕಾರ್ಮಿಕ ಇಲಾಖೆ ಶೀಘ್ರಗತಿಯಲ್ಲಿ 155214 ಸಂಖ್ಯೆಯ ಆಹಾರ ಸಹಾಯವಾಣಿಯನ್ನು ಆರಂಭಿಸಿತು. ಅದಕ್ಕೆ ದಾಸೋಹ ಎಂಬ ಹೆಸರನ್ನು ನಾಮಕರಣ ಮಾಡಲಾಯಿತು, ಏಪ್ರಿಲ್ 1ರಿಂದ ಚಾಲ್ತಿಗೆ ಬಂದ ದಾಸೋಹ ಯೋಜನೆ ಲಾಕ್‌ಡೌನ್ ಅವಧಿ ಪೂರ್ಣಗೊಳ್ಳುವವರೆಗೂ ಕಾರ್ಮಿಕರ ಹಸಿವು ನೀಗಿಸುತ್ತಿದೆ.

ಸಹಾಯವಾಣಿಗೆ ಯಾರೇ ಕರೆ ಮಾಡಿದರು ಅವರಿದ್ದ ಜಾಗಕ್ಕೆ ಆಹಾರ ಪೂರೈಸುವ ಕೆಲಸವನ್ನು ಕಾರ್ಮಿಕ ಇಲಾಖೆ ನಿರ್ವಹಿಸುತ್ತಿದೆ. ಹಲವಾರು ಎನ್ ಜಿ ಒ ಗಳು, ಸ್ವಯಂ ಸೇವಾ ಸಂಸ್ಥೆಗಳು ಸರ್ಕಾರದ ಜೊತೆಗೆ ಈ ಕಾರ್ಯದಲ್ಲಿ ಕೈ ಜೊಡಿಸಿವೆ. ಖಾಸಗಿ ಸಂಸ್ಥೆಗಳು ಸಿದ್ಧ ಪಡಿಸಿಕೊಟ್ಟ ಆಹಾರವನ್ನು 300 ಸಿವಿಲ್ ಡಿಫೆನ್ಸ್ ಹಾಗೂ 10 ಸಾವಿರ ಸ್ವಯಂ ಸೇವಕರು ಮನೆ ಬಾಗಿಲಿಗೆ ತಲುಪಿಸುವ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಆರಂಭದಲ್ಲಿ ಬೆಂಗಳೂರಿನ 80 ಸಾವಿರ ಮಂದಿಗೆ ಊಟ ಮತ್ತು 85 ಸಾವಿರ ಮಂದಿಗೆ ದವಸ–ಧಾನ್ಯಗಳನ್ನು ತಲುಪಿಸುವ ಗುರಿಯನ್ನು ದಾಸೋಹ ಯೋಜನೆ ಹೊಂದಿತ್ತು. ಆದರೆ ಸಹಾಯವಾಣಿಗೆ ಬರುವ ಕರೆಗಳ ಮಹಾಪೂರದಿಂದ ಫಲಾನುಭವಿಗಳ ಸಂಖ್ಯೆ 2 ಲಕ್ಷ ದಾಟಿತು. ಏಕಕಾಲಕ್ಕೆ ಎರಡು ಲಕ್ಷ ಮಂದಿಗೆ ಸುದೀರ್ಘ ಅವಧಿಗೆ ಆಹಾರ ಮತ್ತು ದಿನಸಿಯನ್ನು ಪೂರೈಸಲಾಯಿತು. ಇದೊಂದು ದಾಖಲಾರ್ಹವಾದ ಕೆಲಸವಾಗಿ ನಡೆಯುತ್ತಿದೆ. ದೇಶದ ಇತರ ಯಾವ ರಾಜ್ಯಗಳಲ್ಲೂ ಈ ರೀತಿಯ ಕಾಳಜಿಗಳು ಆರಂಭದಲ್ಲಿ ಕಂಡು ಬರಲಿಲ್ಲ. ಹಸಿದವರ ಮನೆ ಬಾಗಿಲಿಗೆ ಆಹಾರ ಮತ್ತು ದಿನಸಿಗಳನ್ನು ತಲುಪಿಸಿದ್ದರಿಂದ ಕಾರ್ಮಿಕರ ವಲಸೆ ಸಮಸ್ಯೆ ತೀವ್ರವಾಗಿ ಕಾಡಲಿಲ್ಲ.

ರಾಜ್ಯದವರಷ್ಟೆ ಅಲ್ಲದೆ ಹೊರ ರಾಜ್ಯಗಳಿಂದಲೂ ನೂರಾರು ಮಂದಿ ಉದ್ಯೋಗ ಅರಸಿ ಬಂದು ಬೆಂಗಳೂರು ಹಾಗೂ ರಾಜ್ಯದ ಇತರ ಪ್ರದೇಶಗಳಲ್ಲಿ ತಂಗಿದ್ದರು. ದಿಢೀರ್ ಘೋಷಣೆಯಾದ ಲಾಕ್‌ಡೌನ್ ವಲಸಿಗ ಕಾರ್ಮಿಕರ ಭವಿಷ್ಯವನ್ನು ಕತ್ತಲಿನಲ್ಲಿಟ್ಟಿತ್ತು. ದುಡಿಮೆ ಇಲ್ಲ, ಕೈಯಲ್ಲಿ ಹಣವಿಲ್ಲ, ಆಹಾರ ಪದಾರ್ಥಗಳಿಲ್ಲ. ಹುಟ್ಟೂರಿಗೆ ವಾಪಾಸ್ ಹೋಗಲು ಸಾರಿಗೆ ವ್ಯವಸ್ಥೆಯೂ ಇಲ್ಲ. ಮುಂದಿನ ಜೀವನ ಹೇಗೆ ಎಂಬ ಚಿಂತೆಯಲ್ಲಿದ್ದಾಗ ಅವರ ನೆರವಿಗೆ ಆಪತ್ಬಾಂಧವನಂತೆ ಧಾವಿಸಿದ್ದು ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆ. ಶರಣ ಪರಂಪರೆ ಮಹತ್ತರವಾದ ದಾಸೋಹದ



ಹೆಸರನ್ನೇ ನಾಮಕರಣ ಮಾಡಿ ಕಾರ್ಮಿಕರಿಗೆ ಆಹಾರ ಒದಗಿಸುವ ಮೂಲಕ ಲಾಕ್‌ಡೌನ್ ಅವಧಿಯಲ್ಲಿ ಕಾಡುವ ಹಸಿವನ್ನು ರಾಜ್ಯ ಸರ್ಕಾರ ನಿಗಿಸಿದೆ.

ದಾಸೋಹ ಯೋಜನೆಯಲ್ಲಿ ಕಟ್ಟಡ ನಿರ್ಮಾಣ ಕ್ಷೇತ್ರದ ಕಾರ್ಮಿಕರಿಗೆ ಆಹಾರ ಒದಗಿಸುವ ಉದ್ದೇಶ ಆರಂಭವಾಗಿತ್ತಾದರೂ ಜನರ ಕಷ್ಟಗಳನ್ನು ಅರಿತ ಸರ್ಕಾರ ಸಂಘಟಿತ, ಅಸಂಘಟಿತ ವರ್ಗದ ಎಲ್ಲಾ ಕಾರ್ಮಿಕರಿಗೆ, ಜನಸಾಮಾನ್ಯರಿಗೆ ಆಹಾರ ಒದಗಿಸುವ ನಿರ್ಧಾರ ಕೈಗೊಂಡಿತ್ತು. ಸುದೀರ್ಘ ಅವಧಿಯ ಲಾಕ್‌ಡೌನ್‌ನಿಂದ ಆತಂಕಕ್ಕೆ ಒಳಗಾದ ಜನಸಾಮಾನ್ಯರಿಗೆ ದಾಸೋಹ ವರದಾನವಾಯಿತು. ನಿರ್ವಸಿತಿಗರ ಹಸಿವನ್ನೂ ನಿಗಿಸಿತ್ತು.

ಕೆಲವೊಮ್ಮೆ ಕೊರೊನಾ ವಿರುದ್ಧ ಹೋರಾಟದಲ್ಲಿ ಮುಂದಾಳಾಗಿರುವ ವೈದ್ಯಕೀಯ, ಆರಕ್ಷಕ ಸಿಬ್ಬಂದಿಗಳಿಗೂ ದಾಸೋಹ ವರದಾನವಾಯಿತು. ಇಂದಿರಾ ಕ್ಯಾಂಟಿನ್‌ಗಳನ್ನು ಖಾಸಗಿ ಸಂಸ್ಥೆಗಳ ದಾಸೋಹ ಕೊಠಡಿಗಳನ್ನು ಇದಕ್ಕಾಗಿ ಬಳಸಿಕೊಳ್ಳಲಾಯಿತು. ಗ್ರಾಮೀಣ ಭಾಗದಲ್ಲಿ ಬಿಸಿಊಟ ಯೋಜನೆಯ ಸೌಲಭ್ಯಗಳನ್ನೇ ಉಪಯೋಗಿಸಿಕೊಳ್ಳಲಾಯಿತು.

ಬೆಂಗಳೂರಿನಲ್ಲಿ 214 ಕಲ್ಯಾಣ ಮಂಟಪಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದುಕೊಂಡು ಕಾರ್ಮಿಕರಿಗೆ ತಾತ್ಕಾಲಿಕ ವಸತಿ ಸೌಲಭ್ಯ ಕಲ್ಪಿಸಲಾಯಿತು. ಅಲ್ಲಿ ವೈದ್ಯಕೀಯ ಸಿಬ್ಬಂದಿ, ರಕ್ಷಣಾ ಸಿಬ್ಬಂದಿ ಸೇರಿ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಯಿತು. ವಲಸೆ ಮತ್ತು ಕಟ್ಟಡ ಕಾರ್ಮಿಕರಿಗೆ ಅನಾರೋಗ್ಯ ಉಂಟಾದಲ್ಲಿ ಅವರ ಮಾರ್ಗದರ್ಶನಕ್ಕಾಗಿ ರಾಜ್ಯಾದ್ಯಂತ ಫೀವರ್ ಕ್ಲೀನಿಕ್ ಗಳನ್ನು ಸ್ಥಾಪಿಸಲಾಯಿತು.

**ತಕ್ಷಣದ ಅಗತ್ಯಗಳಿಗಾಗಿ ಕಾರ್ಮಿಕರ ಖಾತೆಗೆ 2000 ರೂ ಜಮೆ:**

ಲಾಕ್‌ಡೌನ್ ಸಂದರ್ಭದಲ್ಲಿ ಕಟ್ಟಡ ಹಾಗೂ ಇತರ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯ ಅನುದಾನವನ್ನು ಬಳಸಿಕೊಂಡು ಮಾಶಾಸನ ನೀಡುವ ನಿರ್ಧಾರವನ್ನು ಮುಖ್ಯಮಂತ್ರಿ ಯಡಿಯೂರಪ್ಪ ಪ್ರಕಟಿಸಿದರು. ಮೊದಲಿಗೆ ಒಂದು ಸಾವಿರ ರೂಪಾಯಿ ನೀಡುವ ನಿರ್ಧಾರ ತೆಗೆದುಕೊಳ್ಳಲಾಯಿತು, ಎರಡನೆ ಬಾರಿಗೆ ಸಭೆ ನಡೆಸಿ ಮತ್ತೊಂದು ಸಾವಿರ ನೀಡುವ ನಿರ್ಧಾರ ತೆಗೆದುಕೊಳ್ಳಲಾಯಿತು. ಇದು ಸರಿ ಸುಮಾರು 15.66 ಲಕ್ಷ ಕಾರ್ಮಿಕ ಕುಟುಂಬಗಳಿಗೆ ವರದಾನವಾಯಿತು. ಜೀವನವೇ ದುಸ್ತರವಾಗಿರುವ ಸಂದರ್ಭದಲ್ಲಿ ಸರ್ಕಾರ ನೀಡಿದ ಮಾಶಾಸನ ಜೀವನಾಸಕ್ತಿಯನ್ನು ಹೆಚ್ಚಿಸಿತು. ಯಾವುದೇ ವಿಳಂಬ ಇಲ್ಲದೆ ನೇರ ನಗದು ವರ್ಗಾವಣೆ ವ್ಯವಸ್ಥೆಯ ಮೂಲಕ ಹಣವನ್ನು ಕಾರ್ಮಿಕರ ಖಾತೆಗೆ ನೇರವಾಗಿ ತಲುಪಿಸಲಾಯಿತು.

## ದಾಸೋಹ ಸಹಾಯವಾಣಿ

**ಲಾಕ್ ಡೌನ್ ನಿಂದ ರಾಜ್ಯದ ರಾಜಧಾನಿಯಲ್ಲಿ ಉದ್ಯೋಗವೂ ಇಲ್ಲದೆ ಮತ್ತೊಂದೆಡೆ ಕೂಲಿಯೂ ಇಲ್ಲದೆ ಸಂಕಷ್ಟಕ್ಕೆ ಸಿಲುಕಿರುವ ಕೂಲಿ ಕಾರ್ಮಿಕರು ಮತ್ತು ವಲಸೆ ಕಾರ್ಮಿಕರಿಗೆ ಊಟವನ್ನು ಸರಬರಾಜು ಮಾಡುವ ನಿಟ್ಟಿನಲ್ಲಿ ಕಾರ್ಮಿಕ ಇಲಾಖೆಯು ಕಾರ್ಮಿಕರಿಗಾಗಿ ಉಚಿತ ದಾಸೋಹ ಸಹಾಯವಾಣಿ 1552141 ಯನ್ನು ಪ್ರಾರಂಭಿಸಿತು. ಈ ಪ್ರಯತ್ನ ಬಹುಶಃ ರಾಷ್ಟ್ರದಲ್ಲೇ ಪ್ರಪ್ರಥಮ. ಅನ್ನವಿಲ್ಲದೆ ಸಂಕಷ್ಟಕ್ಕೆ ಸಿಲುಕಿರುವ ಕೂಲಿಕಾರರು ಸಹಾಯವಾಣಿಗೆ ಕರೆ ಮಾಡಿದಲ್ಲಿ ಅವರು ಎಲ್ಲಿಂದ ಕರೆ ಮಾಡಿದ್ದಾರೆ? ಎಂಬುದನ್ನು ದೃಢಪಡಿಸಿಕೊಂಡು, ಅಗತ್ಯವಿರುವಷ್ಟು ಪ್ರಮಾಣದ ಊಟವನ್ನು ಒದಗಿಸಲಾಗುತ್ತಿದೆ. ಸದ್ಯ ವಲಸೆ ಕಾರ್ಮಿಕರಿಗೆ ಪ್ರತಿದಿನ 1.85 ಲಕ್ಷ ಆಹಾರ ಪೊಟ್ಟಣ ಮತ್ತು ಪಡಿತರವನ್ನು ವಿತರಣೆ ಮಾಡಲಾಗುತ್ತಿದೆ.**

## ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡುವಂತಿಲ್ಲ: ಕಾರ್ಮಿಕ ಇಲಾಖೆಯಿಂದ ಆದೇಶ

ಕೋವಿಡ್ 19 ತುರ್ತು ಪರಿಸ್ಥಿತಿಯಲ್ಲಿ ಸಂಕಷ್ಟದಲ್ಲಿರುವ ಬಹುಪಾಲು ಕಾರ್ಮಿಕರು ತಮ್ಮ ಸಂಸ್ಥೆಯವರು ಮತ್ತೆ ತಮ್ಮನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೋ ಇಲ್ಲವೋ, ತಮಗೆ ಸಂಬಳ ಸಿಗುತ್ತದೋ ಇಲ್ಲವೋ ಎಂಬ ಆತಂಕದಲ್ಲಿ ಇದ್ದಾರೆ. ಹಾಗಾಗಿ ಸಾವಾಜನಿಕ ಅಥವಾ ಖಾಸಗಿ ಸಂಸ್ಥೆಗಳು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುವ ಉದ್ಯೋಗಿಗಳನ್ನು ವಜಾಗೊಳಿಸಬಾರದು ಎಂದು ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಪಿ. ಕ್ಯಾಪ್ಟನ್ ಮಣಿವಣ್ಣನ್ ಅವರು ಆದೇಶ ಹೊರಡಿಸುವ ಮೂಲಕ ಕಾರ್ಮಿಕರ ಆತಂಕವನ್ನು ದೂರ ಮಾಡಿದ್ದಾರೆ.

ಉದ್ದಿಮೆಗಳ ಮಾಲೀಕರು ತಮ್ಮ ಉದ್ಯೋಗಿಗಳನ್ನು, ವಿಶೇಷವಾಗಿ ಕ್ಯಾಷುಯಲ್ ಕೆಲಸಗಾರರು ಅಥವಾ ಗುತ್ತಿಗೆ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಬಾರದು, ವೇತನವನ್ನು ಕಡಿತಗೊಳಸಬಾರದು ಎಂದು ಆದೇಶದಲ್ಲಿ ತಿಳಿಸಿದ್ದಾರೆ. ಅಲ್ಲದೆ ಈ ಅವಧಿಯಲ್ಲಿ ರಜೆ ಪಡೆದಿದ್ದರೂ ಕರ್ತವ್ಯದಲ್ಲಿದ್ದಾರೆ ಎಂದು ಪರಿಗಣಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.



Downloaded From: www.kpscvaani.com



ಒಂದು ವೇಳೆ ಕಾರ್ಮಿಕರು ಸೋಂಕಿಗೆ ಗುರಿಯಾಗಿದ್ದರೆ ಅವರಿಗೆ 28 ದಿನಗಳ ಕಾಲ ವೇತನ ಸಹಿತ ರಜೆ ನೀಡಬೇಕು ಎಂದು ಕಾರ್ಮಿಕ ಇಲಾಖೆ ಸುತ್ತೋಲೆ ಹೊರಡಿಸಿತು. ಲಾಕ್‌ಡೌನ್ ಅವಧಿಯಲ್ಲಿ ಸಿಬ್ಬಂದಿಗಳಿಗೆ ಪೂರ್ಣ ಪ್ರಮಾಣದ ವೇತನ ಪಾವತಿ ಮಾಡುವಂತೆ ಮತ್ತು ಯಾರನ್ನು ಕೆಲಸದಿಂದ ತೆಗೆಯದಂತೆ ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಪಿ.ಮಣಿವಣ್ಣನ್ ಆದೇಶ ಹೊರಡಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರೇ ಖುದ್ದಾಗಿ ಎಲ್ಲಾ ಉದ್ದಿಮೆಗಳ ಮಾಲೀಕರಿಗೆ ಸೂಚನೆ ನೀಡಿ ಯಾವುದೇ ಕಾರಣಕ್ಕೂ ವೇತನ ಕಡಿತ ಮಾಡಬಾರದು ಎಂದು ತಾಕೀತು ಮಾಡಿದ್ದರು. ಆದರೂ ಕೆಲವು ಸಂಸ್ಥೆಗಳ ಮಾಲೀಕರು ವೇತನ ಕಡಿತ ಮಾಡುವ ಮತ್ತು ಕೆಲಸದಿಂದ ತೆಗೆಯುವುದನ್ನು ಮುಂದುವರೆಸಿದರು. ವಿಪತ್ತು ನಿರ್ವಹಣಾ ಕಾಯ್ದೆ 2005ರ ಸೆಕ್ಷನ್69ರಡಿ ಅಧಿಕಾರವನ್ನು ಚಲಾಯಿಸಿ ಖಾಸಗಿ ಉದ್ದಿಮೆಗಳಿಗೆ ಸ್ಪಷ್ಟ ಸೂಚನೆ ನೀಡಲಾಯಿತು.



**ದುಡಿಯುವ ಕಾರ್ಮಿಕ ವರ್ಗಕ್ಕೆ ಆಕಸ್ಮಿಕವಾಗಿ ಎದುರಾದ ಆಪತ್ಕಾಲದಲ್ಲಿ ಕಾರ್ಮಿಕ ಇಲಾಖೆ ತನ್ನ ಆರ್ಥಿಕ ಇತಿಮಿತಿಯಲ್ಲಿ ಸಾಕಷ್ಟು ನೆರವು ನೀಡಿದೆ. ಕಾರ್ಮಿಕ ಸಚಿವ ಅರೆಬೈಲು ಶಿವರಾಮ್ ಅವರು ಖುದ್ದಾಗಿ ರಾಜ್ಯಾದ್ಯಂತ ಪ್ರವಾಸ ಮಾಡಿ ಕಾರ್ಮಿಕರ ಕಷ್ಟಗಳನ್ನು ಆಲಿಸುತ್ತಿದ್ದು, ಜಾಗೃತಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.**

ಕಾರ್ಮಿಕ ಇಲಾಖೆ ಕಟ್ಟಡ ಹಾಗೂ ಇತರ ನಿರ್ಮಾಣ ಕಾರ್ಮಿಕರಿಗೆ ಹಲವಾರು ರೀತಿಯ ಯೋಜನೆಗಳನ್ನು ಜಾರಿಗೊಳಿಸಿದೆ. ಈ ಕ್ಷೇತ್ರ ಹೊರತು ಪಡಿಸಿ ಚಲನಚಿತ್ರರಂಗ, ಸಾರಿಗೆ ಕ್ಷೇತ್ರ, ಕ್ಷೌರಿಕ, ದೋಬಿ ಸೇರಿದಂತೆ ಇತರೆ ಉದ್ಯೋಗ ಆಧಾರಿತ ವೃತ್ತಿಗಳ ಕಾರ್ಮಿಕರು ಹಾಗೂ ಹಲವು ರೀತಿಯ ಕಾರ್ಮಿಕರ ಸಂಕಷ್ಟಗಳಿಗೆ ನೆರವಾಗಲು ಕಾರ್ಮಿಕ ಇಲಾಖೆ ಮುಂದಾಗಿದೆ.

**ಪಿಎಫ್ ನೆರವು:**

ದುಡಿಮೆ ಇಲ್ಲದ ಕಾಲದಲ್ಲಿ ಆರ್ಥಿಕ ಸಂಕಷ್ಟ ಎದುರಾಗುವುದು ಸಾಮಾನ್ಯ. ಅದಕ್ಕಾಗಿ ಕಾರ್ಮಿಕ ಇಲಾಖೆ ಭವಿಷ್ಯ ನಿಧಿಯ ಹಣವನ್ನು ಬಳಸಿಕೊಳ್ಳಲು ಸರ್ಕಾರ ಅನುಮತಿ ನೀಡಿದೆ. ಲಾಕ್‌ಡೌನ್ ವೇಳೆ ಆರ್ಥಿಕವಾಗಿ ಸಿಲುಕಿದ ಕಾರ್ಮಿಕರು ತಮ್ಮ ಭವಿಷ್ಯ ನಿಧಿ ಖಾತೆಯಿಂದ ಮೂರು ತಿಂಗಳ ವೇತನಕ್ಕೆ ಸರಿ ಸಮವಾದ ಅಥವಾ ಪಿಎಫ್ ಖಾತೆಯಲ್ಲಿನ ಶೇ.75ರಷ್ಟು ಮೊತ್ತದಲ್ಲಿ ಯಾವುದು ಕಡಿಮೆಯೋ ಅಷ್ಟನ್ನು ಪಡೆದುಕೊಳ್ಳಬಹುದಾಗಿದೆ. ಇಪಿಎಫ್ ಇಂಡಿಯಾದ ವೆಬ್ ಸೈಟ್‌ನಲ್ಲಿ ಆನ್‌ಲೈನ್ ಸೇವೆಗಳು ವಿಭಾಗದಲ್ಲಿ ಕ್ಲೈಮ್ ಫಾರಂನ್ನು ಕ್ಲಿಕ್ ಮಾಡಿ, ವಿವರಗಳನ್ನು ದಾಖಲಿಸಿ ಕ್ಲೈಮ್ ಕಾರಣದಲ್ಲಿ ಕೋವಿಡ್-19 ಎಂದು ನಮೂದಿಸಿ ಅರ್ಜಿ ಸಲ್ಲಿಸಿದರೆ ಸಾಕು ಮೂರು ದಿನದಲ್ಲಿ ನಿಮ್ಮ ಬ್ಯಾಂಕ್ ಖಾತೆಗೆ ಹಣ ಸಂದಾಯವಾಗಲಿದೆ. ಈ ಉಪಕ್ರಮದಿಂದ ಬಹಳಷ್ಟು ಕುಟುಂಬಗಳು ಆರ್ಥಿಕ ಸಂಕಷ್ಟದಿಂದ ಪಾರಾದವು.

ದುಡಿಯುವ ಕಾರ್ಮಿಕ ವರ್ಗಕ್ಕೆ ಆಕಸ್ಮಿಕವಾಗಿ ಎದುರಾದ ಆಪತ್ಕಾಲದಲ್ಲಿ ಕಾರ್ಮಿಕ ಇಲಾಖೆ ತನ್ನ ಆರ್ಥಿಕ ಇತಿಮಿತಿಯಲ್ಲಿ ಸಾಕಷ್ಟು ನೆರವು ನೀಡಿದೆ. ಕಾರ್ಮಿಕ ಸಚಿವ ಅರೆಬೈಲು ಶಿವರಾಮ್ ಅವರು ಖುದ್ದಾಗಿ ರಾಜ್ಯಾದ್ಯಂತ ಪ್ರವಾಸ ಮಾಡಿ ಕಾರ್ಮಿಕರ ಕಷ್ಟಗಳನ್ನು ಆಲಿಸಿದರು. ಜಾಗೃತಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ತಮ್ಮ ಇಲಾಖೆಯ ವ್ಯಾಪ್ತಿಗೆ ಒಳಪಡದ ಕೆಲವು ವರ್ಗಗಳಿಗೂ ಮಾನವೀಯ ನೆಲೆಯಲ್ಲಿ ನೆರವು ನೀಡುವ ಮೂಲಕ ಕೋವಿಡ್ ಪ್ಯಾಂಡಮಿಕ್ ಸಂದರ್ಭದಲ್ಲಿ ಜನರ ಕಷ್ಟಗಳಿಗೆ ಸ್ಪಂದಿಸಿದರು.

ಇಲಾಖೆಯ ಕಾರ್ಯದರ್ಶಿ ಪಿ. ಕ್ಯಾಪ್ಟನ್. ಮಣಿವಣ್ಣನ್ ಮಾನವೀಯ ಅಂತಃಕರಣದ ಅಧಿಕಾರಿ ಎಂದೇ ಹೆಸರು ಪಡೆದಿದ್ದಾರೆ. ಲಾಕ್‌ಡೌನ್ ಸಂದರ್ಭದಲ್ಲಿ ತಮ್ಮ ಇಲಾಖೆಯ ಅಧಿಕಾರಿಗಳನ್ನು ಕಚೇರಿಗೆ ಹಾಜರಾಗುವಂತೆ ಸೂಚನೆ ನೀಡಿ ಜನರ ಕಷ್ಟಗಳಿಗೆ ಸ್ಪಂದಿಸಲು ಸಾಕಷ್ಟು ಪರಿಶ್ರಮ ಪಟ್ಟರು.

## ಕಾರ್ಮಿಕರ ಖಾತೆಗೆ 2000 ರೂ. ಜಮೆ

ಕಾರ್ಮಿಕ ಇಲಾಖೆಯು ಕರ್ನಾಟಕ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಎಲ್ಲಾ ನೋಂದಾಯಿತ ಕಟ್ಟಡ ಕಾರ್ಮಿಕರ ಬ್ಯಾಂಕ್ ಖಾತೆಗೆ 2000 ರೂಗಳನ್ನು ಡಿ.ಬಿ.ಟಿ ಮೂಲಕ ಜಮೆ ಮಾಡಿದೆ.

ಬ್ಯಾಂಕ್ ಖಾತೆಗಳಿಗೆ ಹಣ ಜಮೆಯಾಗದಿರುವ ಎಲ್ಲಾ ನೋಂದಾಯಿತ ಕಟ್ಟಡ ಕಾರ್ಮಿಕರು ಮತ್ತು ತಮ್ಮ ನೋಂದಾಯಿತ ಕಟ್ಟಡ ಕಾರ್ಮಿಕರು ತಮ್ಮ ನೋಂದಣಿ ಸಂಖ್ಯೆ, ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ ಕೋಡ್ ಮತ್ತು ಆಧಾರ್ ಸಂಖ್ಯೆಯೊಂದಿಗೆ ದಾಖಲಾತಿಗಳನ್ನು ತಮ್ಮನ್ನು ನೋಂದಾಯಿಸಿರುವ ಕಾರ್ಮಿಕ ನಿರೀಕ್ಷಕರು, ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಅಧಿಕಾರಿಗಳ ಕಚೇರಿಗೆ ಅಥವಾ ಕಾರ್ಮಿಕ ಬಂಧುಗಳ / ಮಾಲೀಕರ/ ನೋಂದಾಯಿತ ಕಾರ್ಮಿಕ ಸಂಘಗಳ ಮುಖಾಂತರ ಮಂಡಳಿಯ ಇ-ಮೇಲ್ kbocwwbcovid@gmail.com ಇಲ್ಲಿಗೆ ಕಳುಹಿಸಬಹುದು. ಅಥವಾ ಮಂಡಳಿಯ ವೆಬ್‌ಸೈಟ್ www.karbwwb.com/data.shimi ಯಲ್ಲಿ ಏಪ್ರಿಲ್ 18 ರ ಬೆಳಿಗ್ಗೆ 10 ಗಂಟೆಯಿಂದ ದಾಖಲಿಸಬಹುದು.

ಹಾಗಾಗಿ ಹಣ ಜಮೆಯಾಗದ ನೋಂದಾಯಿತ ಕಟ್ಟಡ ಕಾರ್ಮಿಕರು ತಮ್ಮ ದಾಖಲಾತಿಗಳನ್ನು ಸಲ್ಲಿಸಿ ಸರ್ಕಾರದಿಂದ 2000 ರೂ ಗಳ ನೆರವನ್ನು ಪಡೆದುಕೊಳ್ಳಬಹುದು.

ಲಾಕ್‌ಡೌನ್ ಸಂಪೂರ್ಣ ಹೊಸ ರೀತಿಯ ಸವಾಲು. ಯಾವುದೇ ಮುಂಜಾಗ್ರತೆ ನೀಡದೆ ಆಕ್ರಮಣ ನಡೆಸಿದ ಕೋವಿಡ್-19 ಸೋಂಕನ್ನು ನಿಭಾಯಿಸಲು ರಾಜ್ಯ ಸರ್ಕಾರ ಹಗಲಿರುಳು ಶ್ರಮಿಸಿತು. ಅಗತ್ಯ ಸೇವೆಗಳು ಎಂದು ಗುರುತಿಸಲಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗೃಹ ಇಲಾಖೆ, ಕಂದಾಯ ಸೇರಿದಂತೆ 10 ಇಲಾಖೆ ಅಧಿಕಾರಿಗಳು ಕೋವಿಡ್ ಸಮರದಲ್ಲಿ ಮುಂದಾಳುಗಳಾಗಿ ಜೀವ ಪಣಕ್ಕಿಟ್ಟು ಹೋರಾಟ ನಡೆಸಿದರು.

ಕೋವಿಡ್-19 ಹತ್ತಿರ ನಿಂತು ಮಾತನಾಡಲು ಅವಕಾಶ ನೀಡದ ಸಾಂಕ್ರಾಮಿಕ ರೋಗವಾಗಿದ್ದು, ಈ ಸಂದರ್ಭದಲ್ಲಿ ಜನರ ಹಸಿವು ಹಾಗೂ ಜೀವನಾವಶ್ಯಕತೆಗಳನ್ನು ಪೂರೈಸುವುದು ಸವಾಲಿನ ಕೆಲಸವೇ ಸರಿ. ಆ ಸವಾಲನ್ನು ಮುಖ್ಯಮಂತ್ರಿ ಯಡಿಯೂರಪ್ಪ ಅವರ ನೇತೃತ್ವದಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಎಲ್ಲಾ ಇಲಾಖೆ ಅಧಿಕಾರಿಗಳು ಅತ್ಯುತ್ತಮ ಸಹಯೋಗದಲ್ಲಿ ಒಗ್ಗಟ್ಟಿನ ಹೋರಾಟ ನಡೆಸಿದ್ದು ಇತಿಹಾಸ ಸ್ಮರಿಸಬೇಕಾದ ಬೆಳವಣಿಗೆ. ಸಂಪುಟದ ಸಚಿವರು ತಮ್ಮ ಜವಾಬ್ದಾರಿಗಳನ್ನು ನಿಭಾಯಿಸುವ ಮೂಲಕ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಸಾಥ್ ನೀಡಿದ್ದರು. ಆಯಾ ಜಿಲ್ಲೆಗಳ ಉಸ್ತುವಾರಿ ಸಚಿವರು ತಮ್ಮ ಜಿಲ್ಲೆಗಳ ಹಾಗೂ ಹೋಗುಗಳನ್ನು ಗಮನಿಸುವ ಜೊತೆಗೆ ಇಲಾಖೆಯವತಿಯಿಂದ ಕೋವಿಡ್ ವಿರುದ್ಧ ಸಮರದಲ್ಲಿ ಕೈಜೋಡಿಸಿದ್ದು ಜನರ ಶ್ಲಾಘನೆಗೆ ಪಾತ್ರವಾಯಿತು.

ಜನರ ಹಸಿವು ನೀಗಿಸುವುದು, ಕಾರ್ಮಿಕರಿಗೆ ವೇತನ ಕಡಿತವಾಗದಂತೆ ನೋಡಿಕೊಳ್ಳುವುದು, ರೋಗ ಹರಡದಂತೆ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವುದು, ಸೋಂಕಿತರಿಗೆ ಪ್ರಾಣಾಪಾಯವಾಗದಂತೆ ಎಚ್ಚರಿಕೆ ವಹಿಸುವುದು ಸೇರಿದಂತೆ ಎಲ್ಲಾ ಕ್ರಮಗಳಲ್ಲೂ ಕರ್ನಾಟಕ ರಾಜ್ಯ ಮಾದರಿಯಾಗಿದೆ.

ಕಾರ್ಮಿಕ ಇಲಾಖೆಯ ಕ್ರಮಗಳನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಶ್ಲಾಘಿಸಿದರೆ, ಕರ್ನಾಟಕ ಸರ್ಕಾರದ ಉಪಕ್ರಮಗಳು ಪ್ರಧಾನಿ ನರೇಂದ್ರ ಮೋದಿ ಅವರ ಮೆಚ್ಚುಗೆಗೆ ಪಾತ್ರವಾಯಿತು. ಇತಿಹಾಸದಲ್ಲೇ ಎಂದು ದಾಖಲಾಗದ ಲಾಕ್‌ಡೌನ್ ಅನ್ನು 2020ರ ವರ್ಷದಲ್ಲಿ ಕಾಣುವಂತಾಯಿತು. ಈ ಸಂದರ್ಭದಲ್ಲಿ ರಾಜ್ಯದಲ್ಲಿನ ಜನ ಸಮುದಾಯ ಹೆಚ್ಚಿನ ತೊಂದರೆಗೆ ಒಳಗಾಗದಂತೆ ಸರ್ಕಾರ ತೆಗೆದುಕೊಂಡ ಕ್ರಮಗಳು ಹೊಸ ಭರವಸೆಯನ್ನು ಮೂಡಿಸಿತ್ತು. ಮೊದಲು 21 ದಿನಗಳ ಲಾಕ್‌ಡೌನ್ ಮತ್ತೆ 16 ದಿನಕ್ಕೆ ವಿಸ್ತರಣೆಯಾಗಿದ್ದರಿಂದ ಬಹಳಷ್ಟು ರಾಜ್ಯಗಳಲ್ಲಿ ಕಷ್ಟನಷ್ಟಗಳ ಪ್ರಮಾಣ ಗಂಭೀರವಾಗಿತ್ತು. ಕಾರ್ಮಿಕ ವರ್ಗ ಜೀವನ ನಡೆಸಲಾಗದೆ ಸಂಕಷ್ಟಕ್ಕೆ ಸಿಲುಕಿ ಹತಾಶವಾಗಿತ್ತು. ಒಂದೆಡೆ ಸೋಂಕು ಅಂಟಿಕೊಳ್ಳುವ ಭಯ, ಮತ್ತೊಂದಡೆ ಹಸಿವಿನ ತೀವ್ರತೆಯಿಂದ ಬಳಲುವ ಸನ್ನಿವೇಶ ಸೃಷ್ಟಿಯಾಗಿತ್ತು. ಆದರೆ ಸರ್ಕಾರದ ಮಾನವೀಯ ಸ್ಪಂದನೆ ರಾಜ್ಯದಲ್ಲಿನ ಜನಸಾಮಾನ್ಯರನ್ನು ಹತಾಶ ಸ್ಥಿತಿಗೆ ದೂಡಲು ಬಿಡಲಿಲ್ಲ. ಸಣ್ಣಪುಟ್ಟ ಲೋಪದೋಷಗಳ ನಡುವೆಯೂ ಸಾಕಷ್ಟು ಸುಧಾರಿತ ವ್ಯವಸ್ಥೆಯನ್ನು ಜನರಿಗೆ ನೀಡಿ ಸರ್ಕಾರ ಜನರ ಪಾಲಿನ ಆಶಾಕಿರಣವಾಗಿದೆ.





Downloaded From: www.kpscvaani.com



ವಾರ್ತಾ ಇಲಾಖೆಯಲ್ಲಿ

# ಕೊರೊನಾ ವಾರ್‌ರೂಂ ಸ್ಥಾಪನೆ

**ಸಂಹಿತಾ**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ಸರ್ಕಾರದಿಂದ ಸಾರ್ವಜನಿಕರಿಗೆ ದೊರಕುವ ಸವಲತ್ತುಗಳು ಮತ್ತು, ಸೌಲಭ್ಯ ಕುರಿತು ವಿವಿಧ ಮಾಧ್ಯಮಗಳ ಮುಖಾಂತರ ಮಾಹಿತಿಯನ್ನು ನೀಡುತ್ತದೆ. ಇದಲ್ಲದೆ ರಾಜ್ಯದ ಜನರಿಗೆ ಸರ್ಕಾರದ ಎಲ್ಲಾ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಸುದ್ದಿ ಮಾಧ್ಯಮಗಳ ಮುಖಾಂತರ ತಲುಪಿಸುತ್ತದೆ.

ಸದ್ಯ ಈಗ ರಾಜ್ಯಾದ್ಯಂತ ಹರಡಿರುವ ಕೊರೊನಾ ಸಾಂಕ್ರಾಮಿಕ ರೋಗದ ತಡೆಗೆ ಸರ್ಕಾರವು ಹಲವು ಮುಂಜಾಗ್ರತಾ ಕ್ರಮಗಳನ್ನು ವಿವಿಧ ಇಲಾಖೆಗಳ ಮೂಲಕ ಹಮ್ಮಿಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಇಲಾಖೆಯು ಸರ್ಕಾರವು ಕೊರೊನಾ ತಡೆಗೆ ಹಮ್ಮಿಕೊಂಡಿರುವ ಕ್ರಮಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವುದಕ್ಕಾಗಿ ಮತ್ತು ಕೊರೊನಾ ಸೋಂಕಿನ ತಡೆಗೆ ಅನುಸರಿಸಬೇಕಾದ ಕ್ರಮಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಮುಂದಾಗಿದೆ.



ಅಗತ್ಯ ಸೇವೆಗಳ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಕೊರೊನಾ ಹರಡುವಿಕೆ ತಡೆಗಟ್ಟಲು ಪ್ರಾರಂಭದಿಂದಲೂ ಕಾರ್ಯಪ್ರವೃತ್ತವಾಗಿದೆ. ಅದಕ್ಕಾಗಿ ಆಧುನಿಕ ತಂತ್ರಜ್ಞಾನವವನ್ನು ಅಳವಡಿಸಿಕೊಂಡು ಈ ಕೆಳಕಂಡ ಸೌಲಭ್ಯಗಳ ಮೂಲಕ ಸಾರ್ವಜನಿಕರಿಗೆ ಕೊರೊನಾ ಸೋಂಕಿನ ಕುರಿತು ಜಾಗೃತಿ ಮೂಡಿಸುತ್ತಿದೆ.

**ಕೊರೊನಾ ವಾರ್‌ರೂಂ ಸ್ಥಾಪನೆ:**

ಕೊರೊನಾ ಸೋಂಕು ಕುರಿತು ನೈಜ ಮಾಹಿತಿ ಒದಗಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಹಾಗೂ ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆ ಸಹಯೋಗದಲ್ಲಿ ರಾಜ್ಯಾದ್ಯಂತ ಹತ್ತು ಸಾವಿರಕ್ಕೂ ಹೆಚ್ಚು ಸ್ವಯಂಸೇವಕರನ್ನು ನೋಂದಣಿ ಮಾಡಿಕೊಂಡು ವಾರ್‌ರೂಂ ಅನ್ನು ಸ್ಥಾಪನೆ ಮಾಡಲಾಗಿದೆ.

**ಅಧಿಕೃತ ವೆಬ್‌ಸೈಟ್ ಸ್ಥಾಪನೆ**

ಕರ್ನಾಟಕದಲ್ಲಿ ಕೋವಿಡ್– 19 ಕುರಿತಂತೆ ಅಧಿಕೃತ ಮಾಹಿತಿಯನ್ನು ನೀಡುವ ಸಲುವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ವೆಬ್‌ಸೈಟ್ ಅನ್ನು ಅಭಿವೃದ್ಧಿಪಡಿಸಿದೆ. https://covid19.karnataka.gov.in ವೆಬ್‌ಸೈಟ್‌ನಲ್ಲಿ ಮುಖ್ಯಮಂತ್ರಿಗಳ ಸಂದೇಶ, ಸಹಾಯವಾಣಿ ಮಾಹಿತಿ, ಕೊರೊನಾ ಸೋಂಕು ಮುನ್ನೆಚ್ಚರಿಕೆ ಕ್ರಮಗಳು, ಕೋವಿಡ್ –19ರ ಮಾಹಿತಿ, ಲಾಕ್‌ಡೌನ್ ವಿವರ, ಸ್ವಯಂಸೇವಕರಾಗುವವರಿಗೆ ಅವಕಾಶ ಇವೇ ಮುಂತಾದ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡುತ್ತಿದೆ.



'ಕೊರೊನಾ ಯೋಧ' ರೆಂದೇ ಕರೆಯಲ್ಪಡುವ ಈ ಸ್ವಯಂ ಸೇವಕರು ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ ನಾಲ್ಕು ಸೇವಕರು ದಿನದಲ್ಲಿ ನಾಲ್ಕು ಪಾಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಿಗೆ ವಾರ್ತಾ ಇಲಾಖೆ ವತಿಯಿಂದ ತರಬೇತಿಯನ್ನು ನೀಡುವ ಜೊತೆಗೆ ಸುರಕ್ಷಾ ಕಿಟ್ ಹಾಗೂ ಗುರುತಿನ ಚೀಟಿಯನ್ನು ನೀಡಲಾಗಿದೆ. ಕೊರೊನಾ ವಿರುದ್ಧದ ಹೋರಾಟದಲ್ಲಿ ಸರ್ಕಾರದೊಂದಿಗೆ ಕೈಜೋಡಿಸಿರುವ ಈ ಕೊರೊನಾ ಯೋಧರು ಸೋಂಕು ಕುರಿತ ವದಂತಿ ಹಾಗೂ ಅಪಪ್ರಚಾರ ತಡೆದು ಜನರಿಗೆ ನೈಜ ಮಾಹಿತಿಯನ್ನು ಒದಗಿಸುತ್ತಿದ್ದಾರೆ.



**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಎಸ್.ಎನ್.ಸಿದ್ದರಾಮಪ್ಪ ಅವರು ಖುದ್ದು ಹಲವು ಜಿಲ್ಲೆಗಳಿಗೆ ಭೇಟಿ ನೀಡುತ್ತಾ ಕೊರೊನಾ ಯೋಧರು ಹೇಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದನ್ನು ಪರಿಶೀಲಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಅವರು ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಜೊತೆಗೆ, ಜಿಲ್ಲಾಡಳಿತ ಕೈಗೊಂಡಿರುವ ಪರಿಹಾರ ಕಾರ್ಯಗಳಲ್ಲಿ ಕೊರೊನಾ ಯೋಧರು ಕೈ ಜೋಡಿಸಬೇಕು. ಸಂಕಷ್ಟದಲ್ಲಿರುವವರಿಗೆ ರೇಶನ್, ಆಹಾರ, ಔಷಧಿ ಸೇರಿದಂತೆ ಅಗತ್ಯ ವಸ್ತುಗಳ ಪೂರೈಕೆ, ಕ್ವಾರೆಂಟೈನ್‌ನಲ್ಲಿರುವ ಮನೆಗಳಿಗೆ ಅಗತ್ಯ ನೆರವು ಒದಗಿಸುವುದು ಮತ್ತು ಕ್ವಾರೆಂಟೈನ್ ವ್ಯಕ್ತಿಗಳ ಮೇಲೆ ನಿಗಾವಹಿಸುವಂತೆ ಅವರು ಕೊರೊನಾ ಯೋಧರಿಗೆ ಸೂಚನೆ ನೀಡುತ್ತಿದ್ದಾರೆ.**

ಇವರು ತಮ್ಮ ಸ್ಥಳೀಯ ಪೊಲೀಸ್ ಠಾಣೆ ಮತ್ತು ಆರೋಗ್ಯಾಧಿಕಾರಿಗಳೊಂದಿಗೆ ಈಗಾಗಲೇ ತಮ್ಮ ಪರಿಚಯವನ್ನು ಮಾಡಿಕೊಂಡು ಕೊರೊನಾ ಸೋಂಕಿನ ವಿರುದ್ಧ ತಮ್ಮ ಹೋರಾಟವನ್ನು ಪ್ರಾರಂಭಿಸಿದ್ದಾರೆ. ತಮ್ಮ ವ್ಯಾಪ್ತಿಯಲ್ಲಿ ಕೊರೊನಾ ಹರಡಿರುವ ಮಾಹಿತಿ ತಿಳಿದುಬಂದ ಕೂಡಲೇ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ತಂಡಕ್ಕೆ ವರದಿ ಮಾಡುತ್ತಿದ್ದಾರೆ. ಅಲ್ಲದೆ, ಸಾಮಾಜಿಕ ಜಾಲತಾಣ ಗುಂಪುಗಳಲ್ಲಿ, ಟಿ.ವಿ.ಮಾಧ್ಯಮದಲ್ಲಿ ಅಥವಾ ಸಮುದಾಯದಿಂದ ಬರುವ ವದಂತಿಗಳ ಕುರಿತು ಕೂಡ ತಂಡಕ್ಕೆ ಮಾಹಿತಿ ನೀಡುವ ಜೊತೆಗೆ ಜನರಿಗೆ ನೈಜ ಮಾಹಿತಿಯನ್ನು ಒದಗಿಸುತ್ತಿದ್ದಾರೆ.

**ಸಾಮಾಜಿಕ ಮಾಧ್ಯಮದ ಮೂಲಕ ಜಾಗೃತಿ:**

ಕೋವಿಡ್–19 ಕುರಿತು ಸಾರ್ವಜನಿಕರಲ್ಲಿ ಹಲವಾರು ಗೊಂದಲ, ಆತಂಕ ಮತ್ತು ಅನೇಕ ಪ್ರಶ್ನೆಗಳು ಇರುವುದು ಸಹಜ. ಸಾಮಾಜಿಕ ಮಾಧ್ಯಮಗಳಲ್ಲಿ ಕೊರೊನಾ ವೈರಾಣು ಕುರಿತು ಸಂದೇಶ ವೀಡಿಯೋಗಳ ಮಹಾಪೂರವೇ ಹರಿದುಬರುವ ಸಂದರ್ಭದಲ್ಲಿ ಯಾವುದನ್ನು ನಂಬಬೇಕು, ಯಾವುದನ್ನು ಬಿಡಬೇಕು ಎನ್ನುವುದೇ ದೊಡ್ಡ ಯಕ್ಷಪ್ರಶ್ನೆ.

ಸಾಮಾಜಿಕ ಮಾಧ್ಯಮಗಳು ಎಷ್ಟು ಉಪಯುಕ್ತವೋ ಅಷ್ಟೇ ಅಪಾಯಕಾರಿಯೂ ಹೌದು. ಸುಳ್ಳು ಸುದ್ದಿಗಳು ವೈರಲ್ ಆಗಲು ಹೆಚ್ಚು ಹೊತ್ತು ಬೇಕಾಗಿಲ್ಲ. ಹಾಗಾಗಿ ಸಾರ್ವಜನಿಕರಿಗೆ ನಿಖರ ಮತ್ತು ಅಧಿಕೃತ ಮಾಹಿತಿಯನ್ನು ಸಾರ್ವಜನಿಕರಿಗೆ ತಲುಪಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಟ್ವಿಟ್ಟರ್, ಟೆಲಿಗ್ರಾಂ ಹಾಗೂ ವಾಟ್ಸ್ ಆ್ಯಪ್ ವೇದಿಕೆಗಳನ್ನು ಸಮರ್ಪಕವಾಗಿ ದುಡಿಸಿಕೊಳ್ಳುತ್ತಿದೆ.

@DIPR_covid19 ಟ್ವಿಟ್ಟರ್ ಹ್ಯಾಂಡಲ್, covid19karnatakasahaya ಟೆಲಿಗ್ರಾಂ ಗ್ರೂಪ್‌ಗಳು 24/7 ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರಿಂದ ಬರುವ ಕುಂದುಕೊರತೆ, ಅಹವಾಲುಗಳಿಗೆ ನೇರವಾಗಿ ಅಧಿಕೃತವಾಗಿ ಪ್ರತಿಕ್ರಿಯೆ ನೀಡುವುದಲ್ಲದೆ ಅರಿವು ಮೂಡಿಸಲಾಗುತ್ತದೆ. ಡಿಐಪಿಆರ್ ಟ್ವಿಟ್ಟರ್ ಹ್ಯಾಂಡಲ್‌ಗೆ 6218 ಹಿಂಬಾಲಕರಿದ್ದು, ಪ್ರತಿ ದಿನ ಅನೇಕ ಮಂದಿ ಹಿಂಬಾಲಕರು ಸೇರ್ಪಡೆಯಾಗುತ್ತಿದ್ದಾರೆ.

ಸಾರ್ವಜನಿಕರಿಂದ ಸೂಕ್ತ ಸಲಹೆಗಳು ಬಂದಲ್ಲಿ, ಸಂಬಂಧಪಟ್ಟ ಇಲಾಖೆಗೆ ಪರಿಶೀಲಿಸಿ ಪರಿಗಣಿಸಲು ಕ್ರಮವಹಿಸಲಾಗುತ್ತಿದೆ. ಸುಳ್ಳು ಸುದ್ದಿ, ವದಂತಿಗಳ ನಿಯಂತ್ರಣ ಹಾಗೂ ಭಯವನ್ನು ನಿವಾರಿಸುವಲ್ಲಿ ಸರ್ಕಾರದ ಈ ಉಪಕ್ರಮ ಮಹತ್ವದ ಪಾತ್ರ ನಿರ್ವಹಿಸುತ್ತಿದೆ.





Downloaded From: www.kpscvaani.com



# ಕೋವಿಡ್ ಅಂಕುಶಕ್ಕೆ ಟೊಂಕ ಕಟ್ಟಿ ನಿಂತ

## ಕರ್ನಾಟಕ ರಾಜ್ಯ ಆರೋಗ್ಯ ಇಲಾಖೆ

ಚಂದ್ರಮುಖಿ

**ಯಾ**ವ ಪರಮಾಣು ಸಿಡಿತಲೆಗಳನ್ನೂ, ಹೊತ್ತೊಯ್ಯದ, ಫೈಟರ್ ಜೆಟ್‌ಗಳೂ ಇಲ್ಲದ, ಬಂದೂಕು–ಬಾಂಬುಗಳಿಲ್ಲದ ಯುದ್ಧವಿದು. ಕೆಮ್ಮು–ಸೀನುಗಳಷ್ಟೇ ಇದರ ಗದ್ದಲಗಳು. ಇನ್ನೂ ಉಲ್ಬಣಾವಸ್ಥೆ ಎಂದರೆ ಉಸಿರು ಬಿಗಿ ಹಿಡಿದೀತು. ಆದರೆ ಈ ಕೊರೊನಾ ಕದನಕ್ಕೆ ಇಡೀ ವಿಶ್ವವೇ ಮಂಡಿಯೂರಿದೆ. ಭೌತಿಕ ಜಗತ್ತಿಗೆ ಕಾಣದ ಈ ಸಣ್ಣ ಕಣ ಸಾರಿರುವ ಜೈವಿಕ ಯುದ್ಧಕ್ಕೆ ಜಗತ್ತೇ ಕಂಗಾಲಾಗಿ ಹೋಗಿದೆ. ಚೀನಾದ ವುಹಾನ್ ಎಂಬ ನಗರದಿಂದ ಹೊರಟ ಕೊರೊನಾ ಎಂಬ ಹೆಸರಿನ ವೈರಸ್ ಹರಡುತ್ತಿರುವ ಕೋವಿಡ್–19 ರೋಗಕ್ಕೆ ಅಂಕುಶ ಹಾಕಲು ಪೂರ್ತಿ ವಿಶ್ವವೇ ಲಾಕ್‌ಡೌನ್ ಮಾಡಬೇಕಾದ ಪ್ರಸಂಗಕ್ಕೆ ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳು ಸಾಕ್ಷಿಯಾದವು. ಇಂತಹದೊಂದು ಮಾರಕ ರೋಗಕ್ಕೆ ಮದ್ದು ಅರೆಯಲು ಜನರನ್ನು ಸಜ್ಜುಗೊಳಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಕೊರೊನಾ ಸೋಂಕಿತರು ಸೀನಿದರೆ ಸಿಡಿಯುವ ಕಣಗಳಿಂದ ನೂರಾರು ಮಂದಿಗೆ



ಅಟಕಾಯಿಸಿಕೊಳ್ಳುವ ವೈರಸ್ ಮನುಷ್ಯರಿಂದ ಮನುಷ್ಯರಿಗೆ ಅಂಟಿಕೊಳ್ಳದಂತೆ ತಡೆಯಲು ಸಾಮಾಜಿಕ ಅಂತರದ ಅಸ್ತ್ರವನ್ನು ಜಾರಿಗೆ ತರಲಾಯಿತು. ದಿನದ ಇಪ್ಪತ್ತನಾಲ್ಕು ಗಂಟೆ ಪಾದರಸದಂತೆ ಓಡಾಡುತ್ತಿದ್ದ ಜನರನ್ನೆಲ್ಲ ಕೊರೊನಾ ತಿಂಗಳುಗಟ್ಟಲೆ ಮನೆಯೊಳಗೆ ಬಂಧಿ ಮಾಡಿಬಿಟ್ಟಿತು. ಪೂರ್ತಿಗೆ ಪೂರ್ತಿ ಭೂಮಂಡಲವನ್ನು ಕಟ್ಟಿ ಹಾಕುವಲ್ಲಿ ಒಂದು ಯಕಶ್ಚಿತ್ ವೈರಸ್ ಯಶಸ್ವಿಯಾಗಿಬಿಟ್ಟಿತ್ತು.

### ಸಾರ್ವಜನಿಕ ತುರ್ತುಪರಿಸ್ಥಿತಿ

ಕೊರೊನಾ ವೈರಸ್ ಇಷ್ಟೊಂದು ತ್ವರಿತಗತಿಯಲ್ಲಿ ಹಬ್ಬುತ್ತಿರುವುದನ್ನು ಮನಗಂಡ ವಿಶ್ವ ಆರೋಗ್ಯ ಸಂಸ್ಥೆ (WHO) ಅಂತಾರಾಷ್ಟ್ರೀಯ ಕಳಕಳಿಯ ಸಾರ್ವಜನಿಕ ತುರ್ತುಪರಿಸ್ಥಿತಿ (PHEIC) ಯನ್ನು ಘೋಷಿಸಿದೆ. ಇಷ್ಟು ಮಾತ್ರವಲ್ಲದೆ ಮಾರ್ಚ್ 11ರಂದು ಕೋವಿಡ್–19 ಸರ್ವವ್ಯಾಪಿ ವ್ಯಾದಿ (Pandemic) ಎಂದು ಸಾರಿದೆ. ಈ ಹಿನ್ನೆಲೆಯಲ್ಲಿ ಭಾರತವೂ ಸೇರಿದಂತೆ ಎಲ್ಲ ರಾಷ್ಟ್ರಗಳೂ ಕೋವಿಡ್ ಮೇಲೆ ಕಣ್ಗಾವಲು ಹೆಚ್ಚಿಸಬೇಕು ಎಂದು WHO ಸೂಚಿಸಿದೆ. ಅದಕ್ಕಾಗಿ ಅದು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಸೇರಿದಂತೆ ಅನೇಕ ನಿಬಂಧನೆಗಳನ್ನು ಕೂಡ ಪಟ್ಟಿ ಮಾಡಿದೆ.

ಇಂತಹದೊಂದು ವೈರಸ್ ಜನರನ್ನು ಭಾದಿಸಲು ಆರಂಭಿಸಿದೆ ಎಂಬುದು ಗೊತ್ತಾಗಿದ್ದು ನವೆಂಬರ್ ತಿಂಗಳ ಹೊತ್ತಿಗೆ. ಚೀನಾದ ವಾಣಿಜ್ಯ ನಗರಿ ವುಹಾನ್‌ನಲ್ಲಿ ಇದರ ಉಗಮವಾಯಿತು ಎಂದು ಯೋಚಿಸುವಷ್ಟರಲ್ಲಿ ಅದು ವ್ಯಾಪಕವಾಗಿ ಹರಡಲು ಆರಂಭ ಮಾಡಿಬಿಟ್ಟಿತ್ತು. ಅದು ಹಬ್ಬುವ ವಿಧಾನವಾದರೂ ಹೇಗೆ ಎಂದು ಕಂಡುಕೊಳ್ಳುವ ಹೊತ್ತಿಗೆ ಇಡೀ ಚೀನಾ ಅದರ ಕಬಂಧಬಾಹುವಿನಲ್ಲಿ ಸಿಕ್ಕಿಹಾಕಿಕೊಂಡಿತ್ತು. ತಿಂಗಳೆರಡು ಕಳೆಯುವುದರೊಳಗೆ ಅದು ನೂರಾರು ಸಾವಿರಾರು ಜನರನ್ನು ಕಬಳಿಸಿಯೂ ಬಿಟ್ಟಿತ್ತು. ಚೀನಾ ಎಚ್ಚೆತ್ತುಕೊಂಡು ವೈರಸ್‌ನ್ನು ಗುಡಿಸಿ ಹಾಕುವ ಕಾರ್ಯಕ್ಕೆ ಮುಂದಾಯಿತು. ಆದರೆ ಗಡಿ–ದೇಶ–ಜನರ ಹಂಗಿಗೆ ಸಿಲುಕದ ಕೊರೊನಾ ವೈರಸ್ ತಾನು ಹುಟ್ಟಿದ ದೇಶದಿಂದ ಆಚೆಗೂ ಲಂಗುಲಗಾಮಿಲ್ಲದೆ ಹರಡತೊಡಗಿತು. ಇದು ಸ್ಪಷ್ಟವಾಗುತ್ತಲೇ ವಿಶ್ವದ ಎಲ್ಲ ರಾಷ್ಟ್ರಗಳ ನಾಯಕರು ಜಾಗೃತರಾಗುವಂತೆ ಮಾಡಿತು. ತಮ್ಮ ಉಳಿದೆಲ್ಲ ರಾಜಕೀಯ, ಯೋಜನೆ, ಕೆಲಸ ಕಾರ್ಯಗಳನ್ನು ಬಿಟ್ಟು ಕೊರೊನಾ ಮಾರಿಯನ್ನು ಹಿಮ್ಮೆಟ್ಟಿಸುವ ಕೆಲಸವನ್ನು ಆದ್ಯತೆಯಾಗಿ ಮಾಡಿಕೊಂಡರು. ವೈರಸ್ ಹರಡಲು ಮೂಲ ಮಾರ್ಗಗಳಾದ ವಿಮಾನ ಯಾನ, ಹಡಗುಯಾನಗಳನ್ನು ತತ್‌ಕ್ಷಣಕ್ಕೆ ಬಂದ್ ಮಾಡುವ ಘೋಷಣೆಗಳು ಹೊರಬಿದ್ದವು. ಆ ಹೊತ್ತಿಗೆ ಕಾಲವೂ ಮಿಂಚಿತ್ತು. ಕೊರೊನಾ ದೇಶ–ದೇಶಗಳ ಗಡಿಗಳನ್ನು ದಾಟಿ ಹೊರಟಾಗಿತ್ತು. ಮರಣಮೃದಂಗದ ಸದ್ದೂ ಜೋರಾಗಿ ಕೇಳಿಸಲು ಶುರುವಾಗಿತ್ತು.

ಹಾಗೆ ಮನುಷ್ಯನ ನಿಯಂತ್ರಣಕ್ಕೇ ಸಿಗದ ಅದು ಭಾರತದ ಗಡಿಯನ್ನೂ ದಾಟಿ ಬಂದಿದ್ದಾಗಿತ್ತು. ಸರ್ಕಾರ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಲೇಬೇಕಾಗಿತ್ತು. ಯಾಕೆಂದರೆ ಈ 'ಸೈಲೆಂಟ್ ಕಿಲ್ಲರ್' ಕೊರೊನಾ ಮನುಕುಲದ ಮಾರಣಹೋಮಕ್ಕೆ ಸರ್ವಸನ್ನದ್ಧವಾಗಿ ಬಂದಿತ್ತು. ವೈರಸ್ ಹಾವಳಿಯಿಂದಾಗಿ ದೇಶದ ಅರ್ಥ ವ್ಯವಸ್ಥೆ ಮೇಲೆ ದೊಡ್ಡ ಪೆಟ್ಟು ಬಿದ್ದಿತ್ತು. ಇಡೀ ಷೇರುಪೇಟೆ ಮಕಾಡೆ ಮಲಗಿತ್ತು. ಜಗತ್ತಿನುದ್ದಕ್ಕೂ ಎಲ್ಲ ಕಾರ್ಯಕ್ರಮಗಳೂ ರದ್ದಾದವು. ಇಂತಹ ಹೊತ್ತಿನಲ್ಲಿ ಮುಂದಾಗುವ ಮಹಾದುರಂತವನ್ನು ತಡೆಯುವುದು ಎಲ್ಲ ಸರ್ಕಾರದ ಕರ್ತವ್ಯವೂ ಆಗಿತ್ತು. ಬಹುತೇಕ ಅದೇ ಹೊತ್ತಿಗೆ ರಾಜ್ಯದ ಯಡಿಯೂರಪ್ಪ ಸರ್ಕಾರವೂ ಕೂಡ ಕೊರೊನಾ ನಿಯಂತ್ರಣವನ್ನು ಆದ್ಯತೆಯ ಕೆಲಸವಾಗಿ ಕೈಗೆತ್ತಿಕೊಂಡಿತು. ತುರ್ತಾಗಿ ಆಗಬೇಕಾದ ಕೆಲಸಗಳತ್ತ ಗಮನ ಹರಿಸಿತು. ಮಂತ್ರಿಗಳು ಮತ್ತು ಅಧಿಕಾರಿಗಳ ತಂಡ ಸರಣಿ ಸಭೆಗಳನ್ನು ನಡೆಸಿತು. ಮಾರ್ಚ್ ತಿಂಗಳ ಮೊದಲ ದಿನದಂದೇ ಅಮೆರಿಕದ ನ್ಯೂಯಾರ್ಕ್‌ನಿಂದ ದುಬೈ ಮಾರ್ಗವಾಗಿ ಬೆಂಗಳೂರಿಗೆ ಬಂದಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರಲ್ಲಿ ರೋಗದ ಲಕ್ಷಣ ಕಾಣಿಸಿಕೊಂಡಿತ್ತು. ತಕ್ಷಣ ಕಾರ್ಯಪ್ರವೃತ್ತರಾದ ವೈದ್ಯರು ರಾಜೀವ್ ಗಾಂಧಿ ಆಸ್ಪತ್ರೆಯಲ್ಲಿ ಅವರನ್ನು ಕ್ವಾರಂಟೈನ್‌ಗೆ ಒಳಪಡಿಸಿ ಚಿಕಿತ್ಸೆಯ ಹೊಣೆ ಹೊತ್ತುಕೊಂಡರು. ಕೊರೊನಾ ಮಹಾಮಾರಿಯನ್ನು ಹಿಮ್ಮೆಟ್ಟಿಸಲು ಅಲ್ಲಿಂದ

### ಕೋವಿಡ್ ಮಾಹಿತಿಗಾಗಿ ವಿಶೇಷ ಹೆಲ್ಪ್ ಲೈನ್‌ಗಳು

ಈಗಾಗಲೇ ಚಾಲ್ತಿಯಲ್ಲಿರುವ ಸಹಾಯವಾಣಿ 104 ಹೊರತುಪಡಿಸಿ ಹೊಸದಾಗಿ ಇನ್ನೂ ಎರಡು ಸಹಾಯವಾಣಿ ಸಂಖ್ಯೆಗಳನ್ನು 080–46848600 ಮತ್ತು 080–66692000 ಸೇರ್ಪಡೆ ಮಾಡಲಾಗಿದೆ. ನಾಸ್ಕಾಮ್, ಎಚ್.ಜಿ.ಎಸ್. ಮತ್ತು ಟಿಸಿಎಸ್ ನೆರವಿನಿಂದ ಇವನ್ನು ಆರಂಭಿಸಲಾಗಿದೆ. ಈ ಎರಡೂ ದೂರವಾಣಿ ಸಂಖ್ಯೆಗಳಲ್ಲಿ ಅಪರೇಟರ್‌ಗಳ ಜೊತೆಗೆ ಒಬ್ಬರು ಹಿರಿಯ ವೈದ್ಯರು ಮತ್ತು ಇಬ್ಬರು ಪಿಜಿ ಮೆಡಿಕಲ್ ವಿದ್ಯಾರ್ಥಿಗಳು ದಿನವಿಡೀ ಲಭ್ಯವಿರುತ್ತಾರೆ.

ಆರೋಗ್ಯ ಇಲಾಖೆ ಕೈಗೊಂಡಿರುವ ಇನ್ನೊಂದು ಮಹತ್ವದ ಹೆಜ್ಜೆ ಏನೆಂದರೆ ಕ್ವಾರಂಟೈನ್‌ಗೆ ಒಳಗಾಗಿರುವ ವ್ಯಕ್ತಿಗಳ ಮಾನಸಿಕ ಸಮತೋಲನವನ್ನು ಕಾಯ್ದಿಡಲು ಅವರೊಂದಿಗೆ ಮಾನಸಿಕ ತಜ್ಞರ ಆಪ್ತ ಸಮಾಲೋಚನೆ ಏರ್ಪಡಿಸಿರುವುದು. ದೂರವಾಣಿಯ ಮೂಲಕವೇ ನಡೆಸಲಾಗುವ ಈ ಆಪ್ತ ಸಮಾಲೋಚನೆಯ ಲಾಭವನ್ನು ಸಾವಿರಾರು ಜನ ಪಡೆದುಕೊಂಡಿರುವುದು ವಿಶೇಷವಾಗಿದೆ. ಎಲ್ಲ ಜಿಲ್ಲೆಗಳಲ್ಲಿಯೂ ಇದಕ್ಕಾಗಿ ವ್ಯವಸ್ಥೆ ಮಾಡಲಾಗಿತ್ತು.

### ದಟ್ಟಣೆ ತಪ್ಪಿಸಲು ಶುರು ಫಿವರ್ ಕ್ಲಿನಿಕ್




ಕೊರೊನಾ ಸೋಂಕು ಸಾಮುದಾಯಿಕವಾಗಿ ಹಬ್ಬುತ್ತಿದ್ದಂತೆ ಜಾಗೃತವಾದ ಸರ್ಕಾರ ಮುಂದಾಗಬಹುದಾದ ಸೋಂಕಿತರ ದಟ್ಟಣೆ, ಗೊಂದಲವನ್ನು ತಪ್ಪಿಸಲು ರಾಜ್ಯಾದ್ಯಂತ ಫಿವರ್ ಕ್ಲಿನಿಕ್‌ಗಳನ್ನು ಆರಂಭಿಸಲು ನಿರ್ಧರಿಸಿತು. ಈ ಹಿನ್ನೆಲೆಯಲ್ಲಿ ತಕ್ಷಣ ಕಾರ್ಯಪ್ರವೃತ್ತವಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೆಂಗಳೂರಿನ ಬಿಬಿಎಂಪಿ ವ್ಯಾಪ್ತಿಯಲ್ಲಿ ಹಾಗೂ ರಾಜ್ಯದ ನಾನಾ ಜಿಲ್ಲೆಗಳಲ್ಲಿ ಇಂತಹ ಕ್ಲಿನಿಕ್‌ಗಳನ್ನು ಆರಂಭಿಸಿದೆ. ಜ್ವರ, ಕೆಮ್ಮು ಮತ್ತು ಉಸಿರಾಟದ ತೊಂದರೆ ಇದ್ದವರು ಇಲ್ಲಿ ಪರೀಕ್ಷೆ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಾಗ ಮಾತ್ರ ರೆಫೆರಲ್ ಆಸ್ಪತ್ರೆಗೆ ಕಳುಹಿಸಲಾಗುತ್ತದೆ.





Downloaded From: www.kpscvaani.com







## ಮುದ್ರೆ ಜಾಗೃತಿ

ಕೊರೊನಾ ಸೋಂಕಿಗೆ ಒಳಗಾದವರನ್ನು ಕಡ್ಡಾಯವಾಗಿ 14 ದಿನಗಳ ಹೋಮ್ ಕ್ವಾರಂಟೈನ್‌ಗೆ ಒಳಪಡಿಸಿದವರ ಕೈಗೆ ಎರಡು ಮುದ್ರೆಗಳನ್ನು ಒತ್ತುವ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಜಾರಿಗೆ ತರಲಾಯಿತು. ಯಾವತ್ತು ಕ್ವಾರಂಟೈನ್ ಆರಂಭವಾಗಿದೆ ಮತ್ತು ಯಾವತ್ತು ಅದರ ಅವಧಿ ಮುಗಿಯುತ್ತದೆ ಎಂಬುದನ್ನು ಮುದ್ರೆಗಳಲ್ಲಿ ನಮೂದಿಸಲಾಗಿರುತ್ತದೆ. ಹೀಗೆ ಕ್ವಾರಂಟೈನ್‌ಗೆ ಒಳಗಾದವರು ಸಾರ್ವಜನಿಕವಾಗಿ ಎಲ್ಲಿಯೂ ಕಾಣಿಸಿಕೊಳ್ಳುವಂತಿಲ್ಲ. ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ನಿಟ್ಟಿನಲ್ಲಿ ಈ ಮುದ್ರೆ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಯಾವುದೇ ರೀತಿಯ ಉಲ್ಲಂಘನೆಯನ್ನು ತಡೆಯಲು ಆರೋಗ್ಯ ಇಲಾಖೆ ಬಿಬಿಎಂಪಿ ಸಹಯೋಗದಲ್ಲಿ ಆಯಾ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ವಿಚಕ್ಷಣ ದಳಗಳನ್ನು ರಚಿಸಲಾಗಿದೆ. ಈ ಬಗ್ಗೆ ಕಣ್ಣಿಡುವಂತೆ ಅಪಾರ್ಟ್‌ಮೆಂಟ್ ಸಂಘಗಳ ಕಾರ್ಯದರ್ಶಿಗಳು ಮತ್ತು ನೆರೆಹೊರೆಯವರಿಗೂ ಇಲಾಖೆ ಕೊಟ್ಟಿದೆ. ಕ್ವಾರಂಟೈನ್ ನಿಯಮಗಳು ಯಾವ ಕಾರಣಕ್ಕೂ ಉಲ್ಲಂಘನೆಯಾಗಬಾರದು ಎಂಬ ವಿಚಾರದಲ್ಲಿ ಸರ್ಕಾರ ಬಿಗಿ ಕ್ರಮಗಳನ್ನು ಕೈಗೊಂಡಿರುವುದು ಇಲ್ಲಿ ಉಲ್ಲೇಖಾರ್ಹ. ಈ ಮೇಲ್ವಿಚಾರಣೆಯನ್ನು ನಿರಂತರವಾಗಿ ನಡೆಸಿದ್ದರಿಂದ ಸೋಂಕು ಹರಡುವುದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಸಾಧ್ಯವಾಗಿದೆ.


ಶುರುವಾದ ರಾಜ್ಯ ಸರ್ಕಾರದ ಕಾರ್ಯತಂತ್ರ ನಿರಂತರವಾಯಿತು. ವೈರಸ್ ಸಾಂಕ್ರಾಮಿಕ ರೂಪ ತಳೆದು ವ್ಯಾಪಕವಾಗಿ  ಹರಡದಂತೆ ತಡೆಯುವುದು ಒಂದು ಜವಾಬ್ದಾರಿಯಾದರೆ, ಇದರ ಜೊತೆ ಜೊತೆಗೇ ಒಟ್ಟು ಆಡಳಿತ ವ್ಯವಸ್ಥೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ಇನ್ನೊಂದು ಸವಾಲಾಗಿತ್ತು. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅದನ್ನು ಹಂತ ಹಂತವಾಗಿ ಮಾಡುತ್ತ ಹೋದರು.

ವೈರಸ್ ಸೋಂಕಿನಿಂದ ಪೀಡಿತರಾದವರು ಹೆಚ್ಚಿದಂತೆ ಅವರಿಗೆ ಆ ಕ್ಷಣಕ್ಕೇ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡುವುದು, ಆಸ್ಪತ್ರೆಗಳಲ್ಲಿ ಮತ್ತು ಮನೆಗಳಲ್ಲಿ ಅವರನ್ನು ಕ್ವಾರಂಟೈನ್‌ಗೆ ಒಳಪಡಿಸುವುದು, ಅವರ ಮೇಲೆ, ಅವರ ಸಂಪರ್ಕಕ್ಕೆ ಒಳಗಾದವರ ಮೇಲೆ ನಿಗಾ ಇಡುವುದು, ಮೆಡಿಕಲ್ ಕಿಟ್, ವೆಂಟಿಲೇಟರ್, ಮಾಸ್ಕ್ ವ್ಯವಸ್ಥೆ ಕಲ್ಪಿಸುವುದು ಸೇರಿದಂತೆ ಎಲ್ಲವನ್ನೂ ಸಮರೋಪಾದಿಯಲ್ಲಿ ಮಾಡಬೇಕಾಗಿತ್ತು. ಕಾರ್ಯ ನಿರ್ವಹಣೆಯಲ್ಲಿ ಸಲ್ಪ ಎಡವಿದರೂ ವಿಪತ್ತು ಮೈಮೇಲೇ ಎರಗುವ ಸಾಧ್ಯತೆ ನಿಚ್ಚಳವಾಗಿತ್ತು. ಯಾಕೆಂದರೆ ಕೊರೊನಾ ಹೈರಾಣು ಮಾಡಿದ್ದು ಜಗತ್ತಿನ 200ಕ್ಕೂ ಅಧಿಕ ರಾಷ್ಟ್ರಗಳನ್ನು. ಈ ಹಿನ್ನೆಲೆಯಲ್ಲಿ  ಕೊರೊನಾ ವಿಚಾರದಲ್ಲಿ ತಜ್ಞರ ಅಭಿಪ್ರಾಯವನ್ನು ಕಲೆ ಹಾಕುವುದು ಅನಿವಾರ್ಯವಾಗಿತ್ತು. ಅದಕ್ಕಾಗಿಯೇ ಹಿರಿಯ ವೈದ್ಯರಾದ ಡಾ.ದೇವಿ ಶೆಟ್ಟಿ ಅವರ ನೇತೃತ್ವದಲ್ಲಿ 'ಕೊರೊನಾ ಟಾಸ್ಕ್ ಫೋರ್ಸ್' ರಚಿಸಲಾಯಿತು. ವೈರಸ್‌ನ್ನು ಹಣಿಯಲು ಬೇಕಾದ ಇಂಚಿಂಚು ವಿವರಗಳನ್ನೂ ಕಲೆ ಹಾಕಲಾಯಿತು. ಸರ್ಕಾರದ ಸಂಕಲ್ಪಕ್ಕೆ ಅಧಿಕಾರಿಗಳು, ವೈದ್ಯರೂ ಸಾಥ್ ನೀಡಿದರು. ಇದೆಲ್ಲದರ ಫಲವಾಗಿ ಮೊದಲು ಜಾರಿಗೆ ಬಂದಿದ್ದು ಲಾಕ್‌ಡೌನ್. ಬೆಂಗಳೂರು, ಮೈಸೂರು, ಚಿಕ್ಕಬಳ್ಳಾಪುರ, ಮಂಗಳೂರು ಸೇರಿದಂತೆ ಒಂಬತ್ತು ಜಿಲ್ಲೆಗಳಲ್ಲಿ ಮೊದಲು ಇದನ್ನು ಜಾರಿಗೆ ತರಲಾಯಿತು. ಈ ಜಿಲ್ಲೆಗಳಲ್ಲಿ ಅಂಗಡಿ–ಮುಂಗಟ್ಟುಗಳು, ಶಾಲೆ–ಕಾಲೇಜುಗಳು, ಸರ್ಕಾರಿ ಕಚೇರಿಗಳು ಬಂದ್ ಆದವು. ವೈರಸ್ ಸಾಮುದಾಯಿಕವಾಗಿ ವ್ಯಾಪಿಸಿಕೊಳ್ಳದಂತೆ ಈ ಎಲ್ಲ ಕ್ರಮಗಳೂ ಅನಿವಾರ್ಯವಾಗಿದ್ದವು. ಆ ಹೊತ್ತಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಇಡೀ ದೇಶದಲ್ಲಿ ಲಾಕ್ ಡೌನ್ ಘೋಷಿಸಿಬಿಟ್ಟರು. ಹಾಗಾಗಿ ಕರ್ನಾಟಕವೂ ಸೇರಿದಂತೆ ದೇಶದ ಎಲ್ಲ ರಾಜ್ಯಗಳೂ ಸ್ತಬ್ಧವಾದವು. ಹಾಗಂತ ಸರ್ಕಾರ ಕೈಕಟ್ಟಿ ಕುಳಿತುಕೊಳ್ಳುವ ಪರಿಸ್ಥಿತಿ ಇರಲಿಲ್ಲ. ಯಾವೊಂದು  ಕ್ಷಣವನ್ನೂ ಪೋಲು ಮಾಡದೇ ಕೋವಿಡ್ ಕಡಿವಾಣಕ್ಕೆ ನಿಂತ ಕಟ್ಟಾಳುವಿನಂತೆ ಸರ್ಕಾರ ಕೈಗೆತ್ತಿಕೊಂಡ ಕ್ರಮಗಳು ಮೆಚ್ಚುಗೆಗೆ ಪಾತ್ರವಾದವು.

## ವೈದ್ಯರಲ್ಲಿ ಮನೋಸ್ಥೈರ್ಯ ತುಂಬಿದ ಸಿಎಂ

**ಇಡೀ ಮನುಕುಲ ಕಂಗೆಡುವಂತೆ ಮಾಡಿದ ಕೊರೊನಾ ವೈರಸ್ ವಿರುದ್ಧ ನೇರಾನೇರ ಸಮರಕ್ಕೆ ನಿಂತು ತಮ್ಮ ಜೀವದ ಹಂಗು ತೊರೆದು ಶ್ರಮಿಸುತ್ತಿರುವವರು ವೈದ್ಯರು ಮತ್ತು ಅವರಿಗೆ ಸಾಥ್ ಕೊಟ್ಟಿರುವ ಆರೋಗ್ಯ ಸಿಬ್ಬಂದಿ. ಕ್ಷಣವೂ ಬಿಡುವಿಲ್ಲದೆ ಕೆಲಸ ಮಾಡುತ್ತಿರುವ ಅವರಲ್ಲಿ ಧೈರ್ಯ ತುಂಬುವ ಕೆಲಸವನ್ನು ಮುಖ್ಯಮಂತ್ರಿ ಯಡಿಯೂರಪ್ಪ ಮಾಡಿದ್ದಾರೆ. "ನೀವು ಇಂದು ಹಚ್ಚುತ್ತಿರುವ ವಿಶ್ವಾಸದ ದೀವಿಗೆ ನಮ್ಮ ಬೆಳಕಿನ ನಾಳೆಗಳನ್ನು ಸೃಷ್ಟಿಸಬಲ್ಲದು, ವೈದ್ಯೋ ನಾರಾಯಣೋ ಹರಿಃ" ಎಂದು ಉಲ್ಲೇಖಿಸಿರುವ ಸಿಎಂ ವೈದ್ಯರಿಗೆ ಮತ್ತು ವೈದ್ಯಕೀಯ ಸಿಬ್ಬಂದಿಗೆ 50 ಲಕ್ಷ ರೂ.ಗಳ ವಿಮಾ ಸೌಲಭ್ಯ ಹಾಗೂ ರಾಜ್ಯ ಸರ್ಕಾರವು ನೀಡುತ್ತಿರುವ ಅಗತ್ಯ ನೆರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸಿದ್ದಾರೆ. ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿ ಸಮುದಾಯದ  ಸೇವೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿರುವುದರಲ್ಲಿ ಎರಡು ಮಾತಿಲ್ಲ.**



## ಆಶಾಕಿರಣವಾದ ಮೆಡಿಕಲ್ ಕಿಟ್

ಕೊರೊನಾ ತಂದೊಡ್ಡಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಭಾರತದಲ್ಲಿ ದೊಡ್ಡ ಸವಾಲಾಗಿ ಪರಿಣಮಿಸಿರುವುದು ಮೆಡಿಕಲ್ ಕಿಟ್. ಈ ತನಕ ಇದ್ದ ಕಿಟ್‌ನಿಂದ ಸೋಂಕು ತಗುಲಿರುವುದು ಖಚಿತ ಎಂದು ಗೊತ್ತಾಗಲು ಕನಿಷ್ಠ ಆರು ತಾಸುಗಳು ಬೇಕಾಗುತ್ತದೆ. ಇಂತಹ ಕೊರತೆಯನ್ನು ನೀಗಿಸುವುದು ಅತ್ಯಗತ್ಯವಾಗಿರುವ ಸಂದರ್ಭದಲ್ಲಿಯೇ ಆಶಾಕಿರಣವಾಗಿ ಮೂಡಿ ಬಂದವರು ಪುಣೆಯ ವೈರಾಲಜಿಸ್ಟ್ ಮಿನಾಲ್ ದಖಾವೆ ಭೋಂಸ್ಲೆ. ಅವರು ಸಂಶೋಧಿಸಿರುವ ಈ ಕಿಟ್‌ನ ಹೆಸರು ಪ್ಯಾಥೋ ಡಿಟೆಕ್ಟಿವ್ ಕಿಟ್. ಕೇವಲ ಎರಡೂವರೆ ತಾಸಿನಲ್ಲಿ ಪರೀಕ್ಷಾ ವರದಿ ಲಭ್ಯ. ಕೇವಲ ಆರು ವಾರಗಳ ಶ್ರಮದಲ್ಲಿ ಮಿನಾಲ್ ಅವರ ತಂಡ ಸಿದ್ಧಪಡಿಸಿರುವ ಈ ಕಿಟ್‌ನ ಬೆಲೆ ಕೇವಲ 1200 ರೂ. ಇದರಲ್ಲಿ ನೂರಕ್ಕೂ ಅಧಿಕ ಟೆಸ್ಟ್‌ಗಳನ್ನು ಮಾಡಬಹುದು ಎಂಬುದು ಅವರ ಹೇಳಿಕೆ. ವೈರಸ್ ಸೋಂಕಿನ ಪರೀಕ್ಷೆಗಾಗಿ ಮೊನ್ನೆ ಮೊನ್ನೆವರೆಗೂ ವಿದೇಶದಿಂದ ತರಿಸಲಾಗುತ್ತಿದ್ದ ಮೆಡಿಕಲ್ ಕಿಟ್‌ನ ಬೆಲೆ ರೂ.4500.

ಮೈಲ್ಯಾಬ್ಸ್ ಡಿಸ್ಕವರಿ ಸಂಸ್ಥೆಯ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಮುಖ್ಯಸ್ಥೆಯಾಗಿರುವ ಮಿನಾಲ್ ಅವರ ಈ ಕಿಟ್‌ಗೆ ಸರ್ಕಾರ ಅನುಮತಿಯನ್ನೂ ಕೊಟ್ಟಿದೆ. ಅನುಮತಿ ಸಿಕ್ಕ ಮೊದಲ ವಾರವೇ ಅದರ 150ಕ್ಕೂ ಹೆಚ್ಚು ಕಿಟ್‌ಗಳು ಬೆಂಗಳೂರು ಸೇರಿದಂತೆ ದೇಶದ ನಾನಾ ನಗರಗಳಿಗೆ ರವಾನೆಯಾಗಿ  ಇದರ ಬಳಕೆಯೂ ಆರಂಭವಾಗಿದೆ. ವಾರಕ್ಕೆ ಒಂದು ಲಕ್ಷದಿಂದ ಎರಡು ಲಕ್ಷದ ತನಕ ಇಂತಹ ಕಿಟ್‌ಗಳನ್ನು ತಯಾರು ಮಾಡುವ ಸಾಮರ್ಥ್ಯ ಹೊಂದಿದೆ ಎಂದು ಮೊಲೆಕ್ಯುಲರ್ ಡೈಗ್ನಾಸ್ಟಿಕ್ ಕಂಪನಿ ಹೇಳಿಕೊಂಡಿದೆ. ಕೊರೊನಾ ತಂದಿರುವ ಅಂಧಕಾರದ ನಡುವೆ ಇದು ನಿಜಕ್ಕೂ ಉತ್ತೇಜನಕಾರಿ ಸುದ್ದಿಯಾಗಿದೆ.

"ಒಂದೇ ಮಾದರಿಯಲ್ಲಿ ಹತ್ತು ಬಾರಿ ಪರೀಕ್ಷೆ ನಡೆಸಿದರೂ ಫಲಿತಾಂಶ ಮಾತ್ರ ಒಂದೇ ಆಗಿರಬೇಕು. ಅದನ್ನು ಈ ಕಿಟ್ ಸಾಧಿಸಿದೆ. ಹಾಗಾಗಿ ಇದರ ಫಲಿತಾಂಶಗಳು ನಿಖರವಾಗಿವೆ," ಎಂದು ಘೋಷ್ ಹೇಳಿದ್ದಾರೆ.

ಇಂತಹದೊಂದು ಕಿಟ್ ತಯಾರಿಸಲು ಕನಿಷ್ಠ 4 ತಿಂಗಳು ಬೇಕಾಗುತ್ತದೆ. ಆದರೆ ಕೇವಲ ಆರು ವಾರಗಳ ದಾಖಲೆ ಕಾಲಾವಧಿಯಲ್ಲಿ ಇದನ್ನು ತಯಾರಿಸಿದ ಮಿನಾಲ್ ಟೀಮ್‌ಗೆ ಸಲಾಂ ಎನ್ನಲೇಬೇಕು. ತುಂಬು ಗರ್ಭಿಣಿಯಾಗಿದ್ದ ಅವರು ಈ ಮಹತ್ ಕಾರ್ಯವನ್ನು ಪೂರ್ಣಗೊಳಿಸಿದ ಬಳಿಕ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾರೆ.

"ಈ ಕಿಟ್ ಅತ್ಯಂತ ತುರ್ತಾಗಿತ್ತು. ಹಾಗಾಗಿ ಎಲ್ಲ ಒತ್ತಡಗಳನ್ನು ಮೀರಿ ಕೆಲಸ ಮಾಡಿದೆವು. ನಿಜಕ್ಕೂ ಇದೊಂದು ಸವಾಲು. ದೇಶಕ್ಕಾಗಿ ಸೇವೆ ಸಲ್ಲಿಸುವುದು ನಮಗೆ ಮುಖ್ಯವಾಗಿತ್ತು," ಎಂದು ಮಿನಾಲ್ ಹೇಳಿಕೊಂಡಿದ್ದಾರೆ.





Downloaded From: www.kpscvaani.com



# ಏಪ್ರಿಲ್ 17 ರವರೆಗೆ ಆರೋಗ್ಯ ಇಲಾಖೆಯಲ್ಲಿ ಕೈಗೊಳ್ಳಲಾಗಿರುವ ಕ್ರಮಗಳು


ರಾಜ್ಯದಲ್ಲಿ ಐದು ಖಾಸಗಿ ಪ್ರಯೋಗಾಲಯಗಳೂ ಸೇರಿದಂತೆ ಒಟ್ಟು 16 ಪ್ರಯೋಗಾಲಯಗಳಲ್ಲಿ ಕೋವಿಡ್–19 ಪತ್ತೆ ಪರೀಕ್ಷೆಗೆ ಅನುಮತಿ ದೊರೆತಿದೆ. ರಾಜ್ಯದಲ್ಲಿ 537 ಆಸ್ಪತ್ರೆಗಳನ್ನು ಐಸೋಲೇಷನ್ ಆಸ್ಪತ್ರೆಗಳಾಗಿ ಗುರುತಿಸಲಾಗಿದ್ದು, ಅದರಲ್ಲಿ 322 ಖಾಸಗಿ ಆಸ್ಪತ್ರೆಗಳು ಹಾಗೂ 206 ಸರ್ಕಾರಿ ಆಸ್ಪತ್ರೆಗಳು ಸೇರಿವೆ. ರಾಜ್ಯದಲ್ಲಿ ಕೋವಿಡ್ –19 ಚಿಕಿತ್ಸೆಗಾಗಿ 2,658 ಹಾಸಿಗೆಗಳನ್ನು ಮೀಸಲಿರಿಸಲಾಗಿದೆ. ಇದರಲ್ಲಿ ಬೆಂಗಳೂರಿನ 862 ಐಸೋಲೇಷನ್ ಬೆಡ್‌ಗಳೂ ಸೇರಿದಂತೆ 1,114 ಹಾಸಿಗೆಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ 1,544 ಹಾಸಿಗೆಗಳನ್ನು ಖಾಸಗಿ ಆಸ್ಪತೆಗಳಲ್ಲಿ ಗುರುತಿಸಲಾಗಿದೆ.

ಕೋವಿಡ್–19 ಚಿಕಿತ್ಸೆಗಾಗಿ ರಾಜ್ಯದಲ್ಲಿ 740 ವೆಂಟಿಲೇಟರ್ ಸೌಲಭ್ಯವಿರುವ ಐಸಿಯು ಬೆಡ್‌ಗಳನ್ನು ಗುರುತಿಸಲಾಗಿದೆ. ಅದರಲ್ಲಿ 234 ಹಾಸಿಗೆಗಳು ಸರ್ಕಾರಿ ಆಸ್ಪತ್ರೆಯಲ್ಲಿ ಹಾಗೂ 506 ಹಾಸಿಗೆಗಳನ್ನು ಖಾಸಗಿ ಆಸ್ಪತ್ರೆಗಳಲ್ಲಿ ಗುರುತಿಸಲಾಗಿದೆ. ಹಾಗೂ ಕೋವಿಡ್–19 ಚಿಕಿತ್ಸೆ ನೀಡುವವರಿಗೆ ಮತ್ತು ಮುನ್ನೆಚ್ಚರಿಕೆ ವಹಿಸಲು ಅಗತ್ಯವಿರುವ ಎನ್–95 ಮಾಸ್ಕ್, ಟ್ರಿಪಲ್ ಲೇಯರ್ ಮಾಸ್ಕ್, ಪಿಪಿಇ ಕಿಟ್‌ಗಳು ಮತ್ತು ಸ್ಯಾನಿಟೈಸರ್ ಬಾಟಲಿಗಳನ್ನು ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ಅಗತ್ಯಕ್ಕೆ ತಕ್ಕಂತೆ ಒದಗಿಸಲಾಗಿದೆ.

ಮಾಚ್ 31 ರವರೆಗೆ 65 ತಯಾರಕರಿಗೆ ಸ್ಯಾನಿಟೈಸರ್ ಉತ್ಪಾದನೆಗೆ ಪರವಾನಗಿ ನೀಡಲಾಗಿತ್ತು. ಇದರಲ್ಲಿ 36 ಔಷಧ ಕಂಪನಿಗಳು ಹಾಗೂ 29 ಡಿಸ್ಟಿಲರಿಗಳು ಸೇರಿವೆ. ಇವರು ಪ್ರತಿದಿನ 50,200 ಲೀಟರ್ ಸ್ಯಾನಿಟೈಸರ್ ತಯಾರಿಸಿ ಒದಗಿಸಿದ್ದಾರೆ.

**ಕೋವಿಡ್ ಆಸ್ಪತ್ರೆಯಾದ ವಿಕ್ಟೋರಿಯಾ:**

ಆರಂಭದಲ್ಲಿ ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ, ಜಯನಗರದ ಸಾರ್ವಜನಿಕ ಆಸ್ಪತ್ರೆ ಸೇರಿದಂತೆ ನಾನಾ ಆಸ್ಪತ್ರೆಗಳಲ್ಲಿ ಪ್ರತ್ಯೇಕ ವಾರ್ಡ್‌ಗಳನ್ನು ನಿರ್ಮಿಸಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಲಾಗಿತ್ತು. ಇದರಿಂದ ಸೂಕ್ತ ಚಿಕಿತ್ಸೆ ನೀಡಲು ಸಮಸ್ಯೆ ಎದುರಾದೀತು ಎಂಬುದನ್ನು ಮನಗಂಡ ಸರ್ಕಾರ 1700 ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಿರುವ ವಿಕ್ಟೋರಿಯಾ ಆಸ್ಪತ್ರೆಯನ್ನೇ ಕೋವಿಡ್–19 ವಿಶೇಷ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಯಿತು. ಅದಕ್ಕಾಗಿ ಅಲ್ಲಿ ವಿಶೇಷ ವೈದ್ಯರ ತಂಡವನ್ನು ಸಜ್ಜುಗೊಳಿಸಲಾಯಿತು. ಅಲ್ಲಿರುವ ಮೂರು ತುರ್ತು ನಿಗಾ ಘಟಕಗಳು ಕಾರ್ಯಪ್ರವೃತ್ತವಾದವು. 100ರಷ್ಟಿದ್ದ ವೆಂಟಿಲೇಟರ್‌ಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಕ್ವಾರಂಟೈನ್‌ನಲ್ಲಿದ್ದ ಕೊರೊನಾ ಸೋಂಕಿತರ ಮೇಲೆ 24






ತಾಸುಗಳ ಕಾಲ ನಿಗಾ ಇಡಲಾಯಿತು. 14 ದಿನಗಳ ಸಂಪರ್ಕ ನಿಷೇಧ ಅಕ್ಷರಶಃ ಜಾರಿಗೆ ಬರುವಂತೆ ವೈದ್ಯರ ತಂಡ ನೋಡಿಕೊಂಡಿತು. ಈ ಕಾಲಾವಧಿಯಲ್ಲಿ ಮಾನಸಿಕವಾಗಿ ಕುಗ್ಗುವ ಸಾಧ್ಯತೆ ಇರುವ ಸೋಂಕಿತರಿಗೆ ಧೈರ್ಯ ತುಂಬಲು ಮಾನಸಿಕ ತಜ್ಞರ ತಂಡವನ್ನೇ ನೇಮಕ ಮಾಡಿದ್ದು ಮತ್ತು 24 ಗಂಟೆಗಳ ಕಾಲವೂ ಚಾಲ್ತಿಯಲ್ಲಿರುವ ಸಹಾಯವಾಣಿಯನ್ನು ಜಾರಿಗೆ ತಂದಿದ್ದು ಇನ್ನೊಂದು ವಿಶೇಷ.

**ತಾಜಾ ಮಾಹಿತಿಗಾಗಿ ಯೂಟ್ಯೂಬ್ ಚಾನೆಲ್**

ಕೋವಿಡ್–19 ಗೆ ಸಂಬಂಧಿಸಿದ ಎಲ್ಲ ಮಾಹಿತಿಗಳನ್ನು ಒಳಗೊಂಡ ಯೂಟ್ಯೂಬ್ ಚಾನೆಲ್‌ನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆರಂಭಿಸಿದೆ. ಇದರ ಹೆಸರು 'ಜಾಗೃತಿ ಕರ್ನಾಟಕ'. ಇಲಾಖೆಯ ಅಧಿಕಾರಿಗಳು, ವೈದ್ಯರು ಈ ಚಾನೆಲ್‌ನಲ್ಲಿ ಪ್ರತಿದಿನವೂ ಮಾಹಿತಿಗಳನ್ನು ಹಂಚಿಕೊಳ್ಳುತ್ತಾರೆ. ಸೋಂಕು ಸಮುದಾಯಕ್ಕೆ ಹರಡುವುದನ್ನು ನಾವು ತಪ್ಪಿಸಲೇಬೇಕು. ಈ ನಿಟ್ಟಿನಲ್ಲಿ ಯೂಟ್ಯೂಬ್ ಚಾನೆಲ್ ಸಹಕಾರಿ ಎಂದು ಇಲಾಖೆಯ ಆಯುಕ್ತ ಪಂಕಜ್ ಕುಮಾರ್ ಪಾಂಡೆ ತಿಳಿಸುತ್ತಾರೆ. ರಾಜ್ಯದ ನಾನಾ ಭಾಗಗಳಲ್ಲಿರುವ ನೂರು ಕಾರ್ಯಪಡೆಗಳಿಗೆ ತರಬೇತಿ ನೀಡಲೂ ಇದನ್ನು ಬಳಸಿಕೊಳ್ಳಲಾಗುತ್ತಿದೆ.

**ಅಂಚೆ ಮೂಲಕ ಮನೆ ಬಾಗಿಲಿಗೆ ಔಷಧ ಸೇವೆ**

ಲಾಕ್‌ಡೌನ್‌ನಿಂದ ಬಹಳಷ್ಟು ಜನರು ಔಷಧಿಗಾಗಿ ತುಂಬಾ ತೊಂದರೆ ಅನುಭವಿಸುತ್ತಿರುವುದನ್ನು ಮನಗಂಡ ಸರ್ಕಾರವು ಪೋಸ್ಟ್ ಮಾಸ್ಟರ್ ಮೂಲಕ ಔಷಧಿಯನ್ನು ಅವರ ಮನೆ ಬಾಗಿಲಿಗೆ ತಲುಪಿಸುವ ಸೌಲಭ್ಯವನ್ನು ಪ್ರಾರಂಭಿಸಿತು. ಈ ಸೇವೆಯನ್ನು ಪಡೆಯುವವರು ನಗರದಲ್ಲಿ ಇರುವ ತಮ್ಮ ಪರಿಚಯಸ್ಥರ ಮೊಬೈಲ್‌ಗೆ ಔಷಧಿಯ ವಿವರವನ್ನು ಕಳುಹಿಸಬೇಕು. ಈ ದಾಖಲೆಯ ಮೇಲೆ ಅವರು ಸಂಬಂಧಪಟ್ಟ ಔಷಧಾಲಯಗಳಿಂದ ಔಷಧಗಳನ್ನು ಖರೀದಿಸಿ ಅಂಚೆ ಇಲಾಖೆಯ ಮೂಲಕ ಸ್ಪೀಡ್ ಪೋಸ್ಟ್ ಮಾಡಬಹುದು. ಪೋಸ್ಟ್ ಮಾಸ್ಟರುಗಳು ನಿಮ್ಮ ಮನೆ ಬಾಗಿಲಿಗೆ ಔಷಧಿಯನ್ನು ತಲುಪಿಸುತ್ತಾರೆ. ಆದರೆ ಕವರಿನ ಮೇಲೆ ದಪ್ಪ ಅಕ್ಷರದಲ್ಲಿ ಔಷಧ ಎಂದು ನಮೂದಿಸಬೇಕು.

ವೈದ್ಯೋ ನಾರಾಯಣೋ ಹರಿ ಎಂದು ಹೇಳುತ್ತೇವೆ. ವೈದ್ಯನು ಸಾಕ್ಷಾತ್ ನಾರಾಯಣನೆಂದೂ, ರಕ್ಷಕನೆಂದೂ, ದೇವರ ಸಮಾನನೆಂದೂ ಅರ್ಥ. ಸರ್ವ ಕಾಲದಲ್ಲೂ ಸರ್ವಾವಸ್ಥೆಯಲ್ಲೂ ರಕ್ಷಕನಾಗಿ ನಮ್ಮೆಲ್ಲರನ್ನು ರಕ್ಷಿಸುತ್ತಿರುವ ವೈದ್ಯರಿಗೆ ನಾವು ಸದಾ ಚಿರಋಣಿಗಳಾಗಿರಬೇಕು. ಕೊರೊನಾ ಮಹಾಮಾರಿ ರೋಗ ತಮಗೂ ಹರಡಬಹುದಿದ್ದರೂ ಕೂಡ ಸಮರೋಪಾದಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು ಮತ್ತು ವೈದ್ಯಕೇತರ ಸಿಬ್ಬಂದಿಗಳಿಗೆ ನಾವು ಮಾಡುವ ಸಹಾಯವೆಂದರೆ, ಅದು ನಾವು ಮನೆಯಲ್ಲೇ ಸುರಕ್ಷಿತವಾಗಿ ಇರುವುದು. ■

## ಆಯುಷ್ ಇಲಾಖೆಯಿಂದ ಸ್ಪಷ್ಟನೆ


ಕೊರೊನಾ ಸೋಂಕಿಗೆ ಯಾವುದೇ ವೈದ್ಯ ಪದ್ಧತಿಯಲ್ಲೂ ಔಷಧಿಯು ಇರುವುದಿಲ್ಲ. ಆದಾಗ್ಯೂ ಕೆಲವರು ಗಿಡಮೂಲಿಕೆಗಳಿಂದ ಇದಕ್ಕೆ ಔಷಧ ಕಂಡುಹಿಡಿಯಲಾಗಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಇದಕ್ಕೆ ಯಾವುದೇ ಆಧಾರವಿಲ್ಲ ಎಂದು ಆಯುಷ್ ಇಲಾಖೆ ಸ್ಪಷ್ಟಪಡಿಸಿದೆ. ಆಯುರ್ವೇದ, ಯೋಗ, ಸಿದ್ಧ, ಯುನಾನಿಗಳಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಸುವ ರಸಾಯನಗಳು, ಗಿಡಮೂಲಿಕೆ ಕಷಾಯಗಳಿವೆ. ಅದೇ ರೀತಿ ಹೋಮಿಯೋಪಥಿಯಲ್ಲೂ ಶ್ವಾಸಕೋಶಗಳ ಸದೃಢ ಆರೋಗ್ಯಕ್ಕಾಗಿ ಔಷಧಗಳಿವೆ. ಆದರೆ ಇವುಗಳನ್ನು ಕೊರೊನಾ ಸೋಂಕು ನಿವಾರಕ ಔಷಧಿಗಳಲ್ಲ ಎಂದು ಆಯುಷ್ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರೋಗ್ಯ ಸೇತು ಕೋವಿಡ್ –19

ನಿಮ್ಮ ಬಳಿಗೆ ಕೊರೊನಾ ಪಾಸಿಟಿವ್ ದೃಢಪಟ್ಟಿರುವ ವ್ಯಕ್ತಿ ಬಂದರೆ ಅಥವಾ ನಿಮಗೆ ಸಮೀಪದಲ್ಲಿ ಇದ್ದರೆ, ಕೂಡಲೇ ಅಲರ್ಟ್ ಮಾಡುವ ಮೂಲಕ ನಿಮ್ಮನ್ನು ಎಚ್ಚರಿಸುವ "ಆರೋಗ್ಯ ಸೇತು ಕೋವಿಡ್ –19" ಎಂಬ ಆ್ಯಪ್ ಒಂದನ್ನು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಬಿಡುಗಡೆ ಮಾಡಿದೆ. ಈ ಆ್ಯಪ್ ಅನ್ನು ios ಮತ್ತು Android ಸ್ಮಾರ್ಟ್ ಫೋನ್‌ನಲ್ಲಿ ಬಳಸಬಹುದಾಗಿದ್ದು, ಡೌನ್‌ಲೋಡ್ ಮಾಡಿಕೊಂಡ ಬಳಿಕ ಬ್ಲೂ ಟೂತ್ ಮತ್ತು ಲೊಕೇಶನ್ ಆನ್ ಮಾಡಿಕೊಳ್ಳಬೇಕು. ಅದರಲ್ಲಿ ಸೆಟ್ ಲೊಕೇಶನ್ ಎಂದಿರುವುದನ್ನು ALWAYS ಎಂದು ಕೊಟ್ಟರೆ ಸಾಕು. ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಕೋವಿಡ್–19 ರಿಂದ ನಿಮ್ಮನ್ನು ನೀವು ರಕ್ಷಿಸಿಕೊಳ್ಳಬಹುದು.



Downloaded From: www.kpscvaani.com



# ಹಗಲಿರುಳು ಜನರ ರಕ್ಷಣೆಯಲ್ಲಿ ನಿರತರಾದ ಪೊಲೀಸರು



ಹೆಚ್. ಶಿವಣ್ಣ

> ಕೊರೊನಾ ಸೋಂಕು ತಮಗೂ ತಗುಲಬಹುದಿದ್ದರೂ ಕೂಡ ಸಾರ್ವಜನಿಕರ ಆರೋಗ್ಯ ಕಾಪಡುವ ನಿಟ್ಟಿನಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರು ಹಗಲಿರುಳು ಎನ್ನದೆ ಮೂರು ಪಾಳಿಯ ಕರ್ತವ್ಯದಲ್ಲಿ ನಿರತರಾಗಿದ್ದಾರೆ

**ಕೊ**ರೊನಾ ಹರಡುವಿಕೆಯನ್ನು ತಡೆಗಟ್ಟಲು ಆರೋಗ್ಯ ಇಲಾಖೆಯಷ್ಟೇ ಗೃಹ ಇಲಾಖೆಯ ಜವಾಬ್ದಾರಿಯು ಕೂಡ ತುಂಬಾ ಪ್ರಮುಖವಾಗಿದೆ. ಏಕೆಂದರೆ ಕೊರೊನಾ ರೋಗಕ್ಕೆ ಔಷಧಿಯನ್ನು ಕಂಡುಹಿಡಿದಿಲ್ಲ. ಹಾಗಾಗಿ ಅದು ಹರಡುವುದನ್ನು ತಡೆಯಬೇಕೆಂದರೆ ಜನರ ಓಡಾಟವನ್ನು ನಿರ್ಬಂಧಿಸುವ ಮೂಲಕ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು. ಹಾಗಾಗಿ ಜನರ ಅನಗತ್ಯ ಓಡಾಟವನ್ನು ನಿಯಂತ್ರಿಸುವ ಪ್ರಮುಖ ಜವಾಬ್ದಾರಿ ಪೊಲೀಸ್ ಇಲಾಖೆಯದಾಯಿತು.

ಈ ರೋಗ ಹರಡುವಿಕೆಯನ್ನು ತಡೆಗಟ್ಟಲು ದೇಶದಾದ್ಯಂತ 21 ದಿನಗಳ ಲಾಕ್‌ಡೌನ್‌ಗೆ ಪ್ರಧಾನಿಯವರು ಆದೇಶ ಹೊರಡಿಸಿದರು. ಸಾರ್ವಜನಿಕರು ಅನಗತ್ಯವಾಗಿ ಮನೆಯಿಂದ ಹೊರಬಾರದಂತೆ ತಿಳಿಸಲಾಯಿತು. ಅಗತ್ಯ ಸರಕು, ಔಷಧಿಗಳ ಖರೀದಿಗಾಗಿ ಕೆಲವು ಜನರು ಮನೆಯಿಂದ ಹೊರಗೆ ಬಂದರೆ, ಸೋಂಕು ಹರಡುವಿಕೆಯ ತೀವ್ರತೆಯನ್ನು ಅರಿಯದ ಕೆಲವು ಜನರು ಸಾಮಾನ್ಯ ಓಡಾಟವನ್ನು ಮುಂದುವರೆಸಿದ್ದರು. ಇಂತಹವರ ಓಡಾಟವನ್ನು ನಿಯಂತ್ರಿಸುವುದಕ್ಕಾಗಿ ಗೃಹ ಇಲಾಖೆಯ ಪ್ರಮುಖ ಜವಾಬ್ದಾರಿಯಾಯಿತು. ಅನಗತ್ಯ ಓಡಾಟವನ್ನು ನಿಯಂತ್ರಿಸಲು ಇಲಾಖೆಯು ಸೆಕ್ಷನ್ 144 ಅನ್ನು ಜಾರಿ ಮಾಡಿ ನಿಷೇಧಾಜ್ಞೆಯನ್ನು ಹೊರಡಿಸಿತು.

ತಮಗೂ ಈ ಸೋಂಕು ತಗುಲಬಹುದಿದ್ದರೂ ಕೂಡ ಸಾರ್ವಜನಿಕರ ಹಿತದೃಷ್ಟಿಯನ್ನು ಕಾಯಲು ಹಗಲಿರುಳು ಮೂರು ಪಾಳಿಯಲ್ಲಿ ಕೆಲಸ ನಿರ್ವಹಿಸಲಾರಂಭಿಸಿದರು. ಅವರಿಗೆ ಅನವಶ್ಯಕವಾಗಿ ಓಡಾಡುವವರನ್ನು ನಿಯಂತ್ರಿಸುವುದು ಅಸಾಧ್ಯವಾಯಿತು. ಜಾಣನಿಗೆ ಕಣ್–ಸನ್ನೆ ಕೋಣನಿಗೆ–ದೊಣ್ಣೆ ಏಟು ಎಂಬ ಗಾದೆ ಮಾತಿನಂತೆ ಕೆಲವರಿಗೆ ಲಾಠಿ ಮೂಲಕವೇ ತಿಳಿಸಬೇಕಾದ ಅನಿವಾರ್ಯತೆ ಎದುರಾಯಿತು. ಇದರಿಂದ ಅಗತ್ಯ ಸರಕು ಖರೀದಿಗೆ ತೆರಳುವವರಿಗೂ ಲಾಠಿ ಏಟು ಬೀಳುವಂತಾಯಿತು.

ಪೊಲೀಸರು ಸುಖಾ ಸುಮ್ಮನೆ ಲಾಠಿ ಬೀಸುತ್ತಿದ್ದಾರೆ ಎಂದು ಸಾರ್ವಜನಿಕ ವಲಯದಲ್ಲಿ ದೂರುಗಳು ಬರಲಾರಂಭಿಸಿದರಿಂದ ಆಯುಕ್ತರು ಲಾಠಿ ಇಲ್ಲದೆ ಬಂದೋಬಸ್ತ್‌ನ ಕಾರ್ಯಾಚರಣೆಯನ್ನು ಮಾಡಬೇಕೆಂದು ಆದೇಶಿದ ಹಿನ್ನೆಲೆಯಲ್ಲಿ ಪೊಲೀಸರು ದಾರಿಗಿಳಿದ ಸಾರ್ವಜನಿಕರಿಗೆ ಕೈಮುಗಿದು ಕೊರೊನಾ ಹರಡುವಿಕೆ ತಡೆಗೆ ಸಹಕರಿಸುವಂತೆ ಮನವಿ ಮಾಡುವ ಜೊತೆಗೆ ಆಟೋಗಳಲ್ಲಿ ಮೈಕ್ ಮುಖಾಂತರ ಕೊರೊನಾ ರೋಗದ ಕುರಿತು ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ಜನರಿಗೆ ಜಾಗೃತಿ ಮೂಡಿಸುವುದರಲ್ಲೂ ತಮ್ಮನ್ನು ತೊಡಗಸಿಕೊಂಡರು.

ಪೊಲೀಸರು ಸಿಕ್ಕಸಿಕ್ಕವರ ಮೇಲೆ ಲಾಠಿ ಬೀಸುತ್ತಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾದ ಹಿನ್ನೆಲೆಯಲ್ಲಿ ಲಾಠಿ ಬಿಟ್ಟು ಕೆಲಸ ಮಾಡುವಂತೆ ನಗರ ಪೊಲೀಸ್ ಕಮಿಷನರ್ ಭಾಸ್ಕರ್ ರಾವ್ ಅವರು ಪೊಲೀಸರಿಗೆ ಸೂಚನೆ ನೀಡಿದರು. ರಸ್ತೆಯಲ್ಲಿ ಯಾರೇ ಬಂದರೂ ಸೌಜನ್ಯದಿಂದ ಅವರ ಉದ್ದೇಶವನ್ನು ತಿಳಿದುಕೊಂಡು ಮುಂದುವರಿಯಬೇಕು ಎಂದು ತಿಳಿಸಿದರು.

## ವಾರ್‌ರೂಂ ಸ್ಥಾಪನೆ

ಕೊರೊನಾ ಸೋಂಕು ಹಿನ್ನೆಲೆಯಲ್ಲಿ ಉದ್ಭವಿಸಿರುವ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ವಾರ್‌ರೂಂ ಅನ್ನು ಸ್ಥಾಪಿಸಲಾಯಿತು. ಕೊರೊನಾ ಸೋಂಕು ಹಿನ್ನೆಲೆಯಲ್ಲಿ ನಡೆಯುವ ಪ್ರತಿಯೊಂದು ಬೆಳವಣಿಗೆಯ ಮೇಲೆ ನಿಗಾ ವಹಿಸಿ, ಅದರ ಪ್ರತಿಯೊಂದು ಮಾಹಿತಿಯನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರುವ ಸಲುವಾಗಿ ಡಿಸಿಪಿ ಇಶಾ ಪಂತ್ ಅವರ ನೇತೃತ್ವದ ತಂಡಕ್ಕೆ ವಾರ್‌ರೂಂನ ಜವಾಬ್ದಾರಿಯನ್ನು ವಹಿಸಲಾಗಿದೆ.



ಅವರು ಲಾಕ್‌ಡೌನ್ ಸಂದರ್ಭದಲ್ಲಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಯವರಿಗೆ ಕೋವಿಡ್–19 ತಡೆಗೆ ಹಮ್ಮಿಕೊಳ್ಳಬೇಕಾದ ಕಾರ್ಯವಿಧಾನಗಳ ಬಗ್ಗೆ ವೈರ್‌ಲೆಸ್ ಮೂಲಕವೇ ಸೂಚನೆಯನ್ನು ನೀಡುತ್ತಾ ಸಿಬ್ಬಂದಿಗೆ ಉತ್ತೇಜನ ನೀಡುತಿದ್ದರು. ಲಿಖಿತ ನೋಟಿಸ್ ಮೂಲಕ ಸೂಚಿಸಿದರೆ ಕೆಳಹಂತದ ಸಿಬ್ಬಂದಿಯವರ ಗಮನಕ್ಕೆ ಸೂಚನೆಗಳು ಬಾರದಿರಬಹುದೆಂದು ಅವರು ವೈರ್‌ಲೆಸ್ ಮೂಲಕವೇ ಸೂಚನೆಗಳನ್ನು ನೀಡಲಾರಂಭಿಸಿದರು.



### ಔಷಧ ತುಲುಪಿಸಿ ಮಾನವೀಯತೆ ಮೆರೆದ ಮುಖ್ಯಪೇದೆ

**ಬೆಂಗಳೂರಿನ ಪೊಲೀಸ್ ಆಯುಕ್ತ ಕಚೇರಿಯ ನಿಯಂತ್ರಣ ಕೊಠಡಿಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಎಸ್.ಕುಮಾರಸ್ವಾಮಿ ಅವರು ಧಾರವಾಡದ ಕ್ಯಾನ್ಸರ್ ರೋಗಿಯೊಬ್ಬರಿಗೆ 430 ಕಿ.ಮೀ ಬೈಕ್ ನಲ್ಲಿ ಹೋಗಿ ಔಷಧವನ್ನು ತಲುಪಿಸಿ ಮಾನವೀಯತೆ ಮೆರೆದಿದ್ದಾರೆ. ಸುದ್ದಿವಾಹಿಯೊಂದರಲ್ಲಿ ಕ್ಯಾನ್ಸರ್ ಪೀಡಿತರಾದ ತಮಗೆ ಬೆಂಗಳೂರಿನಿಂದ ಔಷಧಿಯನ್ನು ತರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದನ್ನು ವೀಕ್ಷಿಸಿದ ಕುಮಾರಸ್ವಾಮಿಯವರು ಹಿರಿಯ ಅಧಿಕಾರಿಗಳ ಅನುಮತಿ ಪಡೆದು ಧಾರವಾಡದವರೆಗೆ ತಮ್ಮ ಬೈಕ್‌ನಲ್ಲಿ ಹೋಗಿ ಔಷಧಿಯನ್ನು ನೀಡಿ ಬಂದರು. ಅವರ ಈ ಮಾನವೀಯ ಕಾರ್ಯಕ್ಕೆ ಆಯುಕ್ತ ಭಾಸ್ಕರ್ ರಾವ್ ಅವರು ಪ್ರಶಂಸನಾ ಪತ್ರ ನೀಡಿ ಅಭಿನಂದಿಸಿದರು.**





Downloaded From: www.kpscvaani.com



## ತುರ್ತು ಸೇವೆಗಳಿಗೆ ಹೊಯ್ಸಳ ವಾಹನ

**ಲಾಕ್‌ಡೌನ್ ಹಿನ್ನೆಲೆಯಲ್ಲಿ ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಇಲ್ಲದಿರುವುದರಿಂದ 273 ಹೊಯ್ಸಳ ವಾಹನಗಳನ್ನು ಸಾರ್ವಜನಿಕರ ತುರ್ತು ಸೇವೆಗೆ ಬಳಸಿಕೊಳ್ಳಲು ತೀರ್ಮಾನಿಸಲಾಯಿತು. ಹಾಗಾಗಿ ಡಯಾಲಿಸಿಸ್ ಸೇರಿದಂತೆ ಕೆಲ ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿರುವವರಿಗೆ ಹೊಯ್ಸಳ ವಾಹನದ ಮೂಲಕ ಪಿಕಪ್ ಮತ್ತು ಡ್ರಾಪ್ ಅನ್ನು ನೀಡಲಾಗುತ್ತಿದೆ. ಪೊಲೀಸ್ ಇಲಾಖೆಯ ಈ ಸೇವೆಗೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದ್ದು, ಪ್ರತಿ ದಿನ 4 ಸಾವಿರಕ್ಕೂ ಹೆಚ್ಚು ಮಂದಿ 100 ಕ್ಕೆ ಕರೆ ಮಾಡಿ ಈ ಸೇವೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಹಾಗೂ ವಲಸೆ ಕಾರ್ಮಿಕರನ್ನು ಇರಿಸಲು ನಿಗದಿಪಡಿಸಿರುವ ಕಲ್ಯಾಣಮಂಟಪ ಮತ್ತು ಸಮುದಾಯ ಭವನಗಳಿಗೆ ಕಾರ್ಮಿಕರನ್ನು ತಲುಪಿಸುವ ಕಾರ್ಯಕ್ಕೂ ಹೊಯ್ಸಳ ವಾಹನಗಳನ್ನು ಬಳಸಿಕೊಳ್ಳಲಾಯಿತು.**

ಕಮಿಷನರೇಟ್ ವ್ಯಾಪ್ತಿಯಲ್ಲಿ 12 ರಿಂದ 16 ಗಂಟೆ ಸುಮಾರು 20 ಸಾವಿರ ಪೊಲೀಸ್ ಸಿಬ್ಬಂದಿಯವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರಿಗೆ ಆಯುಕ್ತರು ತಮ್ಮ ಮತ್ತು ತಮ್ಮ ಕುಟುಂಬದವರ ಆರೋಗ್ಯ ಹಾಗೂ ಸುರಕ್ಷತೆ ಕಡೆಗೂ ಗಮನ ಕೊಡುವ ಜೊತೆಗೆ ಕುಟುಂಬದವರೊಟ್ಟಿಗೆ ಗುಣಾತ್ಮಕವಾದ ಸಮಯ ಕಳೆದು ನಿರಾಳ ಭಾವದಿಂದ ಕೆಲಸಕ್ಕೆ ಹಾಜರಾಗುವಂತೆ ಮನವಿ ಮಾಡಿದರು. ಹಾಗೂ ಯಾರೂ ಒತ್ತಡದಲ್ಲಿ ಕೆಲಸ ಮಾಡದಿರುವಂತೆ ಕೂಡ ಸಿಬ್ಬಂದಿಗಳಿಗೆ ಸೂಚಿಸಿದರು.

ಅನಗತ್ಯವಾಗಿ ಹೊರಗೆ ಬರುವವರೊಂದಿಗೆ ವಾಗ್ವಾದ ಮಾಡದೆ ಸೌಜನ್ಯದಿಂದ ತಿಳಿಹೇಳಬೇಕು. ಆದಾಗ್ಯೂ ಜನರು ಓಡಾಟವನ್ನು ಮುಂದುವರೆಸಿದರೆ ಮುಲಾಜಿಲ್ಲದೆ ಅವರ ವಾಹನಗಳನ್ನು ವಶಪಡಿಸಿಕೊಳ್ಳಬೇಕು. ಲಾಕ್‌ಡೌನ್ ಮುಗಿಯುವವರೆಗೂ ಅವರ ವಾಹನವನ್ನು ಹಿಂದುರಿಗಿಸಬಾರದು. ಹಾಗೂ ಲಾಕ್‌ಡೌನ್ ಸಂದರ್ಭದಲ್ಲಿ ಟ್ರಾಫಿಕ್ ಸಂಬಂಧ ಯಾರಿಗೂ ದಂಡವಿಧಿಸದಿರುವಂತೆ ಆಯುಕ್ತ ಬಾಸ್ಕರ್ ರಾವ್ ಅವರು ಆದೇಶ ನೀಡಿದರು.

ಸಮಸ್ಯೆಯನ್ನು ಹೇಳಿಕೊಂಡು ಪೊಲೀಸ್ ಠಾಣೆಗಳಿಗೆ ಬರುವವರೊಂದಿಗೆ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾದುದರಿಂದ ಎಲ್ಲಾ ಠಾಣೆಗಳಲ್ಲಿ ಸಾರ್ವಜನಿಕ ಸಂಪರ್ಕ ಅಧಿಕಾರಿಯನ್ನು ನೇಮಿಸಲಾಯಿತು.







## ಸುಳ್ಳು ಸುದ್ದಿಗಳ ಪತ್ತೆಗೆ ಫ್ಯಾಕ್ಟ್‌ಚೆಕ್

**ಕೊರೊನಾ ಕುರಿತು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಸುಳ್ಳು ಸುದ್ದಿಗಳಿಂದ ಸಾರ್ವಜನಿಕರು ಗೊಂದಲಕ್ಕೆ ಈಡಾಗುತ್ತಿರುವುದರಿಂದ ಸುಳ್ಳು ಸುದ್ದಿಗಳನ್ನು ಪತ್ತೆ ಮಾಡಲು ಪೊಲೀಸ್ ಇಲಾಖೆಯು ಫ್ಯಾಕ್ಟ್‌ಚೆಕ್ ಎಂಬ ಜಾಲತಾಣವನ್ನು ಪ್ರಾರಂಭಿಸಿತು. ವಾಟ್ಸ್‌ಅಪ್, ಫೇಸ್‌ಬುಕ್, ಟ್ವಿಟರ್ ಮುಂತಾದ ಸಾಮಾಜಿಕ ಜಾಲತಾಣದಲ್ಲಿ ಮತ್ತು ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುದ್ದಿಗಳ ಮೂಲವನ್ನು ಪೊಲೀಸರೇ ಪತ್ತೆ ಮಾಡುತ್ತಿದ್ದಾರಲ್ಲದೆ, ಸುಳ್ಳು ಸುದ್ದಿಗಳ ಪಟ್ಟಿಯನ್ನು ಈ ಜಾಲತಾಣದಲ್ಲಿ ಪ್ರಕಟಿಸುವ ಮೂಲಕ ಸಾರ್ವಜನಿಕರಲ್ಲಿರುವ ಗೊಂದಲವನ್ನು ದೂರ ಮಾಡುತ್ತಿದ್ದಾರೆ. ಸಾರ್ವಜನಿಕರು ಕೊರೊನಾ ಕುರಿತ ಯಾವುದೇ ಸುದ್ದಿಯ ನಿಖರತೆ ಬಗ್ಗೆ ಅನುಮಾನ ಕಂಡುಬಂದಲ್ಲಿ http://factcheck.ksp.gov.in ಹೆಸರಿನ ಈ ಜಾಲತಾಣವನ್ನು ಸಂಪರ್ಕಿಸಿ ತಮ್ಮ ಅನುಮಾನವನ್ನು ಬಗೆಹರಿಸಿಕೊಳ್ಳಬಹುದು.**

ಅವರು ತಮ್ಮ ಹಂತದಲ್ಲೇ ಜನರ ಸಮಸ್ಯೆಗೆ ಪರಿಹಾರವನ್ನು ಒದಗಿಸುತ್ತಿದ್ದಾರೆ. ಆದರೆ ಅವರ ಹಂತದಲ್ಲಿ ಸಮಸ್ಯೆಗೆ ಪರಿಹಾರ ಸಾಧ್ಯವಾಗದಿದ್ದರೆ ಎಸಿಪಿ, ಡಿಸಿಪಿಗಳ ಗಮನಕ್ಕೆ ತಂದು ಜನರ ಸಮಸ್ಯೆಗೆ ಪರಿಹಾರ ದೊರಕಿಸಿಕೊಡುತ್ತಿದ್ದಾರೆ.

ಕೊರೊನಾ ಸೋಂಕು ವಿದೇಶಿ ಪ್ರಯಾಣ ಬೆಳೆಸಿ ಆಗಮಿಸಿದವರಿಂದ ಹರಡುತ್ತಿರುವ ಹಿನ್ನೆಲೆಯಲ್ಲಿ ವಿದೇಶದಿಂದ ಆಗಮಿಸಿರುವವರ ಮೇಲೆ ನಿಗಾ ವಹಿಸಲು ಬೆಂಗಳೂರು ನಗರದ ಒಟ್ಟು 104 ಠಾಣೆಗಳಲ್ಲಿಯೂ ಪ್ರತ್ಯೇಕ ಸಿಬ್ಬಂದಿಯನ್ನು ಇಲಾಖೆಯು ನಿಯೋಜನೆ ಮಾಡಿತು. ಇವರು ವಿದೇಶದಿಂದ ಮರಳಿ ಕ್ವಾರಂಟೈನ್‌ಗೆ ಒಳಗಾಗಿರುವವರು ಆರೋಗ್ಯ ಇಲಾಖೆಯ ಸೂಚನೆಯನ್ನು ಪಾಲಿಸುತ್ತಿದ್ದಾರೆಯೇ ಎಂಬುದನ್ನು ಪರಿಶೀಲನೆ ನಡೆಸುವ ಜೊತೆಗೆ ನಿಯಮ ಉಲ್ಲಂಘಿಸಿ ಕ್ವಾರಂಟೈನ್‌ನಿಂದ ತಪ್ಪಿಸಿಕೊಂಡು ಓಡಾತ್ತಿರುವವರನ್ನು ಪತ್ತೆ ಹಚ್ಚಿ ಐಸೋಲೇಷನ್ ಸೆಂಟರ್‌ಗಳಿಗೆ ದಾಖಲಿಸುವುದು ಇವರ ಜವಾಬ್ದಾರಿಯಾಗಿದೆ.

ಬೆಂಗಳೂರು ನಗರದಲ್ಲಿ 345 ಚೆಕ್ ಪೋಸ್ಟ್‌ಗಳನ್ನು ಹಾಗೂ ಇತರೆ ಜಿಲ್ಲೆಗಳ ಗಡಿ ಭಾಗ ಹಾಗೂ ಅಂತರ ರಾಜ್ಯ ಗಡಿ ಭಾಗಗಳಲ್ಲಿ 588 ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಿ ವಾಹನಗಳ ಓಡಾಟವನ್ನು ನಿಯಂತ್ರಿಸಲಾಗುತ್ತಿದೆ. ಏಪ್ರಿಲ್ 11 ರವರೆಗೆ 43,432 ವಾಹನಗಳನ್ನು ಜಪ್ತಿ ಮಾಡಲಾಗಿದೆ. ಲಾಕ್ ಡೌನ್ ಉಲ್ಲಂಘನೆಗೆ ಸಂಬಂಧಿಸಿದಂತೆ 1558 ಎಫ್ ಐ ಆರ್ ಗಳು ದಾಖಲಾಗಿವೆ, ಹಾಗೂ 2,682 ಜನರನ್ನು ಬಂಧಿಸಿಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೂ ಕೂಡ ತಮ್ಮ ಜಿಲ್ಲೆಯಲ್ಲಿ ಲಾಕ್‌ಡೌನ್ ಸಂಬಂಧ ಕಾರ್ಯಚರಣೆಯಲ್ಲಿ ಹಗಲಿರುಳು ತೊಡಗಿದ್ದಾರೆ.

ತಬ್ಲಿಘ್ ಜಮಾತ್‌ನ 50 ವಿದೇಶಿ ಕಾರ್ಯಕರ್ತರನ್ನು ಗುರುತಿಸಿ ಕ್ವಾರಂಟೈನ್ ಮಾಡಲಾಗಿದೆ. ವೀಸಾ ನಿಯಮ ಉಲ್ಲಂಘನೆಯ ಪ್ರಕರಣಗಳನ್ನೂ ದಾಖಲಿಸಲಾಗಿದೆ. ಬೆಂಗಳೂರು ನಗರದಲ್ಲಿ 269 ತಬ್ಲಿಘ್ ಜಮಾತ್‌ನ ಕಾರ್ಯಕರ್ತರು ಹಾಗೂ ಇತರ ಜಿಲ್ಲೆಗಳಲ್ಲಿ 482 ಕಾರ್ಯಕರ್ತರನ್ನು ಕ್ವಾರಂಟೈನ್‌ನಲ್ಲಿ ಇಡಲಾಗಿದೆ. ಇತರ ರಾಜ್ಯಗಳಲ್ಲಿರುವ 581 ಮಂದಿ ಕಾರ್ಯಕರ್ತರ ಕುರಿತು ಆಯಾ ರಾಜ್ಯಗಳಿಗೆ ಮಾಹಿತಿ ನೀಡಲಾಗಿದೆ.

ತಮ್ಮ ಕರ್ತವ್ಯದ ಜೊತೆಗೆ ಕೆಲವು ಹೃದಯವಂತ ಪೊಲೀಸರು ಬೀದಿಬದಿಯಲ್ಲಿ ವಾಸಮಾಡುವವರಿಗೆ ಊಟ ಮತ್ತು ಕುಡಿಯುವ ನೀರು ವಿತರಿಸುವ ಕಾರ್ಯವನ್ನು





ಮಾಡುತ್ತಿದ್ದರು. ಪೊಲೀಸರ ಹೃದಯವು ಮಿಡಿಯುತ್ತದೆ ಎಂಬುದಕ್ಕೆ ಇವು ಸಾಕ್ಷಿ ಒದಗಿಸಿತ್ತು. ಹೀಗೆ ಹಸಿದವರಿಗೆ ಊಟ, ತಿಂಡಿ ವಿತರಣೆ ಮಾಡುವ ಮೂಲಕ ಪೊಲೀಸರು ಸ್ವಯಂ ಸೇವಕರಾಗಿ ಕೆಲಸ ಮಾಡಿದರು. ಆಯುಕ್ತರಾದ ಭಾಸ್ಕರ್‌ರಾವ್ ಅಭಿಮಾನಿಗಳ ಸಂಘದವರು ಹಸಿದವರಿಗೆ ಊಟ ನೀಡುವ ಕೆಲಸದಲ್ಲಿ ಸಾತು ನೀಡುತ್ತಿದ್ದಾರೆ.

ಪೊಲೀಸರು ತಮ್ಮ ಪ್ರಾಣದ ಹಂಗನ್ನು ತೊರೆದು ಕೊರೊನಾ ಹರಡುವಿಕೆ ತಡೆಗಟ್ಟುವಲ್ಲಿ ಹಗಲಿರುಳು ಕೆಲಸ ಮಾಡುತ್ತಿದ್ದಾರೆ. ಅಂತಹ ಪೊಲೀಸರಿಗೆ ನಾವು ಕೃತಜ್ಞತೆ ಸಲ್ಲಿಸಬೇಕಾದರೆ ಸರ್ಕಾರ ಮಾಡುವ ಆದೇಶಗಳನ್ನು ಚಾಚು ತಪ್ಪದೇ ಪಾಲಿಸೋಣ.



Downloaded From: www.kpscvaani.com



# ಕೊರೊನಾ: ಜಾಗೃತರಾಗಿರೋಣ

ಡಾ. ರವಿಪ್ರಸಾದ್ ಸಜ್ಜನ್

**ಹೊ**ರ ದೇಶದಲ್ಲಿ ಹರಡಿರುವ ಕೊರೊನಾ ಎಂಬ ವೈರಸ್ ಇಂದು ಭಾರತ ದೇಶದ ಜನರಲ್ಲಿ ಭಯದ ವಾತಾವರಣ ನಿರ್ಮಿಸಿದೆ. ಕೊರೊನಾ ವೈರಸ್‌ನಿಂದ ಭಾರತ ಸೇರಿ ಹಲವಾರು ರಾಷ್ಟ್ರಗಳು ತತ್ತರಿಸುತ್ತಿವೆ. ರಾಜ್ಯ ಹಾಗೂ ಕೇಂದ್ರ ಸರಕಾರಗಳ ಎಲ್ಲ ಮುಂಜಾಗ್ರತೆ ಕ್ರಮಗಳ ಮಧ್ಯೆಯೂ ಕೊರೊನಾ ಸೋಂಕು ಪೀಡತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಕೋವಿಡ್–19 ಅನ್ನು ಕೊರೊನಾ ವೈರಸ್ ಎಂದೂ ಸಹ ಕರೆಯುತ್ತಾರೆ. COVID-19: Co ಅಂದ್ರೆ Corona, Vi ಅಂದ್ರೆ Virus, Di ಅಂದ್ರೆ Disease, 19 ಅಂದ್ರೆ 2019 ವರ್ಷ). ಕೊರೊನಾ ವೈರಸ್ 2019 ನೇ ಇಸವಿಯಲ್ಲಿ ಕಾಣಿಸಿಕೊಂಡಿತು.

ಇಂದು ನೊವೆಲ್ ಕೊರೊನಾ ವೈರಸ್ ಸೋಂಕಿನಿಂದಾಗಿ ದೇಶದಲ್ಲೀಗ ಎಲ್ಲಾ ರಾಜ್ಯಗಳು ಮತ್ತು ಅವುಗಳ ಪ್ರಮುಖ ನಗರಗಳು ಲಾಕ್‌ಡೌನ್ ಆಗಿವೆ.

**ಲಾಕ್‌ಡೌನ್ ಎಂದರೇನು:**

ನಾವು 'ಲಾಕ್‌ಡೌನ್' ಎಂಬ ಪದವನ್ನು ಹೊಸದಾಗಿ ಪರಿಚಯ ಮಾಡಿಕೊಳ್ಳುತ್ತಿದ್ದೇವೆ. 'ಲಾಕ್‌ಡೌನ್' ಎಂದರೆ ಇಡೀ ಒಂದು ಪ್ರದೇಶವನ್ನು ಪೂರ್ತಿಯಾಗಿ ಬಂದ್ ಮಾಡುವುದು ಎಂದರ್ಥ. ಈ ಸಂದರ್ಭದಲ್ಲಿ ಸರಕಾರ ಗುರುತಿಸಿದ ಕೆಲವೇ ಅವಶ್ಯಕ ಸೇವೆಗಳನ್ನು ಮಾತ್ರ ಕಾರ್ಯಾ ನಿರ್ವಹಿಸಲು ಬಿಡಲಾಗುತ್ತದೆ. ಉದಾ: ಆಸ್ಪತ್ರೆ, ಮೆಡಿಕಲ್ ಸ್ಟೋರ್, ನರ್ಸಿಂಗ್ ಹೋಮ್, ಪೊಲೀಸ್, ಹಾಲು, ಹಣ್ಣು, ತರಕಾರಿ ಮಾರುಕಟ್ಟೆ, ಪತ್ರಿಕೆ, ಮಾಧ್ಯಮ ಇತ್ಯಾದಿ. ಉಳಿದಂತೆ ಹೆಚ್ಚಿನ ಎಲ್ಲ ಕಛೇರಿಗಳು, ಫ್ಯಾಕ್ಟರಿಗಳು ಕಡ್ಡಾಯವಾಗಿ ಮುಚ್ಚಲ್ಪಡುತ್ತವೆ. ಕಛೇರಿ, ಫ್ಯಾಕ್ಟರಿ, ಅಂಗಡಿಗಳಲ್ಲಿ ಹೆಚ್ಚು ಜನ ಸೇರುವಿಕೆ ಹಾಗೂ ಒಬ್ಬರು ಮುಟ್ಟಿದ ವಸ್ತುವನ್ನು ಇನ್ನೊಬ್ಬರು ಮುಟ್ಟುವ ಸಾಧ್ಯತೆ ಇರುವುದರಿಂದ ಅವುಗಳನ್ನು ಮುಚ್ಚಲಾಗುತ್ತದೆ. ಕೊರೊನಾ ಹಾವಳಿ ಹತೋಟಿಗೆ ಬರುವವರೆಗೂ ನಾವು ಈ 'ಲಾಕ್‌ಡೌನ್'ಎಚ್ಚರಿಕೆಯನ್ನು ಪಾಲಿಸೋಣ.

ಕೋವಿಡ್–19 ನ್ನು ಎದುರಿಸಲು ಮೊತ್ತ ಮೊದಲು ಚೀನಾ ಈ ಅಸ್ತ್ರವನ್ನು ಪ್ರಯೋಗಿಸಿತು. ಈಗ ಜಗತ್ತಿನ ಇನ್ನೂ 35 ದೇಶಗಳು ಇದನ್ನು ಪ್ರಯೋಗಿಸುತ್ತಿವೆ. ಕೆಲವು ಕಡೆ ಆಯ್ದ ನಗರಗಳನ್ನು, ಜಿಲ್ಲೆಗಳನ್ನು ಮುಚ್ಚಲಾಗುತ್ತಿದ್ದರೆ, ಇನ್ನು ಹಲವೆಡೆ ಇಡೀ ದೇಶ (ಉದಾ: ಇಟಲಿ) ವನ್ನು ಲಾಕ್‌ಡೌನ್ ಮಾಡಲಾಗಿದೆ.

**ಲಾಕ್‌ಡೌನ್ ಹೇಗೆ ಸಹಾಯಕಾರಿ:**

ಕೊರೊನಾ ತಡೆಗೆ ಸಾರ್ವಜನಿಕ ಓಡಾಟವನ್ನು ಕಡಿಮೆ ಮಾಡುವುದರಿಂದ ಜನರ ನಡುವೆ ಸಾಮಾಜಿಕ ಅಂತರ ಏರ್ಪಾಡಾಗುತ್ತದೆ. ಹೆಚ್ಚು ಜನರು ಸೇರುವ ಸ್ಥಳಗಳಿಗೆ ನಿಷೇಧ ಇರುವುದರಿಂದ ವೈರಸ್‌ನ ಸಾರ್ವಜನಿಕ ಹರಡುವಿಕೆ ಸಾಧ್ಯವಾಗುವುದಿಲ್ಲ. ಸೀನಿದಾಗ, ಕೆಮ್ಮಿದಾಗ ಹರಡುವ ರೋಗಾಣುಗಳು ಇನ್ನೊಬ್ಬರನ್ನು ತಲುಪುವ ಸಾಧ್ಯತೆ ಇರುವುದಿಲ್ಲ. ಏಕಕಾಲಕ್ಕೆ ಅಧಿಕ ಮಂದಿ ಸೋಂಕಿತರು ಕಂಡುಬಂದರೆ ಆರೋಗ್ಯ ಸೇವೆ ಮೇಲೆ ಒತ್ತಡ ಸೃಷ್ಟಿಯಾಗುತ್ತದೆ. ಲಾಕ್‌ಡೌನ್‌ನಿಂದ ಇದನ್ನು ವಿಳಂಬಿಸಬಹುದು. ಈ ಸೋಂಕು ಮತ್ತಷ್ಟು ವಿಸ್ತರಿಸದಂತೆ ಸಮಗ್ರ ನಿಯಂತ್ರಣ ಕ್ರಮಗಳನ್ನು ಗಮನದಲ್ಲಿಟ್ಟು ಈ ಕ್ರಮ ಕೈಗೊಳ್ಳಲಾಗಿದೆ.

ವೈರಸ್ ಹರಡದಂತೆ ತಡೆಯಲು ಎಲ್ಲ ಕುಟುಂಬಗಳು ಹಾಗೂ ಊರುಗಳು ಲಾಕ್‌ಡೌನ್ ಪದ್ಧತಿ ಅನುಸರಿಸುವುದು ಒಂದೇ ದಾರಿಯಾಗಿದೆ. ಸೋಂಕಿತರಿರಲಿ, ಶಂಕಿತರಿರಲಿ ಎಲ್ಲರೂ ಜನಸಮುದಾಯದಿಂದ ಸಂಪೂರ್ಣ ದೂರವೇ ಉಳಿದರೆ, ಹೆಚ್ಚಿನ ಪ್ರಮಾಣದಲ್ಲಿ ಸೋಂಕು ಹರಡುವುದನ್ನು ಪರಿಣಾಮಕಾರಿಯಾಗಿ ತಡೆಯಬಹುದಾಗಿದೆ. ಮೊದಲು ದೇಶಕ್ಕಾಗಿ ಮನೆ ತೊರೆದು ಆಚೆ ಬರುತ್ತಿದ್ದರು. ಇಂದು ದೇಶಕ್ಕಾಗಿ ಮನೆಯಲ್ಲೇ ಇರೋಣ. ಆದರೆ, ಮುಂಜಾಗ್ರತೆಯಿಲ್ಲದ ಲಾಕ್‌ಡೌನ್‌ನಿಂದ ಬಡವರು, ಅಸಹಾಯಕರು ಹಾಗೂ ನಿರ್ಗತಿಕ ಕುಟುಂಬದವರು ತೀವ್ರ ತೊಂದರೆ ಅನುಭವಿಸಬೇಕಾಗಿ ಬರಲಿದೆ.

**ಎಷ್ಟು ದಿನ ಲಾಕ್‌ಡೌನ್ ಅಗತ್ಯ:**

ಇದು ತಜ್ಞರ ಅಭಿಪ್ರಾಯವನ್ನು ಆಧರಿಸಿದೆ. ಸೋಂಕಿತರ ಪ್ರಮಾಣ, ಅವರ ಸಂಪರ್ಕಕ್ಕೆ ಬಂದವರ ಸಂಖ್ಯೆ, ಅವರ ಓಡಾಟದ ವ್ಯಾಪ್ತಿ, ಆರೋಗ್ಯ ಸೇವೆಯ ಸನ್ನದ್ಧತೆ ಎಲ್ಲವನ್ನೂ ಆಧರಿಸಿ ಇದನ್ನು ನಿರ್ಧರಿಸಲಾಗುತ್ತದೆ.

**ಲಾಕ್‌ಡೌನ್ ಹಾಗು ಆರೋಗ್ಯ ಸೇವೆ:**

ವಿಶ್ವ ಆರೋಗ್ಯ ಸಂಸ್ಥೆಯ ತುರ್ತಪರಿಸ್ಥಿತಿ ತಜ್ಞ ಮೈಕ್ ರ್‍ಯಾನ್ ಅವರು, ವೈರಸ್‌ನ್ನು ಎದುರಿಸಲು ಬರೀ ಲಾಕ್‌ಡೌನ್ ಸಾಲದು, ಲಾಕ್‌ಡೌನ್‌ನೊಂದಿಗೆ ಸರ್ವಸನ್ನದ್ಧವಾದ ಆರೋಗ್ಯ ಸೇವೆ, ಬಿಗಿ ಕ್ರಮಗಳೂ ಅಗತ್ಯ ಎಂದು ವಿಶ್ವ ಸಮುದಾಯವನ್ನು ಎಚ್ಚರಿಸಿದ್ದಾರೆ.

ಲಾಕ್‌ಡೌನ್‌ನಿಂದಾಗಿ ಸೋಂಕಿತರನ್ನು ಕಂಡು ಹಿಡಿಯುವುದು, ಅವರನ್ನು ಪ್ರತ್ಯೇಕವಾಗಿಡುವುದು, ಅವರೊಂದಿಗೆ ನಿಕಟ ಸಂಪರ್ಕದಲ್ಲಿ ಬಂದವರ ಮೇಲೆ ನಿಗಾ ಇಡುವುದು ಸುಲಭವಾಗುತ್ತದೆ. ಒಮ್ಮೆ ಲಾಕ್‌ಡೌನ್ ತೆರೆದ ಕೂಡಲೇ ವೈರಸ್ ಮತ್ತೆ ತನ್ನ ಹಾವಳಿಯನ್ನು ಆರಂಭಿಸಬಹುದು. ಈ ಪರಿಸ್ಥಿತಿಯಲ್ಲಿ ಸಣ್ಣ ಸಣ್ಣ ಪ್ರಯತ್ನಗಳೂ ದೊಡ್ಡ ಪರಿಣಾಮ ಉಂಟು ಮಾಡಬಲ್ಲವು. ಇಂದು ನೀವು ಮನೆಯೊಳಗಿರುವುದಷ್ಟೇ ಮುಖ್ಯವಲ್ಲ. ನೀವಿರುವ ಊರು ಮತ್ತು ಪಟ್ಟಣದಲ್ಲೇ ಇರಬೇಕು. ಅನಗತ್ಯವಾಗಿ ಹೊರಗೆ ಬೀದಿಗಳಲ್ಲಿ ಮಾರ್ಕೆಟ್‌ಗಳಲ್ಲಿ ಸುತ್ತಾಡುವುದು ಮಾಡಬೇಡಿ.



**ಆರೋಗ್ಯ ಕಾಪಾಡಿಕೊಳ್ಳಿ:**

ಈಗ ವಾತಾವರಣ ಬದಲಾಗುತ್ತಿರುವುದರಿಂದ ಆರೋಗ್ಯದಲ್ಲಿ ಏರುಪೇರು ಸಹಜ. ಜ್ವರ, ಕೆಮ್ಮು ಅಥವಾ ನೆಗಡಿ ಕಾಣಿಸಿಕೊಂಡವರೆಲ್ಲ ಡಾಕ್ಟರ್ ಬಳಿ ಪರೀಕ್ಷೆಗೆ ಹೋಗಬೇಕಿಲ್ಲ. ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸ ಕಂಡರೂ, ವೈದ್ಯರ ಬಳಿ ಹೋಗುವುದು ಬೇಡ. ಕೋವಿಡ್–19 ಜ್ವರದ ಸಾಮಾನ್ಯ ಸ್ವರೂಪ ಹೀಗಿರುತ್ತದೆ.

ಅಂದಹಾಗೆ ರೋಗಿಯಲ್ಲಿ ತನ್ನ ರೋಗಲಕ್ಷಣದ ಬಗ್ಗೆ ಸಹಜವಾದ ಒಂದು ಒಳನೋಟ ಇರುತ್ತದೆ. ಅದು ಏರುತ್ತಿದೆಯೋ, ಇಳಿಯುತ್ತಿದೆಯೋ, ಗಂಭೀರವಾಗಿದೆಯೋ ಎಂಬುದನ್ನು ಆತನೇ ನಿರ್ಧರಿಸಿ, ಟೆಸ್ಟ್‌ಗೆ ಮುಂದಾಗಬೇಕು. ರೋಗ ಲಕ್ಷಣದ ಬಗ್ಗೆ ಅನುಮಾನ ಮೂಡಿದವರೆಲ್ಲರೂ ರಕ್ತ

| ದಿನಗಳು | ಲಕ್ಷಣಗಳು |
|---|---|
| ಮೊದಲನೇ ದಿನ | ಸ್ವಲ್ಪ ತಲೆಭಾರ ಕಂಡು ಬರುತ್ತದೆ. |
| ಎರಡನೇ ಮತ್ತು ಮೂರನೇ ದಿನ | ಸಣ್ಣದಾಗಿ ಜ್ವರ ಆರಂಭವಾಗುತ್ತದೆ, ಕೆಮ್ಮು ಕಾಣಿಸಬಹುದು, ಗಂಟಲು ತುರಿಸಬಹುದು. |
| ನಾಲ್ಕನೇ ದಿನ | ತಲೆನೋವು ಕಾಣಿಸಿಕೊಳ್ಳಬಹುದು. |
| ಐದನೇ ದಿನ | ಹೊಟ್ಟೆ ನೋವು, ಭೇದಿ ಉಂಟಾಗಬಹುದು, ತಲೆನೋವು ಮತ್ತು ಜ್ವರ ಹೆಚ್ಚಬಹುದು. |
| ಆರು ಮತ್ತು ಏಳನೇ ದಿನ | ತಲೆನೋವು, ಜ್ವರ, ಭೇದಿ ಇಳಿಯುತ್ತ ಹೋಗುತ್ತದೆ. |
| ಎಂಟನೇ ದಿನ | ಈ ಲಕ್ಷಣಗಳೆಲ್ಲ ಕಡಿಮೆಯಾಗಬೇಕು. ಕಡಿಮೆಯಾದರೆ, ನಿಮ್ಮ ದೇಹ ಕೋವಿಡ್ ಜ್ವರಕ್ಕೆ ಪ್ರತಿರೋಧ ಶಕ್ತಿ ಬೆಳೆಸಿಕೊಂಡಿದೆ ಎಂದು ಅರ್ಥ. |
| ಎಂಟು ಅಥವಾ ಒಂಬತ್ತನೇ ದಿನ | ಇದು ಕಡಿಮೆಯಾಗದಿದ್ದರೆ, ಏರಿಳಿಯುವಿಕೆ ಕಂಡುಬರುತ್ತಿದ್ದರೆ, ಆಗ ಕೋವಿಡ್–19 ಟೆಸ್ಟ್ ಮಾಡಿಸಿಕೊಳ್ಳಬೇಕು. |





Downloaded From: www.kpscvaani.com



ಪರೀಕ್ಷೆ, ಕೋವಿಡ್–19 ಪರೀಕ್ಷೆ ಮಾಡಿಸಿಕೊಳ್ಳಬೇಕಾದ ಅನಿವಾರ್ಯತೆ ಇಲ್ಲ. 85% ಮಂದಿಗೆ ಕೋವಿಡ್–19 ಏನೂ ಮಾಡುವುದಿಲ್ಲ. ಸದ್ಯ ನಮ್ಮ ದೇಶದಲ್ಲಿ 1.50 ಲಕ್ಷ ಪರೀಕ್ಷಾ ಕಿಟ್‌ಗಳು ಮಾತ್ರ ಇವೆ. ಹಾಗಾಗಿ ಕೇಂದ್ರ ಸರ್ಕಾರವು ಮತ್ತಷ್ಟು ಪರೀಕ್ಷಾ ಕಿಟ್‌ಗಳನ್ನು ಆಮದು ಮಾಡಿಕೊಳ್ಳಲು ಸಿದ್ಧತೆ ನಡೆಸಿದೆ.

**ಸ್ವಚ್ಛತೆಗೆ ಆದ್ಯತೆ ಕೊಡಿ:**

ಕೊರೊನಾ ವೈರಸ್ ತಡೆಗಟ್ಟುವ ನಿಟ್ಟಿನಲ್ಲಿ ಹೆಚ್ಚು ಸ್ವಚ್ಛತೆಗೆ ಪ್ರಾಮುಖ್ಯತೆ ನೀಡಬೇಕಿದೆ. ನಮ್ಮ ಸುತ್ತಮುತ್ತಲ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕಿದೆ.

**1. ಸೋಪ್ / ಹ್ಯಾಂಡ್ ಸ್ಯಾನಿಟೈಸರ್ ಬಳಸಿ:**

- ಆಗಾಗ ಸೋಪು ಮತ್ತು ನೀರಿನಿಂದ ಕನಿಷ್ಠ 20 ಸೆಕೆಂಡ್‌ಗಳವರೆಗೆ ಕೈ ತೊಳೆಯುವುದು ಅತ್ಯುತ್ತಮ ಮಾರ್ಗ.
- ಕನಿಷ್ಠ 70% ಆಲ್ಕೋಹಾಲ್‌ನಿಂದ ತಯಾರಿಸಿದ ಹ್ಯಾಂಡ್ ಸ್ಯಾನಿಟೈಸರ್‌ನಿಂದ ಕನಿಷ್ಠ 20 ಸೆಕೆಂಡ್ ಕೈ ಉಜ್ಜಿಕೊಳ್ಳಿ,
- ಕೊರೊನಾ ವೈರಸ್ ಸೋಂಕಿತರನ್ನು ಆರೈಕೆ ಮಾಡುವಾಗ ಇಲ್ಲವೇ ಚಿಕಿತ್ಸೆ ನೀಡುವಾಗ ತಪ್ಪದೇ ಹ್ಯಾಂಡ್ ಸ್ಯಾನಿಟೈಸರ್‌ಗಳನ್ನು ಬಳಸಬೇಕು.
- ನಿಮ್ಮ ಕೈಗಳು ಕೊಳಕಾಗಿದ್ದರೆ, ಧೂಳು ಮೆತ್ತಿಕೊಂಡಿದ್ದರೆ ಅಂತಹ ಸಂದರ್ಭದಲ್ಲಿ ಸೋಪ್ ಮತ್ತು ನೀರಿನಿಂದ ತೊಳೆಯುವುದು ಹೆಚ್ಚು ಉಪಯುಕ್ತ.
- ಹೊರಗಿನಿಂದ ಮನೆಗೆ ಬಂದಾಗ ಕೂಡಲೇ ಕೈಗಳನ್ನು ಸೋಪಿನಿಂದ ಚೆನ್ನಾಗಿ ತೊಳೆದುಕೊಳ್ಳಿ.

**ಕರ್ಚಿಫ್ / ಟಿಶ್ಯೂ ಬಳಸಿ:** ಕಣ್ಣು, ಮೂಗು, ಬಾಯಿಯನ್ನು ಪದೇ ಪದೇ ಮುಟ್ಟಬಾರದು. ಕೆಮ್ಮುವಾಗ ಅಥವಾ ಸೀನುವಾಗ ಮೂಗು ಮತ್ತು ಬಾಯಿಯನ್ನು ಕರ್ಚಿಫ್ ಇಲ್ಲವೆ ಟಿಶ್ಯೂನಿಂದ ಮೂಗು, ಬಾಯಿ ಮುಚ್ಚಿಕೊಳ್ಳಿ. ಕರ್ಚಿಫ್ ಇಲ್ಲವೆ ಟಿಶ್ಯೂ ಇಲ್ಲದಿದ್ದಾಗ ಮೊಣಕೈಯನ್ನು ಅಡ್ಡ ಇಟ್ಟುಕೊಳ್ಳಬಹುದು. ಬಳಸಿದ ಕೂಡಲೇ ಟಿಶ್ಯೂವನ್ನು ಕೂಡಲೇ ಕಸದ ಬುಟ್ಟಿಗೆ ಹಾಕಿ ತಕ್ಷಣವೇ ಕೈ ತೊಳೆದುಕೊಳ್ಳಿ.

ನಿಮ್ಮ ಬಟ್ಟೆಗಳನ್ನು ಪ್ರತಿದಿನ ತೊಳೆಯಿರಿ:ನಿಮ್ಮ ಬಟ್ಟೆಗಳನ್ನು ಪ್ರತಿದಿನ ತೊಳೆಯಿರಿ. ಅಂದರೆ ಸುರಕ್ಷಿತ ಮತ್ತು ಆರೋಗ್ಯಕರವಾಗಿರಿ. ಇಂದು ಕೊಳಕು ಎನ್ನುವಂತದ್ದು ಕೇವಲ ನಿಮ್ಮ ಕಣ್ಣಿಗೆ ಕಾಣುತ್ತಿರುವುದು ಮಾತ್ರವಲ್ಲ. ಅಗೋಚರವಾಗಿರುವ ಅನೇಕ ವೈರಸ್‌ಗಳು ನಿಮ್ಮ ಬಟ್ಟೆಗಳಿಗೆ ತಗುಲಬಹುದು ಮತ್ತು ಇದು ದೊಡ್ಡ ಖಾಯಿಲೆಗೆ ಕಾರಣವಾಗಬಹುದು.

**ಮಾಸ್ಕ್ ಯಾರು ಬಳಸಬೇಕು:**

- ಯಾವುದೇ ವ್ಯಕ್ತಿ ಕೆಮ್ಮು ಅಥವಾ ಸೀನುವಾಗ ಅಥವಾ ಜ್ವರ ಬಂದಾಗ ಈ ಮಾಸ್ಕ್ ಧರಿಸಬೇಕು. ಈ ಮೂಲಕ ಸೋಂಕು ಹರಡುವುದನ್ನು ತಡೆಗಟ್ಟಬಹುದು.
- ಆರೋಗ್ಯ ಸೇವೆ ಪಡೆಯಲು ವೈದ್ಯರ ಭೇಟಿಗೆ ತೆರಳಿದಾಗ ಮಾಸ್ಕ್ ಧರಿಸಬೇಕು.
- ಸೋಂಕಿತ ವ್ಯಕ್ತಿಯ ಆರೈಕೆ ಮಾಡುವಾಗ ಮಾಸ್ಕ್ ಬಳಸುವುದು ಕಡ್ಡಾಯ.
- ಮನೆಯಲ್ಲಿರುವ ಕುಟುಂಬದ ಯಾವುದೇ ಸದಸ್ಯರಿಗೆ ಸೋಂಕಿನ ಶಂಕೆ ಇದ್ದರೆ ಇಲ್ಲವೇ ದೃಢಪಟ್ಟಿದ್ದರೆ ಉಳಿದ ಎಲ್ಲ ಸದಸ್ಯರು ಕಡ್ಡಾಯವಾಗಿ ಮೂರು ಹಂತದ ಮೆಡಿಕಲ್ ಮಾಸ್ಕ್ ಬಳಸಬೇಕು.

**ಆರೋಗ್ಯವಂತರು ಮಾಸ್ಕ್ ಧರಿಸಬೇಕಿಲ್ಲ:**

- ಕೊರೊನಾ ವೈರಸ್ ಲಕ್ಷಣಗಳಿಲ್ಲದ ಯಾವುದೇ ವ್ಯಕ್ತಿ ಮಾಸ್ಕ್ ಧರಿಸುವ ಅಗತ್ಯ ಇಲ್ಲ. ಯಾಕೆಂದರೆ ಇದು ಮಾಸ್ಕ್ ಧರಿಸುವವರಲ್ಲಿ ಭದ್ರತೆಯ ಭ್ರಮೆಯನ್ನು ಹುಟ್ಟುಹಾಕಿ ಅವರು ಕೈತೊಳೆಯುವ ಇಲ್ಲವೇ ಇತರೆ ಸುರಕ್ಷಾಕ್ರಮಗಳಿಂದ ದೂರ ಉಳಿಯುವಂತೆ ಮಾಡುತ್ತದೆ.

**ಮಾಸ್ಕ್ ಹೇಗಿರಬೇಕು:**

ಯಾವ ರೀತಿಯ, ಯಾವ ಹಂತದ ಮಾಸ್ಕ್ ಧರಿಸಬೇಕೆಂಬುದು ಕೂಡ ಮುಖ್ಯವಾಗುತ್ತದೆ. ಮೂರು ಹಂತದ ಮೆಡಿಕಲ್ ಮಾಸ್ಕ್‌ಗಳಾಗಿರಬೇಕು. ಯಾಕೆಂದರೆ ಇದು ಸೋಂಕು ಹರುಡುವುದನ್ನು ತಡೆಯುತ್ತದೆ.

**ಮಾಸ್ಕ್ ಧರಿಸುವುದು ಹೇಗೆ:**

- ಮಾಸ್ಕ್ ಧರಿಸಲೇಬೇಕಾದ ಅಗತ್ಯ ಬಿದ್ದರೆ, ಅದನ್ನು ಹೇಗೆ ಧರಿಸಿಕೊಳ್ಳಬೇಕು ಎಂಬುದನ್ನು ತಿಳಿದುಕೊಂಡಿರಲೇಬೇಕು. ಬೇಕಾಬಿಟ್ಟಿಯಾಗಿ ಉಪಯೋಗಿಸಿದರೆ, ಧರಿಸಿದರೆ ಮಾಸ್ಕ್‌ನಿಂದ ಯಾವುದೇ ರೀತಿಯ ಪ್ರಯೋಜನವಾಗದು.
- ಮಾಸ್ಕ್ ಧರಿಸುವ ಮುನ್ನ ನಿಮ್ಮ ಕೈಗಳನ್ನು ಅಲ್ಕೋಹಾಲ್ ಆಧರಿತ ಹ್ಯಾಂಡ್ ಸ್ಯಾನಿಟೈಸರ್‌ನಿಂದ ರಬ್ ಅಥವಾ ಸೋಪ್ ಮತ್ತು ನೀರಿನಿಂದ ಕೈ ತೊಳೆಯಿರಿ.
- ಮಾಸ್ಕ್‌ನಿಂದ ನಿಮ್ಮ ಬಾಯಿ ಮತ್ತು ಮೂಗು ಮುಚ್ಚುವಂತಿರಲಿ. ಹಾಗೆಯೇ ಮಾಸ್ಕ್ ಮತ್ತು ಮುಖದ ಮಧ್ಯೆ ಗ್ಯಾಪ್ ಇರದಂತೆ ನೋಡಿಕೊಳ್ಳಿ.
- ಮೇಲಿಂದ ಮೇಲೆ ಮಾಸ್ಕ್ ಮುಟ್ಟಲು ಹೋಗಬೇಡಿ. ಒಂದು ವೇಳೆ, ಮುಟ್ಟಿದರೆ ಕೈಗಳನ್ನು ಸ್ವಚ್ಛ ಮಾಡಿಕೊಳ್ಳಿ.
- ಸಿಂಗಲ್ ಯೂಸ್ ಮಾಸ್ಕ್‌ಗಳನ್ನು ಮರು ಬಳಸಬೇಡಿ.

**ಮಾಸ್ಕ್ ತೆಗೆಯುವುದು ಹೇಗೆ:**

ಮಾಸ್ಕ್ ಅನ್ನು ನಿಮ್ಮ ಮುಖದಿಂದ ತೆಗೆಯಬೇಕಿದ್ದರೆ ಅದಕ್ಕೂ ಒಂದು ರೀತಿಯಿದೆ. ಅದೇ ರೀತಿಯಲ್ಲಿ ತೆಗೆದಾಗ ಮಾತ್ರ ಸೋಂಕು ತಗುಲುವುದನ್ನು ತಡೆಯಬಹುದು. ಮಾಸ್ಕ್ ಅನ್ನು ಹಿಂಬದಿಯಿಂದ ತೆಗೆಯಬೇಕು.ಯಾವುದೇ ಕಾರಣಕ್ಕೂ ಮುಂಭಾಗಕ್ಕೆ ಟಚ್ ಮಾಡಬಾರದು.

**ಬಳಸಿದ ಮಾಸ್ಕ್ ಏನು ಮಾಡಬೇಕು:**

- ಕಡಿಮೆ ದರದ ಮಾಸ್ಕ್‌ಗಳನ್ನು ಒಮ್ಮೆ ಮಾತ್ರ ಬಳಸಿ ಎಸೆಯಬೇಕು. ಮರುಬಳಕೆ ಸಲ್ಲದು.
- ತೆಗೆದ ಮಾಸ್ಕ್ ಅನ್ನು ಮುಚ್ಚಿದ ಡಸ್ಟ್‌ಬಿನ್‌ಗೇ ಹಾಕಬೇಕು.
- ಕೈಗಳನ್ನು ಆಲ್ಕೋಹಾಲ್ ಆಧರಿತ ಹ್ಯಾಂಡ್ ಸ್ಯಾನಿಟೈಸರ್‌ನಿಂದ ರಬ್ ಅಥವಾ ಸಾಬೂನು ಹಾಕಿ ತೊಳೆಯಿರಿ.

**ಸ್ಯಾನಿಟೈಸರ್, ಮಾಸ್ಕ್‌ಗೆ ಸರಕಾರದಿಂದಲೇ ಬೆಲೆ ನಿಗದಿ:**

ದೇಶಾದ್ಯಂತ ಹ್ಯಾಂಡ್ ಸ್ಯಾನಿಟೈಸರ್ ಮತ್ತು ಮಾಸ್ಕ್‌ಗಳ ಮಾರಾಟ ದಂಧೆ ತಡೆಯುವ ನಿಟ್ಟಿನಲ್ಲಿ ಸರಕಾರ ಇವುಗಳ ಗರಿಷ್ಠ ಬೆಲೆ ಮೇಲೆ ಮಿತಿ ಹೇರಿದೆ. 200 ಮಿ.ಲೀ. ಹ್ಯಾಂಡ್ ಸ್ಯಾನಿಟೈಸರ್ ಬಾಟಲಿಯ ಗರಿಷ್ಠ ರಿಟೇಲ್ ದರವನ್ನು 100ರೂ., ಎರಡು ಪದರಗಳ ಮಾಸ್ಕ್‌ಗಳಿಗೆ 8 ರೂ. ಮತ್ತು ಮೂರು ಪದರಗಳ ಮಾಸ್ಕ್‌ಗೆ 10 ರೂ.ಗರಿಷ್ಠ ಬೆಲೆ ನಿಗದಿಪಡಿಸಿ ಅಧಿಸೂಚನೆ ಹೊರಡಿಸಿದೆ. ಈ ದರಗಳು ಈ ವರ್ಷ ಜೂನ್ 30 ರ ವರೆಗೂ ಅನ್ವಯವಾಗಲಿದೆ.

### ಆಯುಷ್ ಸಚಿವಾಲಯದ ಸಲಹೆ ಹೀಗಿದೆ:

ಮೋದಿ ಸರಕಾರದ ಆಯುಷ್ ಸಚಿವಾಲಯ ಕೊರೊನಾ ವೈರಸ್ ತಡೆಗಟ್ಟುವ ವಿಧಾನ ಪ್ರಕಟಿಸಿದೆ.

**ಹೀಗೆ ಮಾಡಿ:**

- ತಾಜಾ, ಬಿಸಿಯಾದ, ಜೀರ್ಣಕ್ಕೆ ಸುಲಭವಾದ ಆಯಾ ಕಾಲದಲ್ಲಿ ಲಭ್ಯವಿರುವ ತರಕಾರಿ ಮತ್ತು ಹಣ್ಣುಗಳನ್ನು ಸೇವಿಸುವುದು ಉತ್ತಮ.
- ತುಳಸಿ, ಶುಂಠಿ ಹಾಗೂ ಅರಿಶಿಣಗಳನ್ನು ಬಿಸಿನೀರಿನಲ್ಲಿ ಕುದಿಸಿ ಆಗಾಗ ಸ್ವಲ್ಪ ಕುಡಿಯವುದು ಒಳ್ಳೆಯದು.
- ಯೋಗಾಸನ ಹಾಗೂ ಪ್ರಾಣಾಯಾಮ ಮಾಡುವುದರಿಂದ ಕೊರೊನಾ ವೈರಸ್ ಸೋಂಕು ತಗಲುವುದನ್ನು ತಡೆಯಬಹುದು.

**ಹೀಗೆ ಮಾಡಬೇಡಿ:**

- ಶೀತಲೀಕರಿಸಿದ ಪದಾರ್ಥಗಳನ್ನು ಅಂದರೆ ತಂಪು ಪಾನೀಯ, ಐಸ್‌ಕ್ರೀಮ್ ಸೇವನೆ ಸದ್ಯಕ್ಕೆ ಬೇಡವೇ ಬೇಡ.
- ತಂಪಾದ ಗಾಳಿ ಬೀಸುವ ಸ್ಥಳದಿಂದ ದೂರವಿರುವುದು ಒಳ್ಳೆಯದು.

**ಆಹಾರ ಮತ್ತು ಆರೋಗ್ಯ:**

ಒಳ್ಳೆಯ ಆಹಾರ ಕ್ರಮಗಳು ಮತ್ತು ಆರೋಗ್ಯ ಕ್ರಮಗಳನ್ನು ಪಾಲಿಸಿದರೆ ನಾವು ನಮ್ಮಲ್ಲಿರುವ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು. ಹೀಗೆ ನಾವು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಂಡರೆ, ನಮ್ಮ ದೇಹವು ಕೊರೊನಾ ವೈರಸ್ ವಿರುದ್ಧ ಹೋರಾಡುವ ಶಕ್ತಿಯನ್ನು ಪಡೆದುಕೊಳ್ಳುತ್ತದೆ. ನೆನಪಿರಲಿ "Prevention is better than cure".ಕಾಯಿಲೆ ಬಂದ ಮೇಲೆ ಅದನ್ನು ವಾಸಿ ಮಾಡಿಕೊಳ್ಳುವುದಕ್ಕಿಂತ, ಕಾಯಿಲೆಯು ಬರದಂತೆ ತಡೆಯುವುದು ಜಾಣತನ. ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಮಾರ್ಗವಿದೆ.

**ಇತರೆ ಉತ್ತಮ ಆರೋಗ್ಯ ಕ್ರಮಗಳು:**

ಬಾಯಿಯ ರುಚಿಗಾಗಿ ಅಲ್ಲದೆ ಆರೋಗ್ಯಕ್ಕಾಗಿ ಆಹಾರ ಸೇವಿಸುವುದು ನಮ್ಮ ಜೀವನಶೈಲಿಯಾಗಬೇಕು. ಆದ್ದರಿಂದ ಈ ಕೆಳಕಂಡಂತೆ ಇರುವ ಆಹಾರ ಹಾಗೂ ಆರೋಗ್ಯ ಕ್ರಮಗಳನ್ನು ಪಾಲಿಸಿ.

**ಇವುಗಳ ಬಳಕೆ ಕಡಿಮೆ ಮಾಡಿ:**

- ಸಕ್ಕರೆ ಬಳಸುವುದನ್ನು ಕಡಿಮೆ ಮಾಡಿ. ಯಾಕೆಂದರೆ ಸಕ್ಕರೆ ನಮ್ಮ ದೇಹದಲ್ಲಿರುವ ರೋಗ ನಿರೋಧಕ ಶಕ್ತಿಯನ್ನು ಕುಗ್ಗಿಸುತ್ತದೆ.
- ರಿಫೈನ್ಡ್ ಎಣ್ಣೆ, ಮೈದಾ, ಕರಿದ ಪದಾರ್ಥ, ರಾಸಾಯನಿಕಯುಕ್ತ ಆಹಾರಗಳ ಬಳಕೆಯನ್ನು ಆದಷ್ಟು ಕಡಿಮೆ ಮಾಡಬೇಕು. ಏಕೆಂದರೆ ಇವುಗಳು ರೋಗ ನಿರೋಧಕ ಶಕ್ತಿಯನ್ನು ಕುಂಠಿತಗೊಳಿಸುತ್ತವೆ.

**ಹೀಗೆ ಮಾಡಿ:**

ಈ ಕ್ರಮಗಳನ್ನು ಪಾಲಿಸಿದರೆ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು.

- ಯಥೇಚ್ಛವಾಗಿ ನೀರು ಕುಡಿಯಿರಿ.
- ಬೆಲ್ಲ, ಜೇನು ತುಪ್ಪ ಹೆಚ್ಚಾಗಿ ಬಳಸಿ.
- ಸಾಂಬಾರ ಪದಾರ್ಥಗಳಾದ ಶುಂಠಿ ಕಾಳುಮೆಣಸು, ಜೀರಿಗೆ, ಲವಂಗ, ದಾಲ್ಚಿನ್ನಿ (ಚಕ್ಕೆ), ಎಳ್ಳು, ಅರಿಶಿಣ, ಕೊತ್ತಂಬರಿಗಳನ್ನು ಹೆಚ್ಚಾಗಿ ಬಳಸಬೇಕು.
- ತುಳಸಿ ಎಲೆಗಳನ್ನು ನೀರಿನಲ್ಲಿ ಹಾಕಿ ಕುದಿಸಿ ಕುಡಿಯಬೇಕು.
- ಬೆಣ್ಣೆ ತೆಗೆದ ಮಜ್ಜಿಗೆಗೆ ಶುಂಠಿ, ಕಾಳುಮೆಣಸು, ಕೊತ್ತಂಬರಿ ಸೊಪ್ಪು, ಸೈಂಧವ ಲವಣ ಹಾಕಿ ಮಸಾಲಾ ಮಜ್ಜಿಗೆ ಮಾಡಿ ಕುಡಿಯುವುದು ಉತ್ತಮ.
- ಜ್ಯೇಷ್ಠಮಧುವಿನ ಚಿಕ್ಕ ತುಣುಕನ್ನು ಆಗಾಗ ಬಾಯಲ್ಲಿಟ್ಟು ಚೀಪುತ್ತಿರುವುದು ಒಳ್ಳೆಯದು.





Downloaded From: www.kpscvaani.com



# ಕೊರೊನಾ ಸೋಂಕಿತರ ಪತ್ತೆಗೆ

## ಮೊಬೈಲ್ ತಂತ್ರಜ್ಞಾನ ಅಭಿವೃದ್ಧಿ

> **ಈ ತಂತ್ರಾಂಶದಿಂದ ಸೋಂಕಿತರು ಎಲ್ಲೆಲ್ಲಿ ಹೋಗಿದ್ದರು ಎನ್ನುವುದು ತಿಳಿಯುವುದರಿಂದ ಸಾರ್ವಜನಿಕರು ತಮಗೆ ಏನೂ ಆಗಿಲ್ಲ ಎಂದು ಕೊಳ್ಳುವ ಬದಲು ಎಚ್ಚರ ವಹಿಸಬಹುದು. ಕ್ವಾರಂಟೈನ್ ಎಲ್ಲೆಲ್ಲಿ ಇದೆ ಎಂದು ತಿಳಿದು ಆ ಜಾಗಕ್ಕೆ ಹೋಗದೆ ಸೋಂಕಿನಿಂದ ತಪ್ಪಿಸಿಕೊಳ್ಳಬಹುದು. ಮನೀಶ್ ಮೌದ್ಗಿಲ್ ಅವರು ಕೊರೊನಾ ಕುರಿತ ತಂತ್ರಾಂಶ ಅಭಿವೃದ್ಧಿ ವಿಭಾಗದ ಮುಖ್ಯಸ್ಥರು.**

**ಶಿವಕುಮಾರ್ ಬೆಳ್ಳಿತಟ್ಟೆ**

ಮನುಕುಲದ ಸಾಂಕ್ರಾಮಿಕ ರೋಗ ಕೊರೊನಾ ಸೋಂಕಿತರು ಮತ್ತು ಶಂಕಿತರು ಎಲ್ಲೆಲ್ಲಿ ಇದ್ದಾರೆ. ಅವರ ಸ್ಥಿತಿಗತಿ ಹೇಗಿದೆ ಎನ್ನುವ ಮಾಹಿತಿಯನ್ನು ನೀವು ಮನೆಯಿಂದ ಹೊರ ಹೋಗದೆ ನಿಮ್ಮ ಮೊಬೈಲ್ ಮೂಲಕವೇ ತಿಳಿಯಬಹುದು.

ಅಷ್ಟೇ ಅಲ್ಲ, ಸೋಂಕಿತ ವ್ಯಕ್ತಿ ಎಲ್ಲೆಲ್ಲಿ ಪ್ರವಾಸ ಮಾಡಿ ಬಂದಿದ್ದಾರೆ. ಯಾರನ್ನೆಲ್ಲಾ ಸಂಪರ್ಕಿಸಿ ಬಂದಿದ್ದಾರೆ ಎನ್ನುವ ಮಾಹಿತಿಯನ್ನೂ ಜನತೆ ತಮ್ಮ ಮೊಬೈಲ್ ಮೂಲಕವೇ ಪತ್ತೆ ಮಾಡಿಕೊಳ್ಳಬಹುದು. ಆ ಮೂಲಕ ಸೋಂಕಿತರಿಂದ ದೂರ ಕಾಯ್ದುಕೊಂಡು, ರೋಗ ತಗುಲದಂತೆ ಎಚ್ಚರ ವಹಿಸಬಹುದು. ಇದಕ್ಕೆ ನೀವು ಮಾಡಬೇಕಿರುವುದು ಇಷ್ಟೇ. ನಿಮ್ಮ ಮೊಬೈಲ್‌ಗೆ ಕೊರೊನಾ ವಾಚ್ ಎಂಬ ತಂತ್ರಾಂಶವನ್ನು ಡೌನ್ ಲೋಡ್ ಮಾಡಿಕೊಂಡರೆ ಸಾಕು. ನೀವು ಕುಳಿತಲ್ಲೇ ಕೊರೊನಾ ಸೋಂಕಿತರು ಮತ್ತು ಶಂಕಿತರ ಎಲ್ಲಾ ಮಾಹಿತಿಗಳನ್ನು ಪಡೆದುಕೊಳ್ಳಬಹುದು.

ರಾಜ್ಯ ಸರಕಾರದ ಸುಮಾರು 6 ಇಲಾಖೆಗಳು ಒಗ್ಗೂಡಿ ಇಂಥದೊಂದು ಹೊಸ ಮೊಬೈಲ್ ತಂತ್ರಾಂಶ ಸಿದ್ಧವಾಗಿದ್ದು, ಇದಕ್ಕೆ ಆರೋಗ್ಯ ಸಚಿವ ಶ್ರೀರಾಮುಲು ಅವರು ಮುಖಪುಟ ಬಿಡುಗಡೆ ಮಾಡುವ ಮೂಲಕ ಚಾಲನೆ ನೀಡಿದ್ದಾರೆ. ಇದನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಂಡು ಕರೋನಾ ದಿಂದ ದೂರವಾಗುತ್ತಿದ್ದಾರೆ.

ಕೊರೊನಾ ವಾಚ್ ಎಂಬ ಹೆಸರಿನಲ್ಲಿ ಈ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದವರು ಐಎಎಸ್ ಅಧಿಕಾರಿ ಮನೀಶ್ ಮೌದ್ಗಿಲ್ ಅವರು. ಸರ್ವೆ ಇಲಾಖೆಯಲ್ಲಿನ ದಾಖಲೆಗಳನ್ನು ಡಿಜಿಟಲ್ ಮಾಡಿ ಜನರಿಗೆ ಸುಲಭವಾಗಿ ಸೇವೆ ಸಿಗುವಂತೆ ಮಾಡಿರುವ ಈ ಅಧಿಕಾರಿಯ ತಾಂತ್ರಿಕ ಕ್ಷಮತೆಯನ್ನು ಗಮನಿಸಿ ಸರಕಾರ ಕೊರೊನಾ ಕುರಿತ ತಂತ್ರಾಂಶ ಮತ್ತು ಸಹಾಯವಾಣಿ ನಿರ್ವಹಣೆ ವಿಭಾಗದ ಮುಖ್ಯಸ್ಥರನ್ನಾಗಿ ಮಾಡಿದೆ. ಮೌದ್ಗಿಲ್ ಅವರು ಕಂದಾಯ ಇಲಾಖೆ, ಆರೋಗ್ಯ ಇಲಾಖೆ, ಡಿಪಿಎಆರ್, ಭೂಮಿ ನಿರ್ವಹಣೆ, ಸರ್ವೆ ಇಲಾಖೆ ಹಾಗೂ ಬಿಬಿಎಂಪಿ ಸಂಸ್ಥೆಗಳ ಸಮನ್ವಯದೊಂದಿಗೆ ಈ ತಂತ್ರಾಂಶ ನಿರ್ಮಿಸಿ ಉತ್ತಮ ರೀತಿಯಲ್ಲಿ ಬಳಕೆಯಾಗುವಂತೆ ಮಾಡಿದ್ದಾರೆ.

ಆರಂಭದಲ್ಲಿ ಈ ತಂತ್ರಾಂಶದಲ್ಲಿ ಕೊರೊನಾ ಸೋಂಕಿತರು



ಹೋಗಿದ್ದ ಸ್ಥಳಗಳ ಮಾಹಿತಿ ನೀಡುತ್ತಿತ್ತು. ಈಗ ಹೋಮ್ ಕ್ವಾರಂಟೈನ್ ( ಪ್ರತ್ಯೇಕ ವ್ಯವಸ್ಥೆ) ನಲ್ಲಿರುವ ಶಂಕಿತರ ಮಾಹಿತಿ ನೀಡಲಿದೆ. ಅವರು ಇರುವ ಸ್ಥಳಗಳನ್ನು ಗೂಗಲ್ ಮ್ಯಾಪ್ ಮೂಲಕ ನೋಡುವ ವ್ಯವಸ್ಥೆ ಮಾಡಲಾಗುತ್ತಿದೆ. ಇನ್ನೂ ಮುಂದುವರೆದು ಸೋಂಕಿತನ ಸ್ಥಿತಿ ಹೇಗಿದೆ, ಸದ್ಯ ಅವರು ಏನು ಮಾಡುತ್ತಿದ್ದಾರೆ ಎನ್ನುವ ಲೈವ್ ಮಾಹಿತಿಯನ್ನೂ ಪಡೆಯಬಹುದಾಗಿದೆ.

ಇದೊಂದು ರಿಯಲ್ ಟೈಮ್ ಡಾಟವನ್ನು ಉಚಿತಾಗಿ ಪಡೆಯುವ ವಿನೂತನ ವ್ಯವಸ್ಥೆಯಾಗಿದ್ದು, ದೇಶದಲ್ಲೇ ಪ್ರಥಮ ಪ್ರಯೋಗ ಎನ್ನುವ ಹೆಗ್ಗಳಿಗೆ ಪಾತ್ರವಾಗಲಿದೆ. ವಿಶೇಷವಾಗಿ ಇದರಿಂದ ಕೊರೊನಾ ಸೋಂಕಿತರ ಪೋಷಕರು, ಸಂಬಂಧಿಕರಿಗೆ ವೈದ್ಯರು ಹೇಳುವುದಕ್ಕೂ ಮೊದಲೇ ಮೊಬೈಲ್ ಮೂಲಕ ಮಾಹಿತಿ ತಿಳಿಯಲಿದೆ ಎನ್ನುತ್ತಾರೆ ಅಧಿಕಾರಿಗಳು.

### ಡ್ಯಾಶ್ ಬೋರ್ಡ್‌ನಿಂದ ಇನ್ನಷ್ಟು ಮಾಹಿತಿ:

ಈ ಮಧ್ಯೆ ರಾಜಧಾನಿ ದೆಹಲಿಯಿಂದ ಸಣ್ಣಪುಟ್ಟ ಹಳ್ಳಿಗಳವರೆಗೂ ಕೊರೊನಾ ಸೋಂಕಿತರು ಮತ್ತು ಪ್ರಕರಣಗಳ ಕ್ಷಣಕ್ಷಣದ ಮಾಹಿತಿಗಾಗಿ ಕೊರೊನಾ ಡ್ಯಾಶ್ ಬೋರ್ಡ್ ಆರಂಭಿಸಿದೆ. ಈ ತಂತ್ರಾಂಶದಿಂದ ಜನತೆ ಕೊರೊನಾ ರೋಗದಿಂದ ಇನ್ನೂ ಹೆಚ್ಚಿನ ರೀತಿಯಲ್ಲಿ ತಪ್ಪಿಸಿಕೊಳ್ಳಬಹುದು. http//karunadu.karnataka.gov.in ವಿಳಾಸದಲ್ಲಿ ಇದನ್ನು ನೋಡಿ ಸದ್ಬಳಕೆ ಮಾಡಿಕೊಳ್ಳಬಹುದು.

ಈ ತಂತ್ರಾಂಶದಿಂದ ರಾಜ್ಯಾದ್ಯಂತ ಎಷ್ಟು ಪ್ರಕರಣಗಳಿವೆ. ಸೋಂಕಿತರು ಎಲ್ಲೆಲ್ಲಿ ಇದ್ದಾರೆ. ಪ್ರತ್ಯೇಕವಾಗಿರುವ ಸೋಂಕಿತರು ಎಲೆಲ್ಲಿ ಇದ್ದಾರೆ ಎನ್ನುವುದನ್ನು ತಿಳಿಯಬಹುದು. ಕೊರೊನಾ ಚಿಕಿತ್ಸಾ ಕೇಂದ್ರಗಳು, ವೆಂಟಿಲೇಟರ್ ವ್ಯವಸ್ಥೆ, ತೀವ್ರ ನಿಗಾ ಘಟಕಗಳ ಸ್ಥಿತಿ, ಪರೀಕ್ಷಾ ಕೇಂದ್ರಗಳು, ಪರೀಕ್ಷಾ ಕಿಟ್ ಗಳ ಲಭ್ಯತೆ ಹಾಗೂ ಸೋಂಕು ನಿವಾರಣೆ ಹೇಗಿದೆ ಎನ್ನುವ ಮಾಹಿತಿಗಳು ಇದರಲ್ಲಿ ಲಭ್ಯ ಇರುತ್ತದೆ. ಈ ಸೌಲಭ್ಯವನ್ನು ವೈದ್ಯಕೀಯ ಶಿಕ್ಷಣ ಸಚಿವ ಕೆ.ಸುಧಾಕರ್ ಅವರು ಉದ್ಘಾಟಿಸಿದ್ದು, ಜನತೆ ಈ ವೆಬ್ ಸೈಟ್‌ನಿಂದಲೂ ಹೆಚ್ಚಿನ ಮಾಹಿತಿ ಪಡೆಯುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಕೊರೊನಾ ವಾಚ್ ಏನು ಮಾಡುತ್ತದೆ:**

ಇದೊಂದು ಜಿಪಿಎಸ್ ಆಧಾರಿತ ತಂತ್ರಾಂಶವಾಗಿದ್ದು, ಇದನ್ನು ಅಭಿವೃದ್ಧಿಪಡಿಸಿ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಉಚಿತವಾಗಿ ಲಭ್ಯವಾಗುವಂತೆ ಬಿಡಲಾಗಿದೆ. ಈ ತಂತ್ರಾಂಶದಲ್ಲಿ ಸೋಂಕಿತರ ಮಾಹಿತಿಗಳನ್ನು ಸಂಗ್ರಹಿಸಿ ಅಪ್ ಲೋಡ್ ಮಾಡಲಾಗಿದೆ. ಹಾಗೆಯೇ ಈತ ಸೋಂಕು ತಗುಲಿದ ನಂತರ ಎಲ್ಲೆಲ್ಲಿ ಹೋಗಿ ಬಂದಿದ್ದಾನೆ ಎನ್ನುವ ಮಾಹಿತಿಯನ್ನೂ ಹಾಕಲಾಗಿದೆ.

ಸೋಂಕಿತರು ಪ್ರಸ್ತುತ ಏನು ಮಾಡುತ್ತಿದ್ದಾರೆ. ಅವರ ಆರೋಗ್ಯದ ಸ್ಥಿತಿ ಹೇಗಿದೆ. ಯಾವ ಹಂತದ ಚಿಕಿತ್ಸೆಯಲ್ಲಿದ್ದಾರೆ ಎನ್ನುವುದೂ ತಿಳಿಯುತ್ತದೆ. ಆದರೆ ಇದಕ್ಕೆ ಸೋಂಕಿತರ ಮೊಬೈಲ್ ಮತ್ತು ಅದರಲ್ಲಿರುವ ಜಿಪಿಎಸ್ ಬಳಸಿಕೊಳ್ಳಬೇಕಿದ್ದು, ಇದು ವೈಯಕ್ತಿಕ ಮಾಹಿತಿಯಾಗಿರುವ ಕಾರಣ ಇದಕ್ಕೆ ಉಂಟಾಗಬಹುದಾದ ಕಾನೂನು ತೊಡಕು ನಿವಾರಿಸಿಕೊಳ್ಳಬೇಕಾಗಿದೆ.

ಈ ತಂತ್ರಾಂಶದ ಮೂಲಕ ಸೋಂಕಿತರ ರಿಯಲ್ ಟೈಮ್ ಡಾಟಾ ಪಡೆಯಬೇಕಾದರೆ ಸೋಂಕಿತರ ಬಳಿ ಸ್ಮಾರ್ಟ್ ಫೋನ್ ಇರಬೇಕು. ಅವರು ಕಾಲಕಾಲಕ್ಕೆ ಮಾಹಿತಿ ಅಪ್ ಲೋಡ್ ಮಾಡಬೇಕು. ಒಂದು ವೇಳೆ ಸೋಂಕಿತರು ಅಪ್ ಲೋಡ್ ಮಾಡಲು ಸಾಧ್ಯವಾಗದಿದ್ದರೆ, ಅಲ್ಲಿರುವ ವೈದ್ಯರು ಪ್ರತಿ ಒಂದು ಗಂಟೆಗೆ ಮಾಹಿತಿಯನ್ನು ಕೊರೊನಾ ವಾಚ್‌ಗೆ ಹಾಕಬೇಕಾಗುತ್ತದೆ. ಹೀಗಾಗಿ ಕೊರೊನಾ ಸೋಂಕಿತರ ಮಾಹಿತಿ ಮತ್ತು ಆರೋಗ್ಯ ಸ್ಥಿತಿ ಸಕಾಲಕ್ಕೆ ತಿಳಿಯುವುದರಿಂದ ತಕ್ಷಣದ ಚಿಕಿತ್ಸೆ ಒದಗಿಸಲು ಅವಕಾಶವಾಗುತ್ತದೆ.

ಈ ತಂತ್ರಾಂಶದಲ್ಲಿ ಸೋಂಕಿತರು ಎಲ್ಲೆಲ್ಲಿ ಹೋಗಿದ್ದರು ಎನ್ನುವ ಮಾಹಿತಿಯನ್ನು ಮ್ಯಾಪ್ ಸಹಿತ ತೋರಿಸುವುದರಿಂದ ಸಾರ್ವಜನಿಕರು ಸೋಂಕಿತರು ಹೋಗಿದ್ದ ಪ್ರದೇಶಗಳಿಗೆ ಭೇಟಿ ನೀಡದೆ ರೋಗದಿಂದ ತಪ್ಪಿಸಿಕೊಳ್ಳಬಹುದು. ಹಾಗೊಮ್ಮೆ ಸೋಂಕಿತರು ಭೇಟಿ ನೀಡಿದ್ದ ಜಾಗಕ್ಕೆ ಜನರೂ ಹೋಗಿದ್ದರೆ ಅವರನ್ನು ಪರೀಕ್ಷೆಗೆ ಒಳಪಡಿಸಬಹುದು. ಅನುಮಾನ ಇದ್ದವರು ಸ್ವಯಂ ಪ್ರತ್ಯೇಕಗೊಳಿಸಿಕೊಳ್ಳಬಹುದು. ಮುಂದಿನ ದಿನಗಳಲ್ಲಿ ಕ್ವಾರಂಟೈನ್‌ನಲ್ಲಿ ಇರುವ ಶಂಕಿತರ ಮಾಹಿತಿಯನ್ನೂ ಹಾಕುವುದರಿಂದ ಅವರ ಕುಟುಂಬಸ್ಥರು ಮತ್ತು ಅವರ ಸುತ್ತಮುತ್ತಲ ಪ್ರದೇಶದವರು ಎಚ್ಚರ ವಹಿಸಬಹುದು.

**ಆಸ್ಪತ್ರೆಗಳ ಸ್ಥಿತಿಯೂ ಲಭ್ಯ**

ಈ ತಂತ್ರಾಂಶದಲ್ಲಿ ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಕೊರೊನಾ ಸೋಂಕಿತರಿಗೆ ಎಷ್ಟು ಹಾಸಿಗೆಗಳು, ವೆಂಟಿಲೇಟರ್‌ಗಳು ಲಭ್ಯ ಇವೆ ಎನ್ನುವುದು ತಿಳಿಯುತ್ತದೆ. ಯಾವ ಆಸ್ಪತ್ರೆಗಳಲ್ಲಿ ಎಷ್ಟು ರೋಗಿಗಳು ದಾಖಲಾಗಿದ್ದಾರೆ, ಅವರ ಸ್ಥಿತಿ ಹೇಗಿದೆ, ಹಾಸಿಗೆ ಮತ್ತು ವೈದ್ಯರು ಲಭ್ಯ ಇರುವ ಆಸ್ಪತ್ರೆಗಳು ಯಾವುವು ಎನ್ನುವ ಮಾಹಿತಿಯನ್ನು ಕೊರೊನಾ ವಾಚ್ ತಂತ್ರಾಂಶ ತಿಳಿಸುತ್ತದೆ. ಇದಕ್ಕಾಗಿ ವೈದ್ಯರಿಗಾಗಿ ಇರುವ ಪ್ರಾಕ್ಟೋ ತಂತ್ರಾಂಶವನ್ನೂ ಬಳಸಿಕೊಂಡ ಕೊರೊನಾ ಸೋಂಕಿತರ ಜತೆ ಸಂವಾದ ನಡೆಸುವುದಕ್ಕೂ ಅವಕಾಶ ಮಾಡಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.





Downloaded From: www.kpscvaani.com





**ಶ್ರೀ ನರೇಂದ್ರ ಮೋದಿ**
ಮಾನ್ಯ ಪ್ರಧಾನ ಮಂತ್ರಿಗಳು

**ಶ್ರೀ ಬಿ.ಎಸ್. ಯಡಿಯೂರಪ್ಪ**
ಮಾನ್ಯ ಮುಖ್ಯ ಮಂತ್ರಿಗಳು

## ಪ್ರಧಾನಮಂತ್ರಿ ಜನಧನ ಯೋಜನೆ ಮಹಿಳಾ ಖಾತೆದಾರರಿಗೆ ಸೂಚನೆ

**ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಪ್ಯಾಕೇಜ್ ಅಡಿ ಜನಧನಖಾತೆ ಹೊಂದಿರುವ ಮಹಿಳೆಯರಿಗೆ ನೇರ ಹಣ ಪಾವತಿ**

1. ಪ್ರಧಾನಮಂತ್ರಿ ಜನಧನ ಖಾತೆ ಹೊಂದಿರುವ ಮಹಿಳಾ ಖಾತೆದಾರರಿಗೆ ಮೂರು ತಿಂಗಳ ಕಾಲ ಪ್ರತಿ ತಿಂಗಳೂ ರೂ 500/- ಎಕ್ಸ್ ಗ್ರೇಸಿಯಾ ಹಣವನ್ನು ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಪ್ಯಾಕೇಜ್ ಅಡಿಯಲ್ಲಿ ನೀಡಲಾಗುತ್ತದೆ.
2. ಎಪ್ರಿಲ್ ತಿಂಗಳ ಕಂತು ರೂ 500/- ಅನ್ನು ಸಂಬಂಧಿಸಿದ ಬ್ಯಾಂಕುಗಳಿಗೆ ಈಗಾಗಲೇ ಬಿಡುಗಡೆ ಮಾಡಿದ್ದು ಖಾತೆದಾರರು ಬ್ಯಾಂಕುಗಳಿಂದ ಹಣವನ್ನು ಡ್ರಾ ಮಾಡಿಕೊಳ್ಳಬಹುದಾಗಿದೆ
3. ಪ್ರಸ್ತುತ ಕೋವಿಡ್ -19 ಹಿನ್ನೆಲೆಯಲ್ಲಿ ಬ್ಯಾಂಕ್ ಗಳ ಮುಂದೆ ಏಕಕಾಲಕ್ಕೆ ಜನಸಂದಣಿ ಸೇರುವುದನ್ನು ತಪ್ಪಿಸಲು ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಎಪ್ರಿಲ್ 3 ರಿಂದ ಎಪ್ರಿಲ್ 9 ರವರೆಗೂ ಕೆಳಕಂಡ ಸರದಿಯಂತೆ ಹಣ ಪಡೆದುಕೊಳ್ಳಬಹುದು.

| ಮಹಿಳಾ **PMJDY** ಖಾತೆದಾರರ ಅಕೌಂಟ್ ನಂಬರ್ ನ ಕೊನೆಯ ಸಂಖ್ಯೆ | ಫಲಾನುಭವಿಗಳು ಹಣ ವಿತ್ ಡ್ರಾ ಮಾಡಿಕೊಳ್ಳಬಹುದಾದ ದಿನಾಂಕ |
|---|---|
| 0 ಅಥವಾ 1 | 3.4.2020 |
| 2 ಅಥವಾ 3 | 4.4.2020 |
| 4 ಅಥವಾ 5 | 7.4.2020 |
| 6 ಅಥವಾ 7 | 8.4.2020 |
| 8 ಅಥವಾ 9 | 9.4.2020 |

4. ಎಪ್ರಿಲ್ 9ರ ನಂತರ ಯಾವುದೇ ಖಾತೆದಾರರೂ, ಯಾವುದೇ ದಿನದಂದೂ ಹಣ ಡ್ರಾ ಮಾಡಿಕೊಳ್ಳಲು ಅವಕಾಶ ಇರುತ್ತದೆ
5. ಖಾತೆದಾರರು ತಮಗೆ ನಿಗದಿಪಡಿಸಿದ ದಿನದಂದು ಬ್ಯಾಂಕ್ ಗಳಿಗೆ ತೆರಳಿ ಹಣ ಪಡೆದುಕೊಳ್ಳಬಹುದಾಗಿದೆ

**ನಿಮ್ಮ ಸುರಕ್ಷತೆಯೇ ನಮ್ಮ ಕಾಳಜಿ**


Downloaded From: www.kpscvaani.com



## ಕೊರೊನಾದಿಂದ ಪಾರಾಗಲು
# ತಂಬಾಕಿನಿಂದ ದೂರವಿರಿ

ಮಹದೇವ್

**ತಂ**ಬಾಕು ಸೇವನೆಯು ಶ್ವಾಸಕೋಶಕ್ಕೆ ಹೆಚ್ಚಿನ ಹಾನಿಯನ್ನು ಉಂಟುಮಾಡುತ್ತದೆ. ಈಗ ವಿಶ್ವದಾದ್ಯಂತ ಹರಡಿರುವ ಕೊರೊನಾ ಸೋಂಕು ಕೂಡ ಶ್ವಾಸಕೋಶಕ್ಕೆ ಹಾನಿಯುಂಟು ಮಾಡುವುದರಿಂದ ತಂಬಾಕು ಸೇವಿಸುವವರು ಈಗಲಾದರು ಎಚ್ಚೆತ್ತುಕೊಂಡು ತಂಬಾಕು ಸೇವನೆಯನ್ನು ತ್ಯಜಿಸುವುದು ಒಳ್ಳೆಯದು. ಧೂಮಪಾನ ಮತ್ತು ಮದ್ಯಪಾನಿಗಳಿಗೆ ಕೊರೊನಾ ವೈರಸ್ ಸೋಂಕು ತಗುಲಿದರೆ ಅಪಾಯದ ಮಟ್ಟ ಹೆಚ್ಚಾಗುವ ಸಾಧ್ಯತೆಗಳಿವೆ.

ತಂಬಾಕು ಸೇವನೆಯಿಂದ ಉಂಟಾಗುವ ರೋಗ ಮತ್ತು ಸಾವು ನೋವುಗಳನ್ನು ಸಾರ್ವಜನಿಕರ ಗಮನಕ್ಕೆ ತರುವ ಮೂಲಕ ತಂಬಾಕು ಸೇವನೆಯಿಂದ ಅವರನ್ನು ಹೊರತರುವ ಸಲುವಾಗಿ ಜಾಗೃತಿ ಮೂಡಿಸಲು ವಿಶ್ವ ತಂಬಾಕು ನಿಷೇಧ ದಿನವನ್ನು ವಿಶ್ವದಾದ್ಯಂತ ಪ್ರತಿ ವರ್ಷ ಮೇ 31 ರಂದು ಆಚರಿಸಲಾಗುತ್ತದೆ.

ತಂಬಾಕು ಸೇವನೆಯಿಂದ ಪ್ರತಿ ವರ್ಷ ವಿಶ್ವದಾದ್ಯಂತ ಆರು ಮಿಲಿಯನ್ ಜನರು ಮರಣ ಹೊಂದುತ್ತಿದ್ದಾರೆ. ಹಾಗಾಗಿ ವಿಶ್ವ ಆರೋಗ್ಯ ಸಂಸ್ಥೆಯು ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ತಂಬಾಕು ನಿಷೇಧದ ಬಗ್ಗೆ ಚಿಂತನೆಯನ್ನು ಕೈಗೊಂಡಿತು. ಅದರ ಪ್ರತಿಫಲವಾಗಿ 1987 ರಲ್ಲಿ ಮೊದಲ ಬಾರಿಗೆ ವಿಶ್ವ ಆರೋಗ್ಯ ಸಂಸ್ಥೆಯು ತಂಬಾಕು ರಹಿತ ದಿನದ ಆಚರಣೆಯ ಬಗ್ಗೆ ಅಧಿಸೂಚನೆ ಹೊರಡಿಸಿತು.

ಇತ್ತೀಚೆಗೆ ಯುವಕರೇ ಹೆಚ್ಚಾಗಿ ತಂಬಾಕು ಇರುವ ವಸ್ತುಗಳ ಸೇವನೆಯ ದುಶ್ಚಟಗಳಿಗೆ ಒಳಗಾಗುತ್ತಿದ್ದಾರೆ. ತಂಬಾಕು ಸೇವನೆಯಿಂದ ಭಯಾನಕ ರೋಗ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಸಿಗರೇಟಿನ ಪ್ಯಾಕೆಟ್ ಮೇಲೆ ಕ್ಯಾನ್ಸರ್‌ಗೆ ಒಳಗಾಗುವ ಸಂಭವವಿರುವ ಬಗ್ಗೆ ಜಾಹಿರಾತನ್ನು ನೀಡಲಾಗಿರುತ್ತದೆ. ಆದಾಗ್ಯೂ ಕೂಡ ತಂಬಾಕು ಸೇವನೆಯಿಂದ ಆಗುತ್ತಿರುವ ಸಾವಿನ ಸಂಖ್ಯೆಯು ತೀವ್ರವಾಗಿ ಹೆಚ್ಚಾಗುತ್ತಲೇ ಇದೆ.

ತಂಬಾಕಿನ ವಸ್ತುವಾದ ಸಿಗರೇಟು, ಸೇದುವವರಿಗೆ ಮಾತ್ರವಲ್ಲದೆ ಅವರ ಅಕ್ಕ ಪಕ್ಕದಲ್ಲಿ ಇರುವವರಿಗೆ ಕೂಡ ಆರೋಗ್ಯದ ಮೇಲೆ ಪರಿಣಾಮ ಉಂಟುಮಾಡುತ್ತದೆ. ತಂಬಾಕು ಉತ್ಪನ್ನಗಳ ಬಳಕೆಯಲ್ಲಿ ಭಾರತ ದೇಶವು ಎರಡನೇ ಸ್ಥಾನದಲ್ಲಿದೆ. ಚೀನಾ ದೇಶವು ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ತಂಬಾಕು ಸೇವನೆಯಿಂದ ಕ್ಯಾನ್ಸರ್ ಹಾಗೂ ಇತರೆ ಕಾಯಿಲೆಗಳಿಗೆ ಒಳಗಾಗಿ ಭಾರತದಲ್ಲಿ ಪ್ರತಿ ವರ್ಷ 10 ಲಕ್ಷ ಜನರು ಸಾವಿಗೀಡಾಗುತ್ತಿದ್ದಾರೆ.

ತಂಬಾಕು ಸೇವನೆಯಿಂದ ಗಂಟಲು, ಶ್ವಾಸಕೋಶ ಮಾತ್ರವಲ್ಲದೆ ನಮ್ಮ ದೇಹದ ಪ್ರತಿಯೊಂದು ಜೀವಕೋಶದ ಮೇಲೆ ತುಂಬಾ ಪರಿಣಾಮವನ್ನುಂಟು ಮಾಡುತ್ತದೆ. ಹಾಗಾಗಿ ತಂಬಾಕು ಚಟವನ್ನು ಬೆಳೆಸಿಕೊಂಡವರು ಬಹುಬೇಗ ಸಾವನ್ನು ತಂದುಕೊಳ್ಳುವ ಮೂಲಕ ಕುಟುಂಬದವರನ್ನು ಅನಾಥರನ್ನಾಗಿಸುವುದಲ್ಲದೆ ಕಾಯಿಲೆಯ ಚಿಕಿತ್ಸೆಗೆ ಅಪಾರ ಪ್ರಮಾಣದಲ್ಲಿ ಹಣ ವ್ಯಯವಾಗುವುದರಿಂದ ಆರ್ಥಿಕ ಸಂಕಷ್ಟಕ್ಕೂ ಕುಟುಂಬವನ್ನು ಸಿಲುಕಿಸುತ್ತಿದ್ದಾರೆ.

ಜಿಲ್ಲಾ ತಂಬಾಕು ಉತ್ಪನ್ನಗಳ ಅಧಿನಿಯಮ 2003 ರಡಿ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ತಂಡಗಳು ಸಾರ್ವಜನಿಕ ಪ್ರದೇಶಗಳಿಗೆ ಭೇಟಿ ನೀಡಿ ನಿಯಮ ಉಲ್ಲಂಘಿಸಿ ಸಿಗರೇಟ್ ಹಾಗೂ ತಂಬಾಕು ಸೇವನೆ ಮಾಡುವವರ ವಿರುದ್ಧ ದಂಡವನ್ನು ವಿಧಿಸುತ್ತಾರೆ.



**ವಿಶ್ವ ಆರೋಗ್ಯ ಸಂಸ್ಥೆಯ ಡೈರೆಕ್ಟರ್ ಜನರಲ್ ಡಾ.ಟೆಡ್ರೊಸ್ ಅಧಾನೊಮ್ ಘೆಬ್ರೆಯೆಸಸ್ ಅವರು ತಮ್ಮ ಟ್ವಿಟ್ಟರ್ ಖಾತೆಯ ಮೂಲಕ ಸಿಗರೇಟು ಸೇದಬಾರದು ಮತ್ತು ಮದ್ಯ ಸೇವನೆ ಮಾಡದಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಕೊರೊನಾ ವೈರಸ್ ಹರಡುತ್ತಿರುವ ಈ ಸಮಯದಲ್ಲಿ ಸಿಗರೇಟು ಸೇದುವವರು ಮತ್ತು ಮದ್ಯವ್ಯಸನಿಗಳು ಕೊರೊನಾ ವೈರಸ್ ಸೋಂಕಿಗೆ ಒಳಗಾದರೆ ಅಪಾಯವನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದ್ದಾರೆ.**

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸುವುದಕ್ಕೋಸ್ಕರ 2003 ರಲ್ಲಿ "ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನ ಕಾಯಿದೆ"ಯನ್ನು ಕೇಂದ್ರ ಸರ್ಕಾರವು ಜಾರಿಗೊಳಿಸಿದೆ. ಈ ಕಾಯಿದೆಯಡಿ ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್ ಸೇದುವವರಿಗೆ 200 ರೂಪಾಯಿ ದಂಡ ಹಾಕಲಾಗುತ್ತಿದೆ. ಆದರೂ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿರುವುದನ್ನು ಗಮನಿಸಿರುವ ಸರ್ಕಾರ ದಂಡದ ಪ್ರಮಾಣವನ್ನು 1000 ರೂಗಳಿಗೆ ಹೆಚ್ಚಿಸಲು ಚಿಂತನೆ ನಡೆಸಿದೆ. ದಂಡ ಹೆಚ್ಚಾದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಸೇವನೆ ಮಾಡುವುದು ಕಡಿಮೆಯಾಗಬಹುದು.

ವ್ಯಾಪಾರದ ಉದ್ದೇಶಕ್ಕಾಗಿ ಪೋರ್ಚುಗೀಸರು 1602 ರಲ್ಲಿ ಭಾರತಕ್ಕೆ ತಂಬಾಕನ್ನು ತಂದರು ಎಂದು ಇತಿಹಾಸ ಹೇಳುತ್ತದೆ. ಈಗ ಪ್ರತಿ ವರ್ಷ 50 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಆದಾಯ ತಂಬಾಕು ಉದ್ದಿಮೆಯಿಂದ ಸರ್ಕಾರಕ್ಕೆ ಬರುತ್ತಿದೆ. ಅಲ್ಲದೆ 30 ಲಕ್ಷಕ್ಕೂ ಹೆಚ್ಚು ಜನರಿಗೆ ಇದರಿಂದ ಉದ್ಯೋಗವು ಲಭಿಸಿದೆ. ಹಾಗಾಗಿ ತಂಬಾಕು ಉದ್ದಿಮೆಯನ್ನು ನಿಷೇಧಿಸುವುದು ಸರ್ಕಾರಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ತಮಗೆ ತಾವೇ ಸೇವನೆ ಮಾಡುವುದನ್ನು ನಿಲ್ಲಿಸಿದರೆ ಮಾತ್ರ ನಮ್ಮ ಆರೋಗ್ಯದ ಜೊತೆಗೆ ಕುಟುಂಬದ ಮತ್ತು ಸಮಾಜದ ಆರೋಗ್ಯವನ್ನು ಕಾಪಾಡಿದಂತ್ತಾಗುತ್ತದೆ.

ರಸ್ತೆ ಸುರಕ್ಷತೆ ದೃಷ್ಟಿಯಿಂದ ಸಂಚಾರಿ ನಿಯಮ ಉಲ್ಲಂಘನೆ ಮಾಡಿದವರಿಗೆ ವಿಧಿಸಲಾಗುವ ದಂಡದ ಪ್ರಮಾಣವನ್ನು ಹೆಚ್ಚಿಸುವ ಮೂಲಕ ವಾಹನ ಸವಾರರು ಸಂಚಾರಿ ನಿಯಮ ಉಲ್ಲಂಘನೆ ಮಾಡುವುದಕ್ಕೆ ಕಡಿವಾಣ ಹಾಕಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಸೇವಿಸುವವರಿಗೆ ಹಾಕಲಾಗುವ ದಂಡವನ್ನು ಹೆಚ್ಚಿಸಿದರೆ ಜನರು ಕೂಡ ಎಚ್ಚೆತ್ತುಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಸೇವನೆ ಮಾಡುವವರಿಗೆ  200 ರೂ ಬದಲು 1000 ರೂ ದಂಡ ವಿಧಿಸುವ ಸಲುವಾಗಿ ಕೋಟಾ ಕಾಯ್ದೆಗೆ ತಿದ್ದಿಪಡಿ ತಂದು ದಂಡ ಹೆಚ್ಚಳ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ.

ಹೊಗೆಸೊಪ್ಪಿನ ಗಿಡದ ಎಲೆಗಳಲ್ಲಿ ಸಿಗುವ ರಾಸಾಯನಿಕ ಪದಾರ್ಥವೇ ನಿಕೋಟಿನ್. ಮುದ ನೀಡುವ ನಿಕೋಟಿನ್ ಸೇವನೆಯು ಮೆದುಳಿನಲ್ಲಿ ಆನಂದ ನೀಡುವ ಡೋಪಮಥನ್ ನರವಾಹಕವನ್ನು ಬಿಡುಗಡೆ ಮಾಡುತ್ತದೆ. ಮೆದುಳು ಇದನ್ನು ಆನಂದದಾಯಕವಾದ ಚಟುವಟಿಕೆ ಎಂದು ಗ್ರಹಿಸುತ್ತದೆ. ಅಲ್ಲದೆ ವ್ಯಕ್ತಿಯು ತಂಬಾಕು ಸೇವನೆಯನ್ನು ಮತ್ತೆ ಮತ್ತೆ ಬಯಸುವಂತೆ ಮಾಡುತ್ತದೆ. ಇದರಿಂದ ಕ್ರಮೇಣ ಮೆದುಳಿನ ಸಂದೇಶ ವಾಹಕಗಳು ಸೂಕ್ಷ್ಮತೆಯನ್ನು ಕಳೆದುಕೊಳ್ಳುತ್ತದೆ. ಇದರಿಂದಾಗಿ ಆನಂದದ ಭಾವ ಹೊಂದಲು ಮೆದುಳು ಹೆಚ್ಚು ತಂಬಾಕು ಪದಾರ್ಥಗಳ ಸೇವನೆಯನ್ನು ಬಯಸುತ್ತದೆ.

ಸಾಮಾನ್ಯವಾಗಿ ವ್ಯಸನಿಗಳು, ಬೀಡಿ, ಸಿಗರೇಟು, ನಶ್ಯ, ಹುಕ್ಕಾ, ಜರ್ದಾ, ಕಡ್ಡಿಪುಡಿ, ಸುಫಾರಿ ಮುಂತಾದ ಪದಾರ್ಥಗಳ ಮೂಲಕ ತಂಬಾಕನ್ನು ಸೇವಿಸುತ್ತಾರೆ. ಧೂಮಪಾನವನ್ನು ಮಾಡುವವರಿಗೆ ಶ್ವಾಸಕೋಶ, ಬಾಯಿ, ಸ್ತನ, ಗರ್ಭಕೋಶ, ಪ್ಯಾನ್ಕ್ರಿಯಾಸ್, ಮೂತ್ರಪಿಂಡ ಮತ್ತು ಹೊಟ್ಟೆಗೆ ಸಂಬಂಧಿಸಿದ ಕ್ಯಾನ್ಸರ್‌ಗೆ ಒಳಗಾಗುವ ಸಾಧ್ಯತೆ ಇದ್ದರೆ, ಹೊಗೆರಹಿತ ತಂಬಾಕು ಸೇವನೆಯಿಂದ ಬಾಯಿ, ಧ್ವನಿಪೆಟ್ಟಿಗೆ, ಅನ್ನನಾಳ ಪ್ಯಾನ್ಕ್ರಿಯಾಸ್ ಹಾಗೂ ಹೊಟ್ಟೆಗೆ ಸಂಬಂಧಿಸಿದ ಕ್ಯಾನ್ಸರ್ ಕಾಣಿಸಿಕೊಳ್ಳಬಹುದು. ಧೂಮಪಾನ ಮಾಡುವುದರಿಂದ ನಪುಂಪಸಕತ್ವ ಅಥವಾ ಬಂಜೆತನ ಬರುವ ಸಾಧ್ಯತೆ ಕೂಡ ಇದೆ ಎಂದು ಸಂಶೋಧನೆಗಳು ಹೇಳುತ್ತಿವೆ. ಅಲ್ಲದೆ ಧೂಮಪಾನ ಮಾಡುವವರ ಆಯುಷ್ಯ ಧೂಮಪಾನ ಮಾಡುವವರ ಆಯುಷ್ಯಕ್ಕಿಂತ 15 ವರ್ಷ ಕಡಿಮೆಯಾಗುತ್ತದೆ ಎಂದು ಅಂದಾಜಿಸಲಾಗಿದೆ.

ವ್ಯಸನಿಗಳು ತಂಬಾಕು ಬಳಕೆಯನ್ನು ಬಿಡಲು ಹೊರಟಾಗ ನಡುಕ, ಆತಂಕ, ಖಿನ್ನತೆ, ನಿದ್ರೆ ಬಾರದಿರುವುದು, ಬುದ್ಧಿ ಸ್ಥಿಮಿತವಿಲ್ಲದ ಭಾವನೆ, ಹೃದಯ ಬಡಿತದ ಇಳಿಕೆ, ಹಸಿವು ಮುಂತಾದ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಕೇವಲ 3% ರಷ್ಟು ಜನರು ಮಾತ್ರ ಸ್ವತಂತ್ರವಾಗಿ ಧೂಮಪಾನ ಬಿಡಲು ಸಾಧ್ಯವಾಗುತ್ತದೆ. ಉಳಿದ ಜನರಿಗೆ ವೃತ್ತಿಪರ ಮನೋವೈದ್ಯರ ಸಹಾಯ ಬೇಕಾಗುತ್ತದೆ. ವ್ಯಸನದಿಂದ ಮುಕ್ತರನ್ನಾಗಿಸಲು ದೀರ್ಘಕಾಲ ಹಿಡಿಯುತ್ತದೆ. ಆದ್ದರಿಂದ ಕುಟುಂಬದ ಸದಸ್ಯರು, ಸ್ನೇಹಿತರುಗಳು ವ್ಯಸನಿಗಳಿಗೆ ವ್ಯಸನದಿಂದ ಹೊರಬರಲು ಮತ್ತು ಅವರು ತಂಬಾಕು ಮುಕ್ತ ಜೀವನ ನಡೆಸಲು ಸಹಕಾರ ನೀಡಬೇಕು.

ಜಾಗೃತರಾಗಿರುವ ಕೆಲವು ಗ್ರಾಮಸ್ಥರುಗಳು ತಮ್ಮ ಗ್ರಾಮಗಳಲ್ಲಿ ಸಾರಾಯಿಯನ್ನು ನಿಷೇಧಿಸಿದ್ದಾರೆ. ಅದೇ ರೀತಿಯಲ್ಲಿ ತಂಬಾಕನ್ನು ನಿಷೇಧ ಮಾಡಿಕೊಂಡರೆ ಖಂಡಿತವಾಗಿ  ಸಮಾಜದಿಂದ ತಂಬಾಕನ್ನು ಹೊಡೆದೋಡಿಸಬಹುದು. ಆದಷ್ಟೂ ಬೇಗ ಜನರು ಈ ವಿಚಾರದಲ್ಲಿ ಜಾಗೃತರಾಗಲಿ ಎಂದು ಆಶಿಸುತ್ತೇನೆ.



# ಕೊರೊನಾ ತಡೆಗೆ ಜಿಲ್ಲಾಡಳಿತ ತೆಗೆದುಕೊಂಡ ಕ್ರಮಗಳು

ಮೈಸೂರು

## 'ನೀವು ಕ್ವಾರಂಟೈನ್‌ನಲ್ಲಿದ್ದರೆ ನಿಮ್ಮೊಂದಿಗೆ ನಾವಿದ್ದೇವೆ' ಜಿಲ್ಲಾಡಳಿತದ ವಿನೂತನ ಕ್ರಮ

**ಕೋ**ವಿಡ್-19 ಪ್ರಕರಣಗಳು ರಾಜ್ಯದಲ್ಲಿ ಕಾಣಿಸಿಕೊಂಡ ಸುಮಾರು ಎರಡು ವಾರಗಳ ನಂತರ ಮೈಸೂರಿನಲ್ಲಿ ವಿದೇಶಕ್ಕೆ ಹೋಗಿ ಬಂದ ವ್ಯಕ್ತಿಯಲ್ಲಿ ಮೊದಲ ಪ್ರಕರಣ ಪತ್ತೆಯಾಯಿತು. ಎರಡನೇ ಪ್ರಕರಣವೂ ವಿದೇಶಕ್ಕೆ ಹೋಗಿ ಬಂದ ವ್ಯಕ್ತಿಯಲ್ಲಿ ಪತ್ತೆಯಾಯಿತು. ಆದರೆ ಯಾವ ದೇಶಕ್ಕೂ ಹೋಗಿರದ ನಂಜನಗೂಡಿನ ಫಾರ್ಮಾಸ್ಯೂಟಿಕಲ್ ಕಂಪನಿಯ ಉದ್ಯೋಗಿಯೊಬ್ಬರಲ್ಲಿ ಮೈಸೂರಿನ ಮೂರನೇ ಪ್ರಕರಣ ಪತ್ತೆಯಾಯಿತು. ಆ ನಂತರ ಇಡೀ ಕರ್ನಾಟಕವೇ ಆತಂಕದಿಂದ ನೋಡುವ ರೀತಿಯಲ್ಲಿ ಕೋವಿಡ್-19 ಪ್ರಕರಣಗಳು ಮೈಸೂರು ಜಿಲ್ಲೆಯಲ್ಲಿ ಹೆಚ್ಚುತ್ತಿವೆ.



ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ತಡೆಯಲು ಜಿಲ್ಲಾಧಿಕಾರಿ ಅಭಿರಾಮ್ ಜಿ.ಶಂಕರ್ ಅವರ ನೇತೃತ್ವದ ಮೈಸೂರು ಜಿಲ್ಲಾಡಳಿತ ಅನುಸರಿಸಿದ ಹಲವಾರು ಕ್ರಮಗಳು ಅನೇಕ ಅಪಾಯಗಳನ್ನು ತಪ್ಪಿಸಿದ್ದಲ್ಲದೆ, ಮೆಚ್ಚುಗೆಯನ್ನು ಗಳಿಸಿವೆ. ಅದರಲ್ಲೂ ಮುಖ್ಯವಾಗಿ, ಕ್ವಾರಂಟೈನ್‌ನಲ್ಲಿ ಇರುವ ವ್ಯಕ್ತಿಗಳೊಂದಿಗೆ ಪ್ರತಿದಿನ ಫೋನ್ ಮೂಲಕ ಸಂಪರ್ಕಿಸಿ, ಅವರೊಂದಿಗೆ ಆಪ್ತ ಸಮಾಲೋಚನೆ ಮಾಡುವ ಕ್ರಮದಿಂದ ಹಲವಾರು ಸಮಸ್ಯೆಗಳು ನಿವಾರಣೆಯಾಗಿ, ಹಲವಾರು ಅಪಾಯಗಳನ್ನು ಸಹ ತಪ್ಪಿಸಿವೆ. ಈ ವಿನೂತನ ಕಾರ್ಯಕ್ರಮದ ಬಗ್ಗೆ ಇಲ್ಲಿ ವಿವರಿಸಿದ್ದೇನೆ.

ಹೋಮ್ ಕ್ವಾರಂಟೈನ್ (ಗೃಹ ಬಂಧನ)ನಲ್ಲಿ ಇರುವುದು ಅತ್ಯಂತ ಕಷ್ಟದ, ಸಂಕಷ್ಟದ ಸಂದರ್ಭ. ಕ್ವಾರಂಟೈನ್‌ನಲ್ಲಿ ಇದ್ದ ಮಾತ್ರಕ್ಕೆ ಅವರಿಗೆ ಕೊರೊನಾ ವೈರಸ್ ಬಂದಿದೆಎಂದು ಅರ್ಥೈಸಬೇಕಿಲ್ಲ. ಆದರೆ ನೆರೆಹೊರೆಯವರು ಇಂತಹವರನ್ನು ಅನುಮಾನದಿಂದ ನೋಡುತ್ತಾರೆ. ಮನೆಗೆ ಬೇಕಾಗುವ ದಿನಸಿ, ಹಾಲು, ಹಣ್ಣು, ತರಕಾರಿ ಹಾಗೂ ಔಷಧಿ ಕೊಳ್ಳಲು ಅವರು ಹೊರಗೆ ಹೋಗುವಂತಿಲ್ಲ. ಅವರ ಬದಲಿಗೆ ಕುಟುಂಬದವರು ಹೊರಗೆ ಹೋದರೂ ಸಹ ನೆರೆಹೊರೆಯವರು ಆತಂಕಪಟ್ಟು ಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಇವರಿಗೆ ಯಾವುದೇ ರೀತಿಯ ಸಹಕಾರ ಸಿಗುವುದಿಲ್ಲ. ಇದರಿಂದ ಆಗುವ ಅಪಾಯ ಅಷ್ಟಿಷ್ಟಲ್ಲ.




ಕನಿಷ್ಠ ಮೂಲಭೂತ ಅಗತ್ಯಗಳು ಸಿಗದಿದ್ದರೆ ಯಾರೂ ಕೂಡ ಕ್ವಾರಂಟೈನ್‌ನಲ್ಲಿ ಇರಲು ಸಾಧ್ಯವಾಗುವುದಿಲ್ಲ. ಆಗ ಕ್ವಾರಂಟೈನ್ ಉಲ್ಲಂಘನೆ ಹೆಚ್ಚಾಗಬಹುದು. ಅದರಿಂದ ರೋಗದ ಮಾಯಾಜಾಲವೂ ಸಹ ಹೆಚ್ಚಾಗಿ, ಸ್ಫೋಟಕ ಸ್ವರೂಪ ತಾಳುವ ಅಪಾಯವೂ ಇದ್ದೇ ಇದೆ.

ಈ ಎಲ್ಲಾ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಮೈಸೂರು ಜಿಲ್ಲಾಡಳಿತ, 'ಗೃಹಬಂಧನದ ನಿರ್ವಹಣೆ ಮತ್ತು ಜಾರಿತಂಡ' (ಹೋಮ್ ಕ್ವಾರಂಟೈನ್ ಮಾನಿಟರಿಂಗ್ ಅಂಡ್ ಎನ್‌ಫೋರ್ಸ್‌ಮೆಂಟ್ ಟೀಮ್)ಅನ್ನುರಚನೆ ಮಾಡಿತು. ಈ ತಂಡದಲ್ಲಿ ಉಪ ತಹಶೀಲ್ದಾರರು, ಗ್ರಾಮಲೆಕ್ಕಾಧಿಕಾರಿಗಳು, ಹಾಗೂ ಪ್ರಶಿಕ್ಷಣಾರ್ಥಿ ಪೊಲೀಸರನ್ನು ನಿಯೋಜಿಸಲಾಗಿದೆ. ಅವರು ಕ್ವಾರಂಟೈನ್‌ನಲ್ಲಿರುವ ಪ್ರತಿಯೊಬ್ಬರಿಗೂ ಪ್ರತಿ ದಿನ ಫೋನ್ ಮಾಡಿ ಮಾತನಾಡಿಸುವರು. ಕ್ವಾರಂಟೈನ್ ಅವಧಿಯ 14 ದಿನ ಮತ್ತು ಈ ಅವಧಿ ಮುಗಿದ ಮೇಲೂ 14 ದಿನ ಒಟ್ಟು 28 ದಿನ ಈ ಸಮಾಲೋಚನಾ ಪ್ರಕ್ರಿಯೆ ನಡೆಯುತ್ತದೆ. ಮೊದಲನೇ ದಿನ ಮಾತನಾಡಿಸಿದ ಸಿಬ್ಬಂದಿಯೇ ಎಲ್ಲಾ ದಿನವೂ ಮಾತನಾಡಿಸುತ್ತಾರೆ. ಇದರಿಂದ ಅವರ ನಡುವೆ ಆತ್ಮೀಯತೆ ಬೆಳೆಯುತ್ತದೆ. ವಿಚಾರಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಸಾಧ್ಯವಾಗುತ್ತದೆ.

ಮೊಬೈಲ್ ಫೋನ್ ಮೂಲಕವೇ ಮಾತನಾಡುವುದರಿಂದ ದಿನದ ಯಾವುದೇ ಸಮಯದಲ್ಲಿ ಏನೇ ವಿಚಾರಗಳಿದ್ದರೂ ಕ್ವಾರಂಟೈನ್ ವಾಸಿಗಳು ತಮ್ಮ ಸಮಸ್ಯೆಗಳನ್ನು ಜಿಲ್ಲಾಡಳಿತದೊಂದಿಗೆ ಹೇಳಿಕೊಳ್ಳಬಹುದು.

ಔಷಧಿ, ಆಹಾರ ಸಾಮಗ್ರಿಗಳು, ಅಡುಗೆ ಅನಿಲದ ಅಗತ್ಯತೆ, ಮುಂತಾದವುಗಳ ಅಗತ್ಯವನ್ನು ತಿಳಿದ ತಂಡ ಕೂಡಲೇ ಇನ್ಸಿಡೆಂಟ್‌ಕಮಾಂಡರ್ ಅವರ ಗಮನಕ್ಕೆ ತಂದು, ಅಗತ್ಯ ವಸ್ತುಗಳು ಕ್ವಾರಂಟೈನ್ ವಾಸಿಗಳ ಮನೆ ತಲುಪುವ ವ್ಯವಸ್ಥೆಯನ್ನು ಈ ಸಮಾಲೋಚಕರು ಮಾಡುತ್ತಾರೆ.



Downloaded From: www.kpscvaani.com

ಸಮಾಲೋಚನೆಯ ಸಂದರ್ಭದಲ್ಲಿ ಕೆಲವರಿಗೆ ಜ್ವರ, ನೆಗಡಿ ಮುಂತಾದ ಕೊರೊನಾ ಸೋಂಕಿನ ಲಕ್ಷಣಗಳು ಕಂಡು ಬಂದಿರುವ ವಿಚಾರ ಗೊತ್ತಾಗಿದೆ. ಆ ವಿಚಾರವನ್ನು ಕ್ಷೇತ್ರದಲ್ಲಿರುವ ವೈದ್ಯಕೀಯ ತಂಡದ ಗಮನಕ್ಕೆ ತಂದು ಪರೀಕ್ಷೆ ಮಾಡಿಸಿದಾಗ ಹಲವರಿಗೆ ಕೊರೊನಾ ವೈರಸ್ ಇರುವುದು ಪತ್ತೆಯಾಗಿದೆ. ಅವರಿಗೆ ನಿಗದಿತ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ನೀಡಲು ಈ ಸಮಾಲೋಚನೆ ನೆರವಾಗಿದೆ.

ಕ್ವಾರಂಟೈನ್‌ನಲ್ಲಿರುವ ವ್ಯಕ್ತಿಗಳ ಮೇಲೆ ನಿಗಾವಹಿಸಲು ಕರ್ನಾಟಕ ಸರ್ಕಾರ 'ಕೊರೊನಾ ವಾಚ್' ಎಂಬ ಆಪ್ ಬಿಡುಗಡೆ ಮಾಡಿದೆ. ಆದರೆ ಇದರಲ್ಲಿ ಕೆಲವು ಮಿತಿಗಳಿವೆ. ಮುಖ್ಯವಾಗಿ ಎಲ್ಲರಿಗೂ ಆಪ್ ಬಳಸಲು ಬರುವುದಿಲ್ಲ. ಆಂಡ್ರಾಯ್ಡ್ ಫೋನ್‌ಗಳಲ್ಲಿ ಮಾತ್ರ ಈ ಆಪ್ ಕೆಲಸ ಮಾಡುತ್ತದೆ. ಐ–ಫೋನ್‌ಗಳಲ್ಲಿ ಈ ಆಪ್ ಲಭ್ಯವಿಲ್ಲ. ಆದರೆ, ಮೈಸೂರು ಜಿಲ್ಲಾಡಳಿತ ಫೋನ್ ಕರೆ ಮಾಡಿ ನೇರವಾಗಿ ಮಾತನಾಡುವ ಕ್ರಮ ಅನುಸರಿಸಿದ್ದರಿಂದ ಕ್ವಾರಂಟೈನ್ ವಾಸಿಗಳು ನಿರಾತಂಕವಾಗಿ ಕ್ವಾರಂಟೈನ್ ಸಮಯ ಕಳೆಯಲು ಸಾಧ್ಯವಾಗಿದೆ.

ಮೈಸೂರಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ(ವರ್ಕಿಂಗ್ & ಪ್ಲಾನಿಂಗ್)ಯಾಗಿರುವ ದೀಪ್‌ಜೆ ಅವರನ್ನು ಈ ತಂಡಕ್ಕೆ ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ. ಪ್ರೊಬೇಷನರಿ ಐ.ಎ.ಎಸ್. ಅಧಿಕಾರಿ ದಿಗ್ವಿಜಯ್ ಬೋಡ್ಕೆ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಕೃಷ್ಣಂ ರಾಜು, ಮತ್ತಿತರರು ಈ ತಂಡದಲ್ಲಿ ಕೆಲಸ ಮಾಡುತ್ತಿದ್ದಾರೆ. ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಗುರುದತ್ ಹೆಗಡೆ, ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಜಿಲ್ಲಾ ಪೊಲೀಸ್ ಅಧೀಕ್ಷಕ ಸಿ.ಬಿ.ರಿಷ್ಯಂತ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹಾಗೂ ಜಿಲ್ಲೆಯ ಹಲವಾರು ಅಧಿಕಾರಿಗಳು ಸಹ ಈ ತಂಡಕ್ಕೆ ಅಗತ್ಯ ಸಹಕಾರ ನೀಡಿದ್ದಾರೆ.

–ರಾಜು. ಆರ್

ಕಲಬುರಗಿ

# ಕೊರೊನಾ ವಿರುದ್ಧ ಹೋರಾಟಕ್ಕೆ ಟೊಂಕ ಕಟ್ಟಿ ನಿಂತಿದೆ "ಕಲಬುರಗಿ ಜಿಲ್ಲಾಡಳಿತ"

**ಕೋ**ವಿಡ್–19 (ನೋವೆಲ್ ಕೊರೊನಾ ವೈರಸ್) ಈ ಹೆಸರು ಕೇಳಿದರೆ ಸಾಕು ಇಡೀ ವಿಶ್ವ ಬೆಚ್ಚಿ ಬೀಳುತ್ತದೆ. ಅಷ್ಟರ ಮಟ್ಟಿಗೆ ಈ ಕೊರೊನಾ ಸಾಂಕ್ರಾಮಿಕ ಸೋಂಕು ವಿವಿಧ ದೇಶಗಳ ಗಡಿ, ಸಾಗರಗಳು ಮೀರಿ ಭಾರತ ಸೇರಿದಂತೆ ವಿಶ್ವದ ಸುಮಾರು 200ಕ್ಕೂ ಹೆಚ್ಚು ದೇಶದಲ್ಲಿ ಇಂದಿಗೂ ಹರಡುತ್ತಾ ವ್ಯಕ್ತಿಯಿಂದ ವ್ಯಕ್ತಿಗೆ ತನ್ನ ಕದಂಬ ಬಾಹುವನ್ನು ವಿಸ್ತರಿಸುತ್ತಿದೆ.

ನೋವೆಲ್ ಕೊರೊನಾ ವೈರಸ್ ಚೀನಾದ ವುಹಾನ್ ಸಮುದ್ರದ ಆಹಾರ ಮಾರುಕಟ್ಟೆ ಪ್ರದೇಶದ ಜನರಲ್ಲಿ "ಉಸಿರಾಟದ" ಸಮಸ್ಯೆಯಾಗಿ ಡಿಸೆಂಬರ್–2019ರಲ್ಲಿ ಮೊದಲು ಕಂಡು ಬಂತು. ಆರಂಭದಲ್ಲಿ ಇದನ್ನು ನ್ಯೂಮೋನಿಯಾ ಎಂದು ಭಾವಿಸಲಾಗಿತ್ತಾದರೂ ಕ್ರಮೇಣ ಬಹುತೇಕ ಜನರಲ್ಲಿ ಹೊಸ ವೈರಸ್ ಹರಡಿದ್ದರಿಂದ ಚೀನಾದ ವೈದ್ಯ ಸಂಶೋಧಕರು ಇದನ್ನು ನೋವೆಲ್ ಕೋವಿಡ್–19 ಎಂದು ಗುರುತಿಸಿ ವಿಶ್ವ ಆರೋಗ್ಯ ಸಂಸ್ಥೆಗೆ ಮಾಹಿತಿ ನೀಡಿದರು. ಸಾರ್ಸ್ ಕೋವಿಡ್–2 ಮೂಲದಿಂದ ಕೋವಿಡ್–19 ವೈರಸ್ ಹೊಸದಾಗಿ ಹುಟ್ಟಿಕೊಂಡಿರುವುದನ್ನು ಗುರುತಿಸಿದ ಡಬ್ಲ್ಯೂ.ಹೆಚ್.ಓ 2020ರ ಜನವರಿ 30ಕ್ಕೆ ಈ ವೈರಸ್ ಉಲ್ಲೇಖಿಸಿ ಅಂತರರಾಷ್ಟ್ರೀಯ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿ ಎಂದು ಘೋಷಿಸಿದಲ್ಲದೆ ವೈರಸ್ ವಿಶ್ವವ್ಯಾಪಿ ಹರಡಿದ್ದರಿಂದ ಮಾರ್ಚ್ 11 ರಂದು ಇದನ್ನು "ಸಾಂಕ್ರಾಮಿಕ" ಎಂದು ಘೋಷಣೆ ಮಾಡಿತು.



ಪ್ರಸ್ತುತ ಈ ವೈರಸ್ ಭಾರತದ ಬಹುತೇಕ ರಾಜ್ಯದಲ್ಲಿ ಕಂಡುಬಂದಿದ್ದು, ಅದರಲ್ಲಿ ಕರ್ನಾಟಕವು ಸೇರಿದೆ. ಇನ್ನೂ ದೇಶದಲ್ಲಿಯೆ ಕೊರೊನಾ ಸೋಂಕಿಗೆ ಮೊದಲ ಸಾವು ಕಂಡ ಬಿಸಿಲು ನಗರಿ ಕಲಬುರಗಿ ಜಿಲ್ಲೆಯಲ್ಲಿ ಕೊರೊನಾ ಸೋಂಕು ಹರಡದಂತೆ ಕಟ್ಟಿ ಹಾಕಲು ಹಲವು ಕಟ್ಟುನಿಟ್ಟಿನ ಕ್ರಮ ಮತ್ತು ಜನರಲ್ಲಿ ಜಾಗೃತಿ ಮೂಡಿಸುವ ಮೂಲಕ ಕೊರೊನಾ ವಿರುದ್ಧದ ಹೋರಾಟಕ್ಕೆ ಕಲಬುರಗಿ ಜಿಲ್ಲಾಡಳಿತ ಟೊಂಕ ಕಟ್ಟಿ ನಿಂತಿದೆ.

ಜಿಲ್ಲೆಯಲ್ಲಿ ಮೊದಲ ಕೊರೊನಾ ಸೋಂಕು ಪತ್ತೆಯಾಗುತ್ತಿದ್ದಂತೆ ಅಘೋಷಿತ ಬಂದ್ ಸ್ಥಿತಿ ನಿರ್ಮಾಣವಾಯಿತು. ಜಿಲ್ಲಾಧಿಕಾರಿ ಶರತ್ ಬಿ. ಅವರು ತಮ್ಮ ನೇತೃತ್ವದಲ್ಲಿ ಆರೋಗ್ಯ, ಪೊಲೀಸ್, ನಗರ–ಸ್ಥಳೀಯ ಸಂಸ್ಥೆಗಳು, ಗ್ರಾಮೀಣಾಭಿವೃದ್ಧಿ ಹೀಗೆ ವಿವಿಧ ಇಲಾಖೆಗಳನ್ನೊಳಗೊಂಡ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಂಡ ರಚಿಸಿ ಮಹಾಮಾರಿ ಕೊರೊನಾ ಸೋಂಕಿನ ನಿಯಂತ್ರಣಕ್ಕೆ ಸಮರ ಸಾರಿದರು. ಯುದ್ಧೋಪಾದಿಯಲ್ಲಿ ಜಿಲ್ಲೆಯಾದ್ಯಂತ ಜನಸಂದಣಿ ನಿಯಂತ್ರಣ, ಸಾಮಾಜಿಕ ಅಂತರ ಪರಿಪಾಲನೆಯ ಅರಿವಿನ ಶಿಕ್ಷಣಕ್ಕೆ ಮುಂದಾದರು. ಪಾಸಿಟಿವ್ ಪ್ರಕರಣ ಪತ್ತೆಯಾದ ಕೂಡಲೆ ಸೋಂಕಿತ ವ್ಯಕ್ತಿ ವಾಸಿಸುವ ಪ್ರದೇಶವನ್ನು ಕಂಟೇನ್‌ಮೆಂಟ್ ಝೋನ್ ಮತ್ತು ಬಫರ್ ಝೋನ್ ಎಂದು ಗುರುತಿಸಿ ಅಲ್ಲಿ ಸ್ಕ್ರೀನಿಂಗ್ ಮತ್ತು ಮುಂಜಾಗ್ರತೆಯ ಅರಿವು ಮೂಡಿಸಲು ಸಜ್ಜಾದರು.

**ಮೊದಲು ಲಾಕ್ ಡೌನ್:** ಜಿಲ್ಲೆಯಲ್ಲಿ ಕೊರೋನಾ ಸೋಂಕು ಪತ್ತೆಯಾದ ಕೂಡಲೆ ಡಿ.ಸಿ ಶರತ್ ಬಿ. ಅವರು ಸೋಂಕು ಹರಡದಂತೆ ಮುಂಜಾಗ್ರತವಾಗಿ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಿ, ಜನಸಂದಣಿ ಸೇರುವ ಸಿನಿಮಾ–ಚಿತ್ರಮಂದಿರಗಳನ್ನು ಬಂದ್ ಮಾಡಿಸಿದರು. ಧಾರ್ಮಿಕ ಕಾರ್ಯಕ್ರಮಗಳನ್ನು ನಿರ್ಬಂಧಿಸಿದಲ್ಲದೆ ಸಾರಿಗೆ ಸೇವೆಯನ್ನು ಕಡಿಮೆಗೊಳಿಸಿದರು. ಅಗತ್ಯ ಸೇವೆಗಳನ್ನು ಹೊರತುಪಡಿಸಿ ಉಳಿದೆಲ್ಲವು ಬಂದ್ ಮಾಡಿ ಸಾರ್ವಜನಿಕರು ಅನಗತ್ಯ ಮನೆಯಿಂದ ಹೊರಗಡೆ ಬಾರದಂತೆ ಮನವಿ ಮಾಡಿದರು. ಮಾರ್ಚ್ 19ರ ರಿಂದಲೇ ಜಿಲ್ಲೆಯಾದ್ಯಂತ ಸಿ.ಆರ್.ಪಿ.ಸಿ. ಕಾಯ್ದೆ 1973 ಕಲಂ 144ರನ್ವಯ ನಿಷೇಧಾಜ್ಞೆ ಜಾರಿಗೊಳಿಸಿ ಅಧಿಕೃತ "ಲಾಕ್ ಡೌನ್" ಘೋಷಿಸುವ ದಿಟ್ಟ ನಿರ್ಧಾರ ಕೈಗೊಂಡರು. ಇದು ದೇಶದಲ್ಲಿ ಕೊರೊನಾ ಸೋಂಕು ಹರಡುವಿಕೆಯ ನಿಯಂತ್ರಣಕ್ಕೆ ಮೊದಲ ಲಾಕ್ ಡೌನ್ ಜಿಲ್ಲೆಯಾಗಿ ಕಲಬುರಗಿ ಗುರುತಿಸಿಕೊಂಡಿತ್ತು.

**ಅಂತರ ರಾಜ್ಯ ಗಡಿ ಬಂದ್:** ನೆರೆಯ ಮಹಾರಾಷ್ಟ್ರದಲ್ಲಿ ಕೊರೊನಾ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವುದನ್ನು ಗಮನಿಸಿದ ಜಿಲ್ಲಾಡಳಿತ ಮಹಾರಾಷ್ಟ್ರಕ್ಕೆ ಸಂಪರ್ಕಿಸುವ ಅಂತರ ರಾಜ್ಯ ಖಾಸಗಿ–ಸಾರ್ವಜನಿಕ ಸಾರಿಗೆ ಸೇವೆ ಬಂದ್ ಮಾಡಿದಲ್ಲದೆ ಜಿಲ್ಲೆಯ ಗಡಿಯಲ್ಲಿ ಚೆಕ್ ಪೋಸ್ಟ್ ಸ್ಥಾಪಿಸಿ ಬೇರೆ ಜಿಲ್ಲೆ ಮತ್ತು ರಾಜ್ಯದಿಂದ ಬರುವವರನ್ನು ತಪಾಸಣೆ ಮಾಡಿ ಒಳಗಡೆ ಬಿಡಲಾಯಿತು.

**ಕೊರೊನಾ ಪೀಡಿತರಿಗೆ 690 ಬೆಡ್:** ಕೊರೊನಾ ಶಂಕಿತರು ಮತ್ತು ಸೋಂಕಿತರ ಚಿಕಿತ್ಸೆಗೆ ಕಲಬುರಗಿಯ ಇ.ಎಸ್.ಐ.ಸಿ. ಮತ್ತು ಜಿಮ್ಸ್ ಆಸ್ಪತ್ರೆಯನ್ನು ಕೋವಿಡ್–19 ಆಸ್ಪತ್ರೆಗಳೆಂದು ಘೋಷಿಸಿ ಕ್ರಮವಾಗಿ 360 ಮತ್ತು 330 ಐಸೋಲೆಷನ್ ಬೆಡ್ ಸ್ಥಾಪಿಸಲಾಗಿದೆ. ಸೋಂಕಿತ ವ್ಯಕ್ತಿಯ ಇತಿಹಾಸ ಅರಿತುಕೊಂಡು ಆತನ ಸಂಪರ್ಕದಲ್ಲಿ ಬಂದಿರುವ ವ್ಯಕ್ತಿಗಳನ್ನು ಹಾಗೂ ವಿದೇಶದಿಂದ ಮರಳಿದವರನ್ನು ಪತ್ತೆ ಹಚ್ಚಿ ಅವರನ್ನು ಗೃಹ ಬಂಧನದಲ್ಲಿರಿಸಲಾಗುತ್ತಿದೆ. ರೋಗ ಉಲ್ಬಣಿಸಿದಲ್ಲಿ ಮುಂಜಾಗ್ರತವಾಗಿ ಸರ್ಕಾರಿ ಗೃಹ ಬಂಧನಕ್ಕೆ ಯೂನಾನಿ ಆಸ್ಪತ್ರೆ ಮತ್ತು ಸೂಪರವಿಷನ್ ಐಸೋಲೇಷನ್ ವಾರ್ಡ್ ಸ್ಥಾಪನೆಗೆ ಸರ್ಕಾರಿ ವಸತಿ ನಿಲಯಗಳನ್ನು ಗುರುತಿಸಲಾಗಿದೆ. ಇದಲ್ಲದೆ ಕಲಬುರಗಿ ನಗರದಲ್ಲಿ ಜ್ವರ, ಕೆಮ್ಮು, ಶೀತ, ಉಸಿರಾಟ ಸಮಸ್ಯೆ ಕಂಡುಬಂದಲ್ಲಿ ತಪಾಸಣೆಗೆ





4 ಕಡೆ ಫೀವರ್ ಕ್ಲಿನಿಕ್ ಸ್ಥಾಪಿಸಿದೆ. ಇನ್ನೂ ಹೆಮ್ಮಾರಿ ಕೊರೊನಾ ಹೋರಾಟಕ್ಕೆ ಸಹಕರಿಸಲು ಖಾಸಗಿ ವೈದ್ಯರೊಂದಿಗೆ ಸಭೆ ನಡೆಸಿ ಸಹಕಾರ ಕೋರಲಾಗಿದೆ.

**10 ದಿನದಲ್ಲಿ ಪ್ರಯೋಗಾಲಯ ಸ್ಥಾಪನೆ:** ಕೊರೊನಾ ಸೋಂಕಿನ ತೀವ್ರತೆ ಅರಿತಿದ್ದ ಜಿಲ್ಲಾಧಿಕಾರಿ ಶರತ್ ಬಿ. ಅವರು ಜಿಲ್ಲೆಯಲ್ಲಿ ಮೊದಲ ಕೊರೊನಾ ಪಾಸಿಟಿವ್ ಪತ್ತೆಯಾದ 10 ದಿನದೊಳಗೆ ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಕಲಬುರಗಿ ಜಿಮ್ಸ್ ಆಸ್ಪತ್ರೆಯಲ್ಲಿ ಕೋವಿಡ್–19 ಪರೀಕ್ಷೆಯ ಪ್ರಯೋಗಾಲಯವನ್ನು ಮಾರ್ಚ್ 21 ರಿಂದಲೇ ಕಾರ್ಯಾರಂಭವಾಗುವಂತೆ ಮಾಡಿದ್ದರು.

**ಪೌರಕಾರ್ಮಿಕರ ರಕ್ಷಣೆಗೆ "ಟನೆಲ್":** ಕಲಬುರಗಿ ನಗರ ಮತ್ತು ಜಿಲ್ಲೆಯಾದ್ಯಂತ ಸ್ಥಳೀಯ ಸಂಸ್ಥೆಗಳಿಂದ ಮತ್ತು ಗ್ರಾಮ ಪಂಚಾಯತಿಯಿಂದ ಸ್ವಚ್ಛತೆ ಮತ್ತು ಫಾಗಿಂಗ್ ಕಾರ್ಯ ಭರ್ಜರಿಯಾಗಿ ನಡೆಯುತ್ತಿದೆ. ಪೌರಕಾರ್ಮಿಕರ ಸುರಕ್ಷತೆಗೆ ಕಲಬುರಗಿ ಮಹಾನಗರ ಪಾಲಿಕೆ ಟೌನ್ ಹಾಲ್ ಬಳಿ ಸೋಂಕು ತಡೆಗಟ್ಟಲು ಸೋಡಿಯಂ ಹೈಪೋಕ್ಲೋರೈಡ್ ದ್ರಾವಣವನ್ನು ಸ್ಪ್ರಿಂಕ್ಲರ್ ಜೆಟ್‌ಗಳ ಸಹಾಯದಿಂದ ಸ್ಪ್ರೇ ಮಾಡಲು ಟನೆಲ್ ನಿರ್ಮಿಸಿದೆ. ಪ್ರತಿನಿತ್ಯ ಸ್ವಚ್ಛತೆ ಮುನ್ನ ಮತ್ತು ಬಳಿಕ ಪೌರಕಾರ್ಮಿಕರು ಟನೆಲ್‌ನಲ್ಲಿ ಹಾದುಹೋಗಿ ಸ್ಪ್ರೇ ಮಾಡಿಕೊಂಡಲ್ಲಿ ಕೊರೊನಾ ಸೇರಿದಂತೆ ಎಲ್ಲಾ ವೈರಸ್‌ಗಳಿಂದ ರಕ್ಷಿಸಿಕೊಳ್ಳಬಹುದಾಗಿದೆ.


**ಮನೆಗೆ ತರಕಾರಿ ಪೂರೈಕೆ:** ಹೆಚ್ಚಿನ ಜನಸಂದಣಿ ತಡೆಗೆ ಕಲಬುರಗಿ ನಗರದ ವಾರ್ಡ್‌ವಾರು ಮನೆಗಳಿಗೆ ಸಾರ್ವಜನಿಕರ ಬೇಡಿಕೆಯನ್ನು ವಾಟ್ಸ್ಯಾಪ್ ಮೂಲಕ ಪಡೆದು ಸುರಕ್ಷತಾ ಕ್ರಮ ವಹಿಸಿ ಮಹಾನಗರ ಪಾಲಿಕೆಯಿಂದ ಲಘು ವಾಹನ, ತಳ್ಳುವ ಬಂಡಿ ಮೂಲಕ ತರಕಾರಿ ಸರಬರಾಜು ಪೂರೈಸಲಾಗುತ್ತಿದೆ.

**ಧಾರ್ಮಿಕ ಮುಖಂಡರ ಸಹಕಾರ:** ಕೊರೊನಾ ಹರಡದಂತೆ ಧಾರ್ಮಿಕ ಮುಖಂಡರ ಸಭೆ ಕರೆದು ಜಿಲ್ಲಾಡಳಿತಕ್ಕೆ ಅಗತ್ಯ ಸಹಕಾರ ನೀಡಲು ಮನವಿ ಮಾಡಲಾಯಿತು. ಸೂಫಿ–ಸಂತರ ನಾಡು ಕಲಬುರಗಿ ಜನರಲ್ಲಿ ಜಾಗೃತಿ ಮೂಡಿಸಲು ಕಲಬುರಗಿ ಶರಣಬಸವೇಶ್ವರ ಸಂಸ್ಥಾನದ ಪೂಜ್ಯ ಡಾ.ಶರಣಬಸವಪ್ಪ ಅಪ್ಪ ಮತ್ತು ಹಜರತ್ ಖಾಜಾ ಬಂದೇ ನವಾಜ್ ದರ್ಗಾದ ಸಜ್ಜಾದೆ ನಶೀನ್ ಡಾ.ಸಯ್ಯದ್ ಶಹಾ ಖುಸ್ರೋ ಹುಸೇನಿ ಅವರಿಂದ ಸಾರ್ವಜನಿಕರಲ್ಲಿ ಮನವಿ ಮಾಡುವ ವಿಡಿಯೋಗಳನ್ನು ತಯಾರಿಸಿ ಸಾಮಾಜಿಕ ಜಾಲತಾಣದ ಮೂಲಕ ಪ್ರಚಾರ





Downloaded From: www.kpscvaani.com




ಮಾಡಲಾಯಿತು. ಸೇಡಂ ಪಟ್ಟಣದಲ್ಲಿ ಶ್ರೀ ಕೊತ್ತಲ ಬಸವೇಶ್ವರ ದೇವಾಲಯದ ಪೂಜ್ಯ ಸದಾಶಿವ ಮಹಾಸ್ವಾಮೀಜಿ ಅವರು ಪಟ್ಟಣದಾದ್ಯಂತ ವಾಹನದ ಮೂಲಕ ಸಂಚರಿಸಿ ಕೊರೊನಾ ಬಗ್ಗೆ ಜಾಗೃತಿ ಮೂಡಿಸಿದ್ದು, ಎಲ್ಲರ ಪ್ರಶಂಸನೆಗೆ ಪಾತ್ರವಾಯಿತು.

**ಜಾಗೃತಿ ವಾಹನಗಳ ಸಂಚಾರ:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕಾರ್ಮಿಕ ಇಲಾಖೆ ಮತ್ತು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯಿಂದ ಕೊರೊನಾ ಸೋಂಕು ಕುರಿತು ಜನ ಜಾಗೃತಿ ಮೂಡಿಸಲು ಮಾಹಿತಿ ಫಲಕಗಳೊಂದಿಗೆ ತಯಾರಿಸಲಾದ ಸಂಚಾರಿ ವಾಹನಗಳು ಜಿಲ್ಲೆಯಾದ್ಯಂತ ಮಿಂಚಿನ ಸಂಚಾರ ಕೈಗೊಂಡಿವೆ. ಸ್ವಯಂ ಸೇವಕರು ಪ್ರತಿದಿನ ಜಿಲ್ಲೆಯ ವಿವಿಧ ಪಟ್ಟಣ, ಗ್ರಾಮಗಳಿಗೆ ತೆರಳಿ ಕೊರೊನಾ ಲಕ್ಷಣಗಳು, ತೆಗೆದುಕೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳು, ಸಾಮಾಜಿಕ ಅಂತರ ಪರಿಪಾಲನೆ, ಸ್ಯಾನಿಟೈಜರ್, ಮಾಸ್ಕ್ ಬಳಕೆ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತಿದ್ದಾರೆ.

**ಡಿ.ಸಿ. ಕಾರ್ಯಕ್ಕೆ ಎಲ್ಲೆಡೆ ಮೆಚ್ಚುಗೆ:** ರಾಜ್ಯದ ಉಪಮುಖ್ಯಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಎಂ. ಕಾರಜೋಳ ಹಾಗೂ ಜಿಲ್ಲೆಯ ಜನಪ್ರತಿನಿಧಿಗಳ ನಿರ್ದೇಶನವನ್ನು ಪಾಲಿಸುತ್ತಾ ಕಲಬುರಗಿ ಜಿಲ್ಲಾಧಿಕಾರಿ ಶರತ್ ಬಿ. ಅವರು ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳ ತಂಡವನ್ನು ರಚಿಸಿಕೊಂಡು 24 ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತಿದ್ದಾರೆ. ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಪ್ರತಿದಿನ ಆಸ್ಪತ್ರೆ, ವಿವಿಧ ಪ್ರದೇಶಗಳಿಗೆ ಭೇಟಿ, ಸಭೆ, ವಿಡಿಯೋ ಕಾನ್ಫರೆನ್ಸ್ ಹೀಗೆ ಎಲ್ಲದರಲ್ಲೂ ಸಕ್ರಿಯವಾಗಿ ಭಾಗವಹಿಸಿ ಜಿಲ್ಲೆಯಲ್ಲಿ ಸೋಂಕು ನಿಯಂತ್ರಣಕ್ಕೆ ಎಲ್ಲ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರಿಂದ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಜಿಲ್ಲಾಧಿಕಾರಿಗಳ ಪ್ರತಿ ಕೆಲಸ ಕಾರ್ಯದಲ್ಲಿ ಸಹಕಾರ ನೀಡುತ್ತಿರುವ ಸ್ವತಃ ವೈದ್ಯರಾಗಿರುವ ಜಿಲ್ಲಾ ಪಂಚಾಯತ್ ಸಿ.ಇ.ಓ ಡಾ.ಪಿ.ರಾಜಾ, ನಗರ ಪೊಲೀಸ್ ಆಯುಕ್ತ ಎನ್. ಸತೀಶ್ ಕುಮಾರ್, ಎಸ್.ಪಿ. ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಡಿ.ಸಿ.ಪಿ. ಕಿಶೋರ ಬಾಬು, ಮಹಾನಗರ ಪಾಲಿಕೆ ಆಯುಕ್ತ ರಾಹುಲ ಪಾಂಡ್ವೆ ಸೇರಿದಂತೆ ವೈದ್ಯ, ಸ್ವಚ್ಛತಾ, ಪೊಲೀಸ್ ಸಿಬ್ಬಂದಿಯವರ ಶ್ರಮವು ಅಡಗಿದೆ.

**–ರವಿ ಮಿರಸ್ಕರ್**

ಬೀದರ

## ಬೀದರ ಜಿಲ್ಲೆ: ಕೊರೊನಾ ವೈರಾಣು ತಡೆಗೆ ನೂರೆಂಟು ಕ್ರಮಗಳು

**ಬೀ**ದರ ಜಿಲ್ಲೆಯಲ್ಲಿ ಜಿಲ್ಲಾಡಳಿತ ಸತತವಾಗಿ ಹಗಲಿರುಳು ಕೋವಿಡ್–19 ಕೊರೊನಾ ವೈರಸ್‌ನಿಂದ ಜನ ಸಾಮಾನ್ಯರನ್ನು ರಕ್ಷಿಸಲು ಶ್ರಮಿಸುತ್ತಿದೆ. ಜಿಲ್ಲಾಡಳಿತ ಮತ್ತು ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಜನಸಾಮಾನ್ಯರ ಸಹಕಾರ ಸಕ್ರಿಯ ಪಾಲುದಾರಿಕೆ ಇಲ್ಲದೆ ಈ ವಿಷ ವೈರಾಣುವಿನಿಂದ ಜನರನ್ನು ರಕ್ಷಿಸುವುದು ಅಸಾಧ್ಯ ಎಂದರಿತು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಕರಪತ್ರವನ್ನು ಹಂಚಲಾಗಿದೆ. ಇಲ್ಲಿ ಉರ್ದು, ಮರಾಠಿ ಭಾಷಿಕರೂ ಇರುವ ಕಾರಣ ಕರಪತ್ರಗಳನ್ನು ಕನ್ನಡ ಸೇರಿದಂತೆ ಉರ್ದು ಮತ್ತು ಆಂಗ್ಲ ಭಾಷೆಗಳಲ್ಲಿ ಮುದ್ರಿಸಿ ವಿತರಿಸಲಾಗಿದೆ.



ವೈರಾಣು ತಡೆ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಅವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳು ಮತ್ತು ವೈದ್ಯಾಧಿಕಾರಿಗಳನ್ನೊಳಗೊಂಡ ಜಿಲ್ಲಾ ಸಮನ್ವಯ ಸಮಿತಿ ಸಭೆಗಳು ನಿರಂತರ ನಡೆದಿವೆ. ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದಗಳು ಕೂಡ ನಿರಂತರ ನಡೆದಿದೆ. ಜಿಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿರುವ 16 ಸಮಿತಿಗಳು ಕಾರ್ಯಪ್ರವೃತ್ತವಾಗಿವೆ.

ಕೊರೊನಾ ಹೇಗೆ ಹರಡುತ್ತದೆ? ಅದರ ಲಕ್ಷಣಗಳೇನು? ಅದರ ನಿಗ್ರಹ ಹೇಗೆ ಮಾಡಬೇಕು? ಎನ್ನುವ ಮಾಹಿತಿಯನ್ನು ಸಾರ್ವಜನಿಕರು, ಅಧಿಕಾರಿಗಳು, ವ್ಯಾಪಾರಸ್ಥರು, ಬ್ಯಾಂಕರ್ಸ್, ಪತ್ರಕರ್ತರು ಮತ್ತು ಜನಪ್ರತಿನಿಧಿಗಳು ಸೇರಿದಂತೆ ಎಲ್ಲ ವರ್ಗದವರಿಗೂ ಪ್ರೊ.ಡಾ.ಮಹೇಶ ಟಾಂಡೂರೆ ಅವರು ಮಾಸ್ಕ್ ಬಳಕೆ, ಸ್ಯಾನಿಟೈಜರ್ ಬಳಕೆಯ ಬಗೆಗಿನ ಪ್ರಾತ್ಯಕ್ಷಿಕೆ ನೀಡಿದ್ದಾರೆ.

ಇಬ್ಬರು ವೈದ್ಯರು ಮೂರು ಪಾಳಿಯಲ್ಲಿ ಇದ್ದು ಕಂಟ್ರೋಲ್ ರೂಮಿಗೆ 1800–425–4316 4317/4318/4319 ಮತ್ತು 08482–224144 ಸಹಾಯವಾಣಿಯಿಂದ ಸ್ವೀಕರಿಸಿದ ದೂರುಗಳಿಗೆ ಕ್ಷಿಪ್ರ ಪ್ರತಿಸ್ಪಂದನೆ ಸಿಕ್ಕಿದೆ. ವಿದೇಶ–ಹೊರರಾಜ್ಯಗಳಿಂದ ಜಿಲ್ಲೆಗೆ ಬಂದಿದ್ದವರ ಮಾಹಿತಿ. ಜ್ವರ, ನೆಗಡಿ, ಕೆಮ್ಮು, ಉಸಿರಾಟ ತೊಂದರೆ ಅನಾರೋಗ್ಯದ ಲಕ್ಷಣವಿದ್ದವರಿಗೆ ಮಾಹಿತಿ ನೀಡಲಾಗಿದೆ.

ಲಾಕ್‌ಡೌನ್ ಘೋಷಣೆ ಮುಂಚೆಯೇ ಜಿಲ್ಲೆಯ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು ಮತ್ತು ಪದವಿ ಕಾಲೇಜು ವಿದ್ಯಾಲಯದ ವಿದ್ಯಾರ್ಥಿಗಳಿಗೆ ವೈರಸ್ ತಗಲದಂತೆ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಅರಿವು ಮೂಡಿಸಲಾಗಿದೆ.



Downloaded From: www.kpscvaani.com

ಬೀದರ್ ಜಿಲ್ಲೆಯಾದ್ಯಂತ ತರಕಾರಿ, ಕಿರಾಣಿ ಮತ್ತು ಔಷಧಿ ಅಂಗಡಿ ಹೊರತುಪಡಿಸಿ, ಕಾರ್ಖಾನೆ, ಮಲ್ಟಿಪ್ಲೆಕ್ಸ್ ಚಿತ್ರ ಮಂದಿರ, ಉದ್ಯಾನವನ, ನಾಟಕ ಪ್ರದರ್ಶನ, ಶಾಪಿಂಗ್ ಮಾಲ್, ಸ್ವಿಮ್ಮಿಂಗ್‌ಪೂಲ್ಸ್, ಜಿಮ್, ಫಿಟ್‌ನೆಸ್ ಸೆಂಟರ್ ಮುಚ್ಚಿಸಿ, ಜಾತ್ರೆಗಳನ್ನು ನಿಷೇಧಿಸಿ, ವಸ್ತು ಪ್ರದರ್ಶನಗಳು, ಸಂಗೀತ ಹಬ್ಬ, ಸಭೆ ಸಮಾರಂಭ ರದ್ದುಪಡಿಸಿ, ಕ್ರೂಸರ್, ಜೀಪ್, ಆಟೋ ರಿಕ್ಷಾಗಳ ಪ್ರಯಾಣಿಕರ ಸಂಚಾರಕ್ಕೆ ನಿರ್ಬಂಧ ಹೇರಿ ಮತ್ತು ಮುನ್ನೆಚ್ಚರಿಕೆ ಕ್ರಮವಾಗಿ ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತೆಲಂಗಾಣ ಹೊರರಾಜ್ಯದ ವಾಹನಗಳನ್ನು ಮತ್ತು ಹೊರಜಿಲ್ಲೆಗಳ ಚಲನವಲನವನ್ನು ಮಾ.21 ರಿಂದಲೇ ನಿರ್ಬಂಧಿಸಿ ಸೋಂಕು ಹರಡದಂತೆ ಹಲವಾರು ಕ್ರಮಗಳನ್ನು ವಹಿಸಲಾಗಿದೆ. ತಾಲೂಕು ಮತ್ತು ಜಿಲ್ಲಾಮಟ್ಟದಲ್ಲಿ ನೋಡೆಲ್ ಅಧಿಕಾರಿಗಳನ್ನು ನೇಮಿಸಿ ಪರಿಣಾಮಕಾರಿ ನಿಯಮಪಾಲನೆ ಮಾಡಲಾಗುತ್ತಿದೆ.

ನೆರಳು, ಸುರಕ್ಷತೆ, ಬ್ಯಾರಿಕೆಡ್, ಐಡಿ ಕಾರ್ಡು, ಕುಡಿಯುವ ನೀರು, ಕುರ್ಚಿ, ಮೇಜುಗಳು, ವಹಿಗಳು, ಥರ್ಮಲ್ ಸ್ಕ್ಯಾನರ್‌ಗಳು, ಮುಖಗವಸು, ಸ್ಯಾನಿಟೈಸರ್, ಬೆಳಕಿನ ದೀಪದಂತಹ ಮೂಲಭೂತ ಸೌಕರ್ಯವಿರುವ ಚೆಕ್‌ಪೋಸ್ಟ್‌ಗಳು ದಿನದ 24 ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತಿವೆ.

ವೈದ್ಯಕೀಯ ಸಿಬ್ಬಂದಿಯು ಜಿಲ್ಲೆಯಲ್ಲಿ ಒಟ್ಟು 32 ಕೊರೊನಾ ವೈರಸ್ ಜ್ವರ ಪರೀಕ್ಷೆ ಥರ್ಮಲ್ ಸ್ಕ್ರೀನಿಂಗ್ ಸೆಂಟರ್‌ನಲ್ಲಿ ಇದುವರೆಗೆ ಬೀದರ ಜಿಲ್ಲೆಗೆ ರಸ್ತೆ ಮೂಲಕ, ರೈಲಿನ ಮೂಲಕ ಹಾಗೂ ವಿಮಾನದ ಮೂಲಕ ಆಗಮಿಸಿದ 39,090 ಜನರಿಗೆ ತಪಾಸಣೆ ನಡೆಸಲಾಗಿದೆ.

ವಿದೇಶ ಹಾಗೂ ಅನ್ಯ ರಾಜ್ಯದಿಂದ ಮರಳಿರುವ ಜನರ ಕೈಗಳಿಗೆ ಸೀಲ್‌ಗಳನ್ನು ಹಾಕಿ, ಹೊರ ರಾಜ್ಯ ಮತ್ತು ಜಿಲ್ಲೆಗಳಿಂದ ಆಗಮಿಸಿದವರಿಗೆ ಕಡ್ಡಾಯ ಎರಡು ವಾರಗಳ ಕಾಲ ಹೋಮ್‌ಕ್ವಾರಂಟೈನ್ ಮಾಡಿ ಪ್ರತಿ ದಿನ ಅವರ ಆರೋಗ್ಯದ ಮೇಲೆ ನಿಗಾವಹಿಸಲಾಗಿದೆ.

ಜಿಲ್ಲೆಯಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳು ವರದಿಯಾದ ಪ್ರದೇಶಗಳಲ್ಲಿ ನಿರ್ಬಂಧವನ್ನು ಕಟ್ಟುನಿಟ್ಟಾಗಿ ಪಾಲನೆ ಮತ್ತು ಪಾಸಿಟಿವ್ ಪ್ರಕರಣದ ಮೃತದೇಹಗಳ ನಿರ್ವಹಣೆ ಮತ್ತು ವಿಲೇವಾರಿಯನ್ನು ಕೂಡ ಗೊತ್ತುಪಡಿಸಿದ ಕಾರ್ಯವಿಧಾನ ಮೂಲಕ ನಡೆಸಿ ವೈರಾಣು ತಡೆಗೆ ಕ್ರಮವಹಿಸಲಾಗುತ್ತಿದೆ.





ವೈರಾಣು ಹರಡದಂತೆ ತಡೆಯುವ ನಿಟ್ಟಿನಲ್ಲಿ ಈಗಾಗಲೇ ಸೋಂಕಿತರ ಸಂಪರ್ಕದಲ್ಲಿ ಬಂದಂತಹ ವ್ಯಕ್ತಿಗಳನ್ನು ಗುರುತಿಸುವ ಪ್ರಕ್ರಿಯೆ ತೀವ್ರ ರೀತಿಯಲ್ಲಿ ನಡೆಯುತ್ತಿದ್ದು, ಇದುವರೆಗೆ 310 ಪ್ರೈಮರಿ ಕಾಂಟ್ಯಾಕ್ಟ್ ಮತ್ತು ಸಾವಿರಕ್ಕೂ ಹೆಚ್ಚು ಸೆಕೆಂಡರಿ ಕಾಂಟ್ಯಾಕ್ಟ್ ಹೊಂದಿದ ವ್ಯಕ್ತಿಗಳನ್ನು ಗುರುತಿಸಿ ಅವರ ಗಂಟಲು ದ್ರವ ಮತ್ತು ರಕ್ತದ ಮಾದರಿ ಪರೀಕ್ಷೆ ಪ್ರಕ್ರಿಯೆ ನಡೆಯುತ್ತಿದೆ.

ಆರಂಭದ ಹಂತದಲ್ಲೇ ವ್ಯಕ್ತಿಗಳ ಆರೋಗ್ಯದ ಬಗ್ಗೆ ನಿಗಾವಹಿಸಿ ಕೊರೊನಾ ಹರಡದಂತೆ ತಡೆಯುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಫಿವರ್ ಕ್ಲಿನಿಕ್‌ಗಳನ್ನು ತೆರೆದು ಜ್ವರ ಪರೀಕ್ಷೆ ಕಾರ್ಯ ನಡೆಯುತ್ತಿದೆ. ಜಿಲ್ಲೆಯಲ್ಲಿ ಕೋವಿಡ್ ಆಸ್ಪತ್ರೆಗಳ ನಿರ್ವಹಣೆಯು ಕೂಡ ನಡೆಯುತ್ತಿದೆ.

ಜಿಲ್ಲೆಯ ಬ್ಯಾಂಕರ್‌ಗಳ ಸಭೆ ನಡೆಸಿ, ಪಿಎಂ ಕಿಸಾನ್ ಸಮ್ಮಾನ್ ನಿಧಿ, ಸಾಮಾಜಿಕ ಭದ್ರತಾ ಯೋಜನೆ, ಜನ್‌ಧನ್ ಖಾತೆಗೆ ಬಿಡುಗಡೆಯಾದ ಅನುದಾನವನ್ನು ಫಲಾನುಭವಿಗಳಿಗೆ ನೇರವಾಗಿ ಮನೆ ಮನೆಗೆ ತೆರಳಿ ಹಣ ಪಾವತಿಸಲು ಸೂಚಿಸಲಾಗಿದೆ.

ಕೊರೊನಾ ವೈರಸ್ (ಕೋವಿಡ್–19) ಹರಡದಂತೆ ಮುಂಜಾಗ್ರತಾ ಕ್ರಮಕ್ಕಾಗಿ ಜಿಲ್ಲಾ ಆರೋಗ್ಯ ಇಲಾಖೆಯು ಜಿಲ್ಲಾ ಆರೋಗ್ಯ ಅಧಿಕಾರಿ, ನಿರ್ದೇಶಕರು ಬ್ರಿಮ್ಸ್, ಜಿಲ್ಲಾ ಶಸ್ತ್ರತಜ್ಞ ಅಧಿಕಾರಿ ಹಾಗೂ ಇತರೆ ವೈದ್ಯಾಧಿಕಾರಿಗಳ ತಂಡ ಇರುವ ಜಿಲ್ಲಾ ಮಟ್ಟದ ವಿಚಕ್ಷಣಾ ದಳವು ಸಭೆ ನಡೆಸಿ ವೈರಾಣು ಹರಡದಂತೆ ಮುಂಜಾಗ್ರತೆ ವಹಿಸುತ್ತಿದೆ.

ಜಿಲ್ಲೆಯ ಎಲ್ಲಾ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ಖಾಸಗಿ ವೈದ್ಯರ ಸಭೆ ನಡೆಸಿ ಸದರಿಯವರಿಗೆ ಕೊರೊನಾ ವೈರಸ್ ಸಂಬಂಧ ತರಬೇತಿ ನೀಡಲಾಗಿದೆ. ಜಿಲ್ಲಾ ಸರ್ಕಾರಿ ಆಸ್ಪತ್ರೆ, ಕೋವಿಡ್–19 ವಿಶೇಷ ವಾರ್ಡ್, ಐಸೋಲೇಶನ್ ವಾರ್ಡ್ ಪರಿಶೀಲನೆ ಹಾಗೂ ಸರ್ಕಾರಿ ಮೆಡಿಕಲ್ ಕಾಲೇಜು ಆಸ್ಪತ್ರೆ ಹಾಗೂ 100 ಹಾಸಿಗೆಯ ತಾಯಿ ಮತ್ತು ಮಕ್ಕಳ ಆರೈಕೆ ಆಸ್ಪತ್ರೆ ಪರಿಶೀಲನೆ ನಡೆಸಲಾಗುತ್ತಿದೆ.

ಜಿಲ್ಲೆಯಲ್ಲಿ ಕೊರೊನಾ ವೈರಸ್ ಸೋಂಕು ತಗುಲಿದ ಪ್ರದೇಶಗಳ ಸುತ್ತಲೂ 3 ಕಿ.ಮಿ ಪ್ರದೇಶವನ್ನು ಕಂಟೈನ್‌ಮೆಂಟ್ ಮತ್ತು 5 ಕಿ.ಮಿ ಸುತ್ತಲಿನ ಪ್ರದೇಶವನ್ನು ಬಫರ್ ಜೋನ್ ಎಂದು ಘೋಷಿಸಿ, ಈ ಪ್ರದೇಶದ ಒಳ ಮತ್ತು ಹೊರ ಪ್ರವೇಶವನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

ಕಂಟೈನ್‌ಮೆಂಟ್ ಪ್ರದೇಶದ ಜನರಿಗೆ ಚಲನವಲನಗಳನ್ನು ಉಲ್ಲಂಘಿಸದಿರಲು ತಿಳಿಸಲಾಗಿದೆ. ಜಿಲ್ಲೆಯ ಎಲ್ಲಾ ವ್ಯಾಪಾರಸ್ಥರ ಸಭೆ ಕರೆದು ಅವರ ಮೂಲಕ ಔಷಧಿಗಳು, ಆಹಾರ ಧಾನ್ಯ, ತರಕಾರಿ, ಹಾಲು, ಹಣ್ಣು ಇತ್ಯಾದಿಗಳನ್ನು ಮನೆ ಬಾಗಿಲಿಗೆ ಸ್ವಯಂಪ್ರೇರಿತವಾಗಿ ನೋಂದಾಯಿಸಿದ ಸಂಘದ ಕಾರ್ಯಕರ್ತರ ಸಹಾಯದೊಂದಿಗೆ ಸರಬರಾಜು ಮಾಡಲಾಗುತ್ತಿದೆ.

ಜಿಲ್ಲೆಗೆ ಇದುವರೆಗೆ ಆಗಮಿಸಿದವರಿಗೆಲ್ಲರಿಗೂ ರೋಗ ಲಕ್ಷಣಗಳಿಲ್ಲದಿದ್ದರೂ ಮನೆಯಲ್ಲಿ 14 ದಿನಗಳ ಕಾಲ ಪ್ರತ್ಯೇಕವಾಗಿರಿಸಲಾಗಿದೆ. ಗಾಳಿ ಸುದ್ದಿಯನ್ನು ಸೂಕ್ತವಾಗಿ ನಿಗ್ರಹಿಸಲಾಗಿದೆ. ವಾಟ್ಸಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಮತ್ತು ಟ್ವಿಟರ್ ಸಾಮಾಜಿಕ ಜಾಲತಾಣಗಳ ಮೇಲೆ ಪ್ರತಿದಿನ ಕಣ್ಣಿಟ್ಟು ಕೊರೊನಾ ವೈರಸ್ ಬಗ್ಗೆ ಸುಳ್ಳು ಪ್ರಚಾರ ಹರಿಬಿಡದಂತೆ ಕಟ್ಟೆಚ್ಚರ ವಹಿಸಲಾಗಿದೆ.

ಲಾಕ್‌ಡೌನ್‌ದಿಂದ ತೊಂದರೆಯಾಗಬಾರದು ಮತ್ತು ಅವರಿಂದ ಇತರರಿಗೂ ಹರಡಬಾರದೆಂದು ಪ್ರತಿ ಹಳ್ಳಿ ನಗರ ಮತ್ತು ಗಡಿ ಪ್ರದೇಶಗಳಲ್ಲಿ ಆಹಾರ ಮತ್ತು ಆಶ್ರಯ ಕೇಂದ್ರಗಳನ್ನು ಸ್ಥಾಪಿಸಿ ಅಲ್ಲಿ ವಲಸೆ ಕಾರ್ಮಿಕರು, ಭಿಕ್ಷುಕರು, ಸಂತ್ರಸ್ಥ ನಿರಾಶ್ರಿತರು, ಅನಾಥರು ಮತ್ತು ಪಡಿತರ ಚೀಟಿ ಹೊಂದಿರದ ವಸತಿ ಊಟ ಹಾಗೂ ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾದ ಸಾರ್ವಜನಿಕರಿಗೆ ಆಹಾರ ಹಾಗೂ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಬೀದರ ಜಿಲ್ಲೆಯ ವೆಬ್‌ಸೈಟ್‌ನಲ್ಲಿ ಒಟ್ಟು ಜಿಲ್ಲೆಯ ಹಲವಾರು ಸ್ವಯಂಪ್ರೇರಿತ ಸ್ವಯಂ ಸೇವಾ ಸಂಘಗಳು ನೋಂದಣಿ ಮಾಡಿಕೊಂಡು ಕಾರ್ಮಿಕರು, ಪ್ರವಾಸಿಗರು, ಬಿಕ್ಷುಕರು, ಸಂತ್ರಸ್ಥರು ನಿರಾಶ್ರಿತರು, ಅನಾಥರು, ಪಡಿತರ ಚೀಟಿ ಹೊಂದಿರದ ವಸತಿ, ಊಟ ಹಾಗೂ ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾದ ಸಾರ್ವಜನಿಕರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುತ್ತ ಕೊರೊನಾ ವೈರಾಣು ಹರಡದಂತೆ ಜಿಲ್ಲಾಡಳಿತಕ್ಕೆ ಸಹಕರಿಸುತ್ತಿವೆ.

–ಗವಿಸಿದ್ದಪ್ಪ ಹೊಸಮನಿ

ಚಿಕ್ಕಬಳ್ಳಾಪುರ

## ಕೊರೊನಾ ಸೋಂಕು ಹರಡುವಿಕೆ ತಡೆಗೆ ಚಿಕ್ಕಬಳ್ಳಾಪುರ ಜಿಲ್ಲಾಡಳಿತದ ಪಾಸಿಟಿವ್ ನಡೆ

ಇಡೀ ಜಗತ್ತನ್ನೇ ಬೆಚ್ಚಿ ಬೀಳಿಸುತ್ತಿರುವ ಕೊರೊನಾ ವೈರಾಣು( ಕೋವಿಡ್ –19) ತನ್ನ ಕಬಂಧ ಬಾಹುಗಳನ್ನು ಬರಪೀಡಿತ ಚಿಕ್ಕಬಳ್ಳಾಪುರ ಜಿಲ್ಲೆಗೂ ವಿಸ್ತರಿಸಿದೆ. ಪ್ರಸ್ತುತ (ಏಪ್ರಿಲ್–17 ಕ್ಕೆ ಅನ್ವಯಿಸುವಂತೆ) ಜಿಲ್ಲೆಯಲ್ಲಿ ಒಟ್ಟು 16 ಕೊರೊನಾ ವೈರಾಣು ಸೋಂಕಿನ ಪ್ರಕರಣಗಳು ಪತ್ತೆಯಾಗಿವೆ. ಜಿಲ್ಲೆಯ ಗೌರಿಬಿದನೂರು ನಗರ ವ್ಯಾಪ್ತಿಯ ಹಿರೇಬಿದನೂರಿನಲ್ಲಿ ಮೊದಲ ಕೊರೊನಾ ಪ್ರಕರಣ ಪತ್ತೆಯಾಗಿತ್ತು. ಈವರೆಗೆ ಸೋಂಕು ದೃಢಪಟ್ಟಿರುವ 16 ಪ್ರಕರಣಗಳ ಪೈಕಿ 65 ವರ್ಷದ ಒಬ್ಬ ಮಹಿಳೆ ಮತ್ತು 69 ವರ್ಷದ ಒಬ್ಬ ಪುರಷ ವ್ಯಕ್ತಿ ಮೃತಪಟ್ಟಿದ್ದಾರೆ. 8 ಜನರು ಸೋಂಕಿನಿಂದ ಸಂಪೂರ್ಣ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದಾರೆ. ಆದರೆ, ಜಿಲ್ಲಾಡಳಿತ ಮತ್ತು ಜಿಲ್ಲಾ ಆರೋಗ್ಯ ಇಲಾಖೆ ಆಸ್ಪತ್ರೆಯಿಂದ ಬಿಡುಗಡೆಯಾದ ಎಲ್ಲರನ್ನೂ ವಿಶೇಷ ನಿಗಾದಲ್ಲಿ ಇಟ್ಟಿದೆ. 6 ಜನರಿಗೆ ಚಿಕಿತ್ಸೆ ಮುಂದುವರೆದಿದ್ದು, ಇವರೆಲ್ಲರೂ ಆದಷ್ಟು ಬೇಗ ಸೋಂಕಿನಿಂದ ಮುಕ್ತರಾಗಿ ಬಿಡುಗಡೆಯಾಗುವ ವಿಶ್ವಾಸವನ್ನು ಜಿಲ್ಲಾಧಿಕಾರಿ ಆರ್.ಲತಾ ವ್ಯಕ್ತಪಡಿಸಿದ್ದಾರೆ.

ಪ್ರಸ್ತುತ ವರದಿಯಾಗಿರುವ 16 ಪ್ರಕರಣಗಳಲ್ಲಿ 12 ಗೌರಿಬಿದನೂರು ನಗರ ಹಾಗೂ ಉಳಿದ 4 ಪ್ರಕರಣಗಳು ಚಿಕ್ಕಬಳ್ಳಾಪುರ ನಗರ ಪ್ರದೇಶದ ವ್ಯಾಪ್ತಿಗೆ ಸೇರಿವೆ. ಸದ್ಯ ಎರಡೂ ನಗರಗಳ ಎಲ್ಲಾ 62 ವಾರ್ಡ್‌ಗಳನ್ನು ಸೀಲ್‌ಡೌನ್ ಮಾಡಲಾಗಿದೆ. ಜಿಲ್ಲಾಡಳಿತದ ಮಾರ್ಗದರ್ಶನದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ಸೀಲ್‌ಡೌನ್‌ಗೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ. ಅನಗತ್ಯವಾಗಿ ಹೊರಗೆ ಓಡಾಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಈ ಮಧ್ಯೆ ಜಿಲ್ಲಾಡಳಿತದ ಸೂಚನೆಗಳನ್ನು ಉಲ್ಲಂಘಿಸುವವರ ವಿರುದ್ಧ ಪೊಲೀಸರು ಕ್ರಮಕ್ಕೆ ಮುಂದಾಗಿದ್ದು 400 ಕ್ಕೂ ಹೆಚ್ಚು ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಜಿಲ್ಲಾ ಕೇಂದ್ರ ಚಿಕ್ಕಬಳ್ಳಾಪುರ ಮತ್ತು ಗೌರಿಬಿದನೂರು ನಗರಗಳನ್ನು ಹೊರತುಪಡಿಸಿ ಜಿಲ್ಲೆಯ ಉಳಿದ ನಾಲ್ಕು ತಾಲೂಕುಗಳಲ್ಲಿ ಕೊರೊನಾ ಸೋಂಕಿನ ಯಾವುದೇ



ಪ್ರಕರಣಗಳು ವರದಿಯಾಗದಿರುವುದು ಕೊಂಚ ಸಮಾಧಾನದ ಸಂಗತಿ. ಆದರೂ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾಡಳಿತ ಈ ನಾಲ್ಕೂ ತಾಲೂಕುಗಳಲ್ಲಿ ನೈರ್ಮಲ್ಯ ಕಾಪಾಡುವುದೂ ಸೇರಿದಂತೆ ಅಗತ್ಯವಿರುವ ಹಲವು ಕ್ರಮಗಳನ್ನು ಕೈಗೊಂಡಿದೆ. ಆಶಾ ಕಾರ್ಯಕರ್ತರೂ ಒಳಗೊಂಡಂತೆ ಆರೋಗ್ಯ ಇಲಾಖೆ ಸಿಬ್ಬಂದಿ ಸಾರ್ವಜನಿಕರು ಕೊರೊನಾ ಸೋಂಕಿನಿಂದ ಪಾರಾಗುವ ಕುರಿತು ಅರಿವು ಮೂಡಿಸುತ್ತಿದ್ದಾರೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಜನರಲ್ಲಿ ಹೆಚ್ಚಿನ ಅರಿವು ಮೂಡಿಸಲು ಆದ್ಯತೆ ನೀಡಲಾಗುತ್ತಿದೆ.

**ಕೋವಿಡ್ ತಡೆ ಚಿಕಿತ್ಸೆಗೆ ಪ್ರತ್ಯೇಕ ಆಸ್ಪತ್ರೆ** : ಹಳೆಯ ಜಿಲ್ಲಾಸ್ಪತ್ರೆಯನ್ನು ಕೋವಿಡ್ ತಡೆ ಆಸ್ಪತ್ರೆಯನ್ನಾಗಿ ಮಾಡಿ ಅಲ್ಲಿ ಅಗತ್ಯವಿರುವ ವೆಂಟಿಲೇಟರ್ ಮತ್ತಿತರ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ. ಈ ಕೋವಿಡ್ ಆಸ್ಪತ್ರೆಯಲ್ಲಿ ದಿನದ 24 ಗಂಟೆಯೂ ಆರೋಗ್ಯ ಇಲಾಖೆ ಸಿಬ್ಬಂದಿ ಶ್ರಮಿಸುತ್ತಿದ್ದಾರೆ. 100 ಹಾಸಿಗೆಗಳ ಈ ವಿಶೇಷ ಆಸ್ಪತ್ರೆಗೆ ಪೊಲೀಸ್ ಬಿಗಿ ಭದ್ರತೆಯನ್ನೂ ಒದಗಿಸಲಾಗಿದೆ.





Downloaded From: www.kpscvaani.com



**ಮಾಸ್ಕ್ ,ಸ್ಯಾನಿಟೈಜರ್ ಪೂರೈಕೆ :** ಸರ್ಕಾರದಿಂದ ಜಿಲ್ಲೆಗೆ ಈವರೆಗೆ ಒಟ್ಟು 14,284 ಎನ್.95 ಮಾಸ್ಕ್ ಪೂರೈಕೆಯಾಗಿದ್ದು, ಈ ಪೈಕಿ 8,320 ಮಾಸ್ಕ್‌ಗಳನ್ನು ಮುಖ್ಯವಾಗಿ ಕೋವಿಡ್ ಆಸ್ಪತ್ರೆ ಮತ್ತು ತಾಲೂಕು ಆಸ್ಪತ್ರೆಗಳ ವೈದ್ಯರು, ಸಿಬ್ಬಂದಿಗೆ ನೀಡಲಾಗಿದೆ. ಇನ್ನೂ 5,964 ಎನ್.95 ಮಾಸ್ಕ್‌ಗಳು ಲಭ್ಯವಿವೆ. ಪಿಪಿಇ (ವೈಯಕ್ತಿಕ ಸುರಕ್ಷಾ ಕವಚ) ಕಿಟ್‌ಗಳು ಒಟ್ಟು 8572 ಬಂದಿದ್ದು, ಈ ಪೈಕಿ 1585 ಖರ್ಚಾಗಿದ್ದು ಇನ್ನೂ 6987 ಪಿಪಿಇ ಕಿಟ್‌ಗಳು ದಾಸ್ತಾನಿವೆ. 500 ಮಿ.ಲೀ.ನ ಸ್ಯಾನಿಟೈಜರ್‌ಗಳು ಒಟ್ಟು 1,966 ಪೂರೈಕೆಯಾಗಿದ್ದು, 808 ಸ್ಯಾನಿಟೈಜರ್‌ಗಳನ್ನು ಆದ್ಯತೆ ಮೇರೆಗೆ ವಿತರಿಸಲಾಗಿದೆ. ಸಾರ್ವಜನಿಕರಿಗೆ ವಿತರಿಸಲೆಂದೇ 3 ಪದರಗಳ ಮಾಸ್ಕ್‌ಗಳು 70,950 ಸರಬರಾಜಾಗಿದ್ದು, ಇದರಲ್ಲಿ 44,235 ಮಾಸ್ಕ್‌ಗಳನ್ನು ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಮೂಲಕ ವಿತರಿಸುವ ಜೊತೆಗೆ ಜನರು ಕಡ್ಡಾಯವಾಗಿ ಸರ್ಕಾರ ಉಚಿತವಾಗಿ ನೀಡಿರುವ ಮಾಸ್ಕ್ ಹಾಕಿಕೊಳ್ಳಬೇಕು ಮತ್ತು ಸ್ವಚ್ಛತೆಗೆ ಹೆಚ್ಚು ಒತ್ತು ನೀಡಬೇಕು ಎಂದು ಮನವಿ ಮಾಡುವ ಮೂಲಕ ಆರೋಗ್ಯ ಸಂರಕ್ಷಣೆಯ ಕುರಿತು ಅರಿವು ಮೂಡಿಸಲಾಗುತ್ತಿದೆ. ಸದ್ಯ 26,670 ಮಾಸ್ಕ್‌ಗಳು ಲಭ್ಯವಿರುತ್ತವೆ.

**ಸೋಂಕು ನಿವಾರಕ ಸುರಂಗ ಮಾರ್ಗ :** ಜಿಲ್ಲೆಯಲ್ಲಿ ಕೊರೊನಾ ವೈರಾಣು ಸೋಂಕು ತಡೆಗೆ ಹತ್ತು ಹಲವು



ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜಿಲ್ಲೆಯಲ್ಲಿ ಈವರೆಗೆ ಒಟ್ಟು 6 ಸೋಂಕು ನಿವಾರಕ ಸಿಂಪಡಣಾ ಘಟಕಗಳನ್ನು ತೆರೆಯಲಾಗಿದೆ. ಜಿಲ್ಲೆಯ ಗೌರಿಬಿದನೂರು ಮತ್ತು ಶಿಡ್ಲಘಟ್ಟದಲ್ಲಿ ತಲಾ ಒಂದು ಹಾಗೂ ಚಿಕ್ಕಬಳ್ಳಾಪುರ ನಗರದಲ್ಲಿ 4 ಘಟಕಗಳನ್ನು ತೆರೆಯಲಾಗಿದೆ. ಗೌರಿಬಿದನೂರಿನಲ್ಲಿ ವಿನೂತನವಾಗಿ ಸಾವಯವ ಆಧಾರಿತ ರಾಸಾಯನಿಕ ಮುಕ್ತ ಘಟಕವಿರುವುದು ವಿಶೇಷ. ಹಾಗೆಯೇ ಚಿಕ್ಕಬಳ್ಳಾಪುರ ನಗರ ಪೊಲೀಸ್ ಠಾಣೆಯ ಆವರಣದಲ್ಲಿಯೂ ಸಾವಯವ ಆಧಾರಿತ ಘಟಕವನ್ನು ಆರಂಭಿಸಲಾಗಿದ್ದು, ಪೊಲೀಸ್ ಠಾಣೆಗಳ ಮಟ್ಟಿಗೆ ಈ ಪ್ರಯೋಗ ದೇಶದಲ್ಲೇ ಮೊದಲು ಎನ್ನಲಾಗಿದೆ. ಠಾಣೆಗೆ ಬರುವ ಸಿಬ್ಬಂದಿ, ಸಾರ್ವಜನಿಕರ ಜೊತೆಗೆ ಪೊಲೀಸ್ ಕುಟುಂಬಗಳೂ ಈ ಸೋಂಕು ನಿವಾರಕ ಘಟಕದ ಪ್ರಯೋಜನ ಪಡೆಯುತ್ತಿವೆ.

**ಚೆಕ್‌ಪೋಸ್ಟ್‌ಗಳು :** ಜಿಲ್ಲೆಯಲ್ಲಿ ಪ್ರಸ್ತುತ 15 ಕ್ಕೂ ಹೆಚ್ಚು ಅಂತರ್ ಜಿಲ್ಲಾ ಮತ್ತು ಅಂತರ್ ರಾಜ್ಯ ಚೆಕ್‌ಪೋಸ್ಟ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಈ ಚೆಕ್‌ಪೋಸ್ಟ್‌ಗಳ ಮೂಲಕ ಜಿಲ್ಲೆಯ ಗಡಿ ಪ್ರವೇಶಿಸುವ ವಾಹನಗಳಲ್ಲಿನ ಜನರನ್ನು ಆರೋಗ್ಯ ತಪಾಸಣೆಗೆ ಒಳಪಡಿಸಲಾಗುತ್ತಿದೆ. ಅಲ್ಲದೇ, ಎಲ್ಲಾ ವಾಹನಗಳಿಗೂ ಸೋಂಕು ನಿವಾರಕ ರಾಸಾಯನಿಕವನ್ನು ಸಿಂಪಡಣೆ ಮಾಡಿ ಸೋಂಕು ಹರಡದಂತೆ ಎಚ್ಚರ ವಹಿಸಲಾಗುತ್ತಿದೆ.

**ಪ್ರತಿ ವಾರ್ಡ್‌ಗೂ ನೋಡಲ್ ಅಧಿಕಾರಿ :** ಎರಡು ನಗರಗಳ 62 ವಾರ್ಡ್‌ಗಳಲ್ಲಿ ಸಂಪೂರ್ಣ ಸೀಲ್‌ಡೌನ್ ಜಾರಿಯಲ್ಲಿರುವುದರಿಂದ ಸಾರ್ವಜನಿಕರು ಮನೆಯಿಂದ ಹೊರಗೆ ಬರದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಅನಗತ್ಯ ವಾಹನ ಮತ್ತು ಜನ ಸಂಚಾರವನ್ನು ನಿರ್ಬಂಧಿಸಲಾಗಿದೆ. ಪ್ರತಿ ವಾರ್ಡ್‌ಗೂ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಕ ಮಾಡಲಾಗಿದ್ದು, ಈ ಅಧಿಕಾರಿಯೊಂದಿಗೆ 6 ಜನ ಸಿಬ್ಬಂದಿ ಮತ್ತು 7 ಸ್ವಯಂ ಸೇವಕರು ಕಾರ್ಯ ನಿರ್ವಹಿಸಲಿದ್ದಾರೆ. ಸೀಲ್‌ಡೌನ್ ವೇಳೆ ಜನರಿಗೆ ಅಗತ್ಯವಿರುವ ದಿನಸಿ ಪದಾರ್ಥ, ತರಕಾರಿ ಮತ್ತು ಔಷಧಗಳನ್ನು ಮನೆ ಬಾಗಿಲಿಗೇ ಪೂರೈಸುತ್ತಿದ್ದಾರೆ. ಆಯಾ ವಾರ್ಡ್‌ಗಳ ಜನರ ನಡುವಿನ ಸಂವಹನಕ್ಕಾಗಿ ಪ್ರತ್ಯೇಕ ವಾಟ್ಸಪ್ ಗ್ರೂಪ್‌ಗಳನ್ನು ಮಾಡಲಾಗಿದೆ.

**ನಿರಾಶ್ರಿತರಿಗೆ ಆಸರೆ:** ಕೊರೊನಾ ಸಮಸ್ಯೆಯಿಂದಾಗಿ ಜಿಲ್ಲೆಯಲ್ಲಿ 300 ಕ್ಕೂ ಹೆಚ್ಚು ಹೊರ ರಾಜ್ಯ ಮತ್ತು ಜಿಲ್ಲೆಗಳ ನಿರಾಶ್ರಿತರು ಊರುಗಳಿಗೆ ಹೋಗಲಾಗದೆ ಇಕ್ಕಟ್ಟಿಗೆ ಸಿಲುಕಿದ್ದರು. ಈ ನಿರಾಶ್ರಿತರಿಗೆ ಆಸರೆಯಾಗಿ ನಿಂತ ಜಿಲ್ಲಾಡಳಿತ ಪ್ರತ್ಯೇಕ ಶಿಬಿರಗಳನ್ನು ತೆರೆದು ಅವುಗಳಲ್ಲಿ ಅಗತ್ಯವಿರುವ ಮೂಲಸೌಕರ್ಯಗಳನ್ನು ಒದಗಿಸುವ ಜೊತೆಗೆ ದಿನಸಿ, ತರಕಾರಿ, ಹಾಲು ಮತ್ತು ಆಹಾರದ ಪೊಟ್ಟಣಗಳ ಪೂರೈಕೆ ಮಾಡುತ್ತಿದೆ. ಆ ಮೂಲಕ ಜಿಲ್ಲಾಡಳಿತ ಅವರಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿದೆ.

ಕೋವಿಡ್ ತಡೆಗೆ ಜಿಲ್ಲಾಡಳಿತವು 24 ಗಂಟೆಗಳ ಸಹಾಯವಾಣಿ (08156–277071) ಯನ್ನು ಆರಂಭಿಸಿದೆ. ಅಲ್ಲದೆ ಸಾರ್ವಜನಿಕರ ಅನುಕೂಲಕ್ಕಾಗಿ ಚಿಕ್ಕಬಳ್ಳಾಪುರದ ಕೆ.ವಿ.ಕ್ಯಾಂಪಸ್ ಬಳಿಯ ವಿಶಾಲ ಮೈದಾನದಲ್ಲಿ ತಾತ್ಕಾಲಿಕ ತರಕಾರಿ ಮಾರುಕಟ್ಟೆಯನ್ನು ಆರಂಭಿಸಿತು.

**– ಚಂದ್ರಶೇಖರ್**





# ಕೋವಿಡ್–19 ರ ವಿರುದ್ಧ ದಕ್ಷಿಣ ಕನ್ನಡ ಜಿಲ್ಲಾಡಳಿತದ ಮುನ್ನೆಚ್ಚರಿಕಾ ಕ್ರಮಗಳು



ಮಹಾಮಾರಿ ಕೊರೊನಾ ದೇಶಕ್ಕೆ ಕಾಲಿಡುವಾಗಲೇ ದಕ್ಷಿಣಕನ್ನಡ ಜಿಲ್ಲಾಡಳಿತ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸಲಾರಂಭಿಸಿತು. ಮುಖ್ಯವಾಗಿ ವಿದೇಶದಿಂದ ಪ್ರಯಾಣಿಕರು ಮಂಗಳೂರು ಅಂತಾರಾಷ್ಟ್ರೀಯ ವಿಮಾನನಿಲ್ದಾಣ ಹಾಗೂ ಸರಕು ಸಾಗಾಣಿಕೆ ಮತ್ತು ಪ್ರವಾಸಿಗರನ್ನು ಕರೆತರುವ ಹಡಗುಗಳು ನವ ಮಂಗಳೂರು ಬಂದರಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚು ಸೂಕ್ಷ್ಮ ಪ್ರದೇಶವಾಗಿತ್ತು.

ಆರಂಭದಲ್ಲಿ ನವ ಮಂಗಳೂರಿಗೆ ಪ್ರವಾಸಿಗರನ್ನು ಕರೆತರುವ ಕ್ರೂಸ್ ಹಡಗುಗಳು ಆಗಮಿಸಿತ್ತಾದರೂ, ಅವುಗಳಿಂದ ಪ್ರಯಾಣಿಕರು ಹೊರಗೆ ಬರಲು ಅವಕಾಶ ನೀಡಲಿಲ್ಲ. ನಂತರದ ದಿನಗಳಲ್ಲಿ ಪೂರ್ಣವಾಗಿ ಆವುಗಳ ಆಗಮನ ನಿಂತಿತು. ಸರಕು ಸಾಗಾಣಿಕೆ ಮಾಡುವ ವಿದೇಶೀ ಹಡಗುಗಳಲ್ಲಿ ಸರಕುಗಳನ್ನು ಅನ್‌ಲೋಡಿಂಗ್ ಮಾಡುವಾಗ ಎನ್.ಎಂ.ಪಿ.ಟಿ. ಸಾಕಷ್ಟು ಮುನ್ನೆಚ್ಚರಿಕೆ ವಹಿಸಿತು.

ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿದೇಶದಿಂದ ಆಗಮಿಸುವ ಪ್ರಯಾಣಿಕರ ವೈದ್ಯಕೀಯ ತಪಾಸಣೆಗೆ ಜಿಲ್ಲಾಡಳಿತ ಅಗತ್ಯ ಸಿದ್ಧತೆ ಮಾಡಿತು. ಪ್ರತೀ ದಿನ ಜಿಲ್ಲೆಯ ಪ್ರತೀ ವೈದ್ಯಕೀಯ ಕಾಲೇಜಿನಿಂದ ಒಂದು ಸುಸಜ್ಜಿತ ತಂಡವನ್ನು ಪ್ರತೀದಿನ ವಿಮಾನ ನಿಲ್ದಾಣದಲ್ಲಿಟ್ಟು, ಪ್ರತಿಯೊಬ್ಬ ವಿದೇಶೀ ಪ್ರಯಾಣಿಕರ ಮೇಲೆ ವೈದ್ಯಕೀಯ ನಿಗಾ ಇಟ್ಟಿತು. ಯಾವುದೇ ರೋಗ ಲಕ್ಷಣಗಳಿದ್ದವರನ್ನು ವಿಮಾನ ನಿಲ್ದಾಣದಿಂದಲೇ ನೇರವಾಗಿ ಆಸ್ಪತ್ರೆಗೆ ಅಂಬ್ಯುಲೆನ್ಸ್‌ನಲ್ಲಿ ಕಳುಹಿಸಲಾಯಿತು.

ಜಿಲ್ಲಾ ವೆನ್‌ಲಾಕ್ ಆಸ್ಪತ್ರೆಯನ್ನು ಸಂಪೂರ್ಣ ಕೋವಿಡ್ ಚಿಕಿತ್ಸೆ ಆಸ್ಪತ್ರೆಯನ್ನಾಗಿ ರಾಜ್ಯ ಸರಕಾರ ಮಾರ್ಪಡಿಸಿತು. ಇಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಇತರೆ ಖಾಯಿಲೆಗಳ ರೋಗಿಗಳನ್ನು ಮಂಗಳೂರು ನಗರದ ಇತರೆ ಖಾಸಗೀ ವೈದ್ಯಕೀಯ ಕಾಲೇಜುಗಳ ಆಸ್ಪತ್ರೆಗಳಿಗೆ ವರ್ಗಾಯಿಸಲಾಯಿತು. ಅಲ್ಲಿ ಸರಕಾರಿ ಆಸ್ಪತ್ರೆಯ ಮಾದರಿಯಲ್ಲಿಯೇ ರೋಗಿಗಳಿಗೆ ಅಗತ್ಯ ಚಿಕಿತ್ಸೆ ದೊರಕುವಂತೆ, ಆಯುಷ್ಮಾನ್ ವಿಮಾ ಸೌಲಭ್ಯ ಸೇರಿದಂತೆ, ರೋಗಿಗಳಿಗೆ ಎಲ್ಲ ಸೌಲಭ್ಯಗಳು ದೊರಕುವಂತೆ ಜಿಲ್ಲಾಡಳಿತ ಅಗತ್ಯ ವ್ಯವಸ್ಥೆ ಮಾಡಿದೆ. ಕೊರೊನಾ ಹಿನ್ನೆಲೆಯಲ್ಲಿ ಖಾಸಗೀ ವೈದ್ಯಕೀಯ ಕಾಲೇಜುಗಳು ಎಲ್ಲಾ ಅಗತ್ಯ ನೆರವು ನೀಡಲು ಮುಂದೆ ಬಂದವು.ಡಯಾಲಿಸಿಸ್ ಅಗತ್ಯವಿರುವವರಿಗೆ ಯಾವುದೇ ತೊಂದರೆಯಾಗದಂತೆ ಡಯಾಲಿಸಿಸ್ ಮಾಡಿಸಲು ಖಾಸಗೀ ಆಸ್ಪತ್ರೆಗಳಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸಲಾಯಿತು.

ಜಿಲ್ಲೆಯ ಗಡಿ ಪಕ್ಕದ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯಲ್ಲಿ ಕೊರೊನಾ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗಿದ್ದರಿಂದ ಜಿಲ್ಲೆಯಿಂದ ಎಲ್ಲಾ ಅಂತ ರಾಜ್ಯ ಗಡಿಗಳನ್ನು ಮುಚ್ಚಲಾಗಿತ್ತು. ಅತ್ಯವಶ್ಯ ಸಾಮಾಗ್ರಿಗಳ ವಾಹನಗಳು ಹಾಗೂ ತುರ್ತು ಚಿಕಿತ್ಸೆ ಅಗತ್ಯವಿರುವ ರೋಗಿಗಳ ಅಂಬ್ಯುಲೆನ್ಸ್ ವಾಹನಗಳಿಗೆ ಮಾತ್ರ ಪ್ರವೇಶ ನೀಡಲಾಯಿತು.

ರಾಜ್ಯದ ಆರೋಗ್ಯ ಸಚಿವ ಶ್ರೀರಾಮುಲು ಅವರು ಮಂಗಳೂರಿಗೆ ಭೇಟಿ ನೀಡಿ, ಕೊರೊನಾ ನಿರ್ವಹಣೆಯ ಪ್ರಗತಿ ಪರಿಶೀಲಿಸಿದ್ದರು. ಅಲ್ಲದೇ, ಜಿಲ್ಲಾ ವೆನ್‌ಲಾಕ್ ಆಸ್ಪತ್ರೆಗೂ ಭೇಟಿ ನೀಡಿದ್ದರು. ದಕ್ಷಿಣಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಲೋಕಸಭಾ ಸದಸ್ಯ ನಳಿನ್ ಕುಮಾರ್ ಕಟೀಲು ಅವರು ಕೊರೊನಾ ಶಂಕಿತರಿಗೆ ಹಾಗೂ ದೃಢಪಟ್ಟವರಿಗೆ ಚಿಕಿತ್ಸೆ ನೀಡುವ ವೆನ್‌ಲಾಕ್ ಆಸ್ಪತ್ರೆಗೆ ಭೇಟಿ ನೀಡಿ ಸಿದ್ಧತೆಗಳನ್ನು ಪರಿಶೀಲಿಸಿದರು. ಜಿಲ್ಲೆಯ ಎಲ್ಲ ತಾಲೂಕು ಆಸ್ಪತ್ರೆಗಳಲ್ಲೂ ಅಗತ್ಯ ಚಿಕಿತ್ಸೆ ದೊರಕಿಸಬೇಕು. ಆಯಾ ತಾಲೂಕಿನಲ್ಲಿರುವ ಖಾಸಗೀ ವೈದ್ಯರ ಸೇವೆ ಪಡೆಯಲು ಕ್ರಮ ಕೈಗೊಳ್ಳಬೇಕು ಎಂದು ಅವರು ಸೂಚಿಸಿದ್ದಾರೆ.

ವೆನ್‌ಲಾಕ್ ಆಸ್ಪತ್ರೆಯಲ್ಲಿ ಕೊರೊನಾ ಚಿಕಿತ್ಸೆಯಲ್ಲಿ ಯಾವುದೇ ಲೋಪಗಳಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಈ ನಿಟ್ಟಿನಲ್ಲಿ ಪ್ರತೀದಿನ ವೆನ್‌ಲಾಕ್ ಅಧೀಕ್ಷಕರು ಆಸ್ಪತ್ರೆಯ ಎಲ್ಲಾ ವಿಭಾಗ ಮುಖ್ಯಸ್ಥರ, ವೈದ್ಯರ ಸಭೆ ನಡೆಸಿ, ಸಮನ್ವಯತೆ ಕಾಪಾಡಿಕೊಳ್ಳಬೇಕು. ರೋಗಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ಒದಗಿಸುವುದು ಸರಕಾರದ ಉದ್ದೇಶವಾಗಿದ್ದು, ಇದರಲ್ಲಿ ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳಲಾಗದು ಎಂದು ಉಸ್ತುವಾರಿ ಸಚಿವರು ತಿಳಿಸಿದ್ದರು.

ವೆನ್‌ಲಾಕ್ ಆವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಆಯುಷ್ ಕಟ್ಟಡ ಹಾಗೂ ಸೂಪರ್ ಸ್ಪೆಷಾಲಿಟಿ ಬ್ಲಾಕ್‌ಗಳಲ್ಲಿ ಕೊರೊನಾ ಪೀಡಿತರ ಹಾಗೂ ಶಂಕಿತರ ಚಿಕಿತ್ಸೆಗಾಗಿಯೇ ಪ್ರತ್ಯೇಕ ವ್ಯವಸ್ಥೆ ಮಾಡಲಾಯಿತು. ಆಯುಷ್ ಕಟ್ಟಡದಲ್ಲಿ ಪ್ರತಿ ರೋಗಿಗೂ ಪ್ರತ್ಯೇಕ ಕೊಠಡಿಗಳಿರುವ 18



Downloaded From: www.kpscvaani.com

ಕೊಠಡಿಗಳನ್ನು ಕಾದಿರಿಸಲಾಗಿದೆ. ಸೂಪರ್ ಸ್ಪೆಷಾಲಿಟಿ ಕಟ್ಟಡದಲ್ಲಿಯೂ ಪ್ರತ್ಯೇಕವಾಗಿರುವ ಕೊಠಡಿಗಳನ್ನು ಕಾದಿರಿಸಲಾಗಿದೆ. ಶಂಕಿತ ರೋಗಿ ದಾಖಲಾದ ತಕ್ಷಣ, ರೋಗಿಯನ್ನು ಪ್ರತ್ಯೇಕ ಕೊಠಡಿಯಲ್ಲಿರಿಸಿ, ಕೌನ್ಸಿಲಿಂಗ್ ಮಾಡಿ, ಗಂಟಲ ದ್ರವ ಮಾದರಿ ಸಂಗ್ರಹಿಸಲಾಗುತ್ತಿದೆ. ಪರೀಕ್ಷೆಯಲ್ಲಿ ನೆಗೆಟಿವ್ ಬಂದರೆ, ಸಾಕಷ್ಟು ಮುನ್ನೆಚ್ಚರಿಕೆ ಮಾಹಿತಿ ನೀಡಿ, ಮನೆಯಲ್ಲಿ ನಿಗಾವಣೆಯಲ್ಲಿರಲು ತಿಳಿಸಿ ಕಳುಹಿಸಲಾಗುತ್ತದೆ. ಪಾಸಿಟಿವ್ ಬಂದರೆ, ಚಿಕಿತ್ಸೆಯನ್ನು ಅದೇ ಕೊಠಡಿಯಲ್ಲಿ ಮುಂದುವರಿಸಲಾಗಿದೆ.

**ಕೊರೊನಾ ಕಂಟ್ರೋಲ್‌ರೂಂ**

ಕೊರೊನಾ ಶಂಕಿತರ ಹಾಗೂ ರೋಗಿಗಳ ಎಲ್ಲಾ ಮಾಹಿತಿ ಸಂಗ್ರಹಿಸಲು ಹಾಗೂ ಸಮನ್ವಯತೆ ಕಾಪಾಡಲು ಸುಸಜ್ಜಿತ ಕಂಟ್ರೋಲ್ ರೂಂ ತೆರೆಯಲಾಗಿತ್ತು. ಜಿಲ್ಲಾಧಿಕಾರಿ ಸಿಂಧೂ ಬಿ. ರೂಪೇಶ್ ಅವರ ನಿರ್ದೇಶನದಂತೆ, ಕೆಎಎಸ್ ಅಧಿಕಾರಿ ನೇತೃತ್ವದಲ್ಲಿ ಕಾರ್ಯಾ ನಿರ್ವಹಿಸುತ್ತಿರುವ ಈ ಕಂಟ್ರೋಲ್ ರೂಂನಲ್ಲಿ ತರಬೇತಿ ಪಡೆದ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ವಿದೇಶದಿಂದ ಬರುವ ಪ್ರಯಾಣಿಕರ ಮಾಹಿತಿ, ಬೇರೆ ವಿಮಾನ ನಿಲ್ದಾಣದಿಂದ ಜಿಲ್ಲೆಗೆ ಬಂದವರ ಮಾಹಿತಿ, ಅವರು ಸಂಪರ್ಕ ಹೊಂದಿದ ಪ್ರದೇಶಗಳು, ವ್ಯಕ್ತಿಗಳ ಮಾಹಿತಿಗಳನ್ನು ಈ ಕಂಟ್ರೋಲ್ ರೂಂನಲ್ಲಿ ಸಂಗ್ರಹಿಸಲಾಗುತ್ತಿದೆ.

ಕಂಟ್ರೋಲ್ ರೂಂನಿಂದ ಕೊರೊನಾ ಶಂಕಿತ ರೋಗಿಗಳ ವಿವರ, ವಿಮಾನದಲ್ಲಿ ಬಂದ ಪ್ರಯಾಣಿಕರ ವಿವರಗಳನ್ನು ವಿಮಾನ ನಿಲ್ದಾಣದಿಂದ, ಸಂಬಂಧಪಟ್ಟ ವಿಮಾನ ಸಂಸ್ಥೆಗಳಿಂದ ಪಡೆದು ಅವರೊಂದಿಗೆ ನಿರಂತರ ಸಂಪರ್ಕ ಇಡಲಾಗುತ್ತಿದೆ. ವಿದೇಶದಿಂದ ಬಂದು ಗೃಹ ನಿಗಾವಣೆಯಲ್ಲಿರುವವರೊಂದಿಗೂ ನಿರಂತರ ನಿಗಾ ಇಲ್ಲಿಂದ ಇಡಲಾಗುತ್ತಿದೆ. ಮಂಗಳೂರು ವಿಮಾನ ನಿಲ್ದಾಣಕ್ಕೆ ಬಂದ ಬಂದ ಪ್ರಯಾಣಿಕರ ವಿವರಗಳನ್ನು ಜಿಲ್ಲಾವಾರು ವಿಂಗಡಿಸಿ, ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಚೇರಿಗೆ ಇಲ್ಲಿಂದಲೇ ಮಾಹಿತಿ ಕಳುಹಿಸಲಾಗುತ್ತಿದೆ. ದಕ್ಷಿಣಕನ್ನಡ ಜಿಲ್ಲೆಯ ಪ್ರಯಾಣಿಕರೊಂದಿಗೆ ಮಾತ್ರ ಇಲ್ಲಿಂದಲೇ ಸಂಪರ್ಕದಲ್ಲಿದ್ದು, ಪಡೆಯಲಾಗುತ್ತಿದೆ. ಇದರಿಂದ ಕೊರೊನಾ ಶಂಕಿತರ ಹಾಗೂ ನಿಗಾವಣೆಯಲ್ಲಿರುವ ಸಮಗ್ರ ವಿವರವನ್ನು ಕೇಂದ್ರೀಕರಿಸಲು ನೆರವಾಗಿದೆ. ವಿಮಾನ ನಿಲ್ದಾಣ, ಜಿಲ್ಲಾಧಿಕಾರಿ ಕಚೇರಿ, ಆರೋಗ್ಯ ಇಲಾಖೆಗಳ ನಡುವೆ ಮಾಹಿತಿ ಸಮನ್ವಯತೆಗೆ ಇದು ನೆರವಾಯಿತು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇನ್ನೊಂದು ಕಂಟ್ರೋಲ್‌ರೂಂ, ನಂತರ ಸ್ಮಾರ್ಟ್‌ಸಿಟಿ ಕಮಾಂಡ್ ಸೆಂಟರ್‌ನಲ್ಲಿ ಕಾರ್ಯಾಚರಿಸುತ್ತಿದೆ. ಸಹಾಯವಾಣಿ ಸಂಖ್ಯೆ 1077 ಮೂಲಕ ಜಿಲ್ಲೆಯ ಜನತೆಗೆ ಅಗತ್ಯ ನೆರವನ್ನು ನೀಡಲಾಯಿತು. ತುರ್ತು ವೈದ್ಯಕೀಯ ಪರಿಸ್ಥಿತಿಯಲ್ಲಿ ಆಸ್ಪತ್ರೆಗೆ ಹೋಗಲು ಸಾರ್ವಜನಿಕರ ವಾಹನಗಳಿಗೆ ಪಾಸುಗಳನ್ನು ಇಲ್ಲಿಂದಲೇ ನೀಡಲಾಗುತ್ತಿದೆ.

**ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಪ್ರಕರಣ**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಪ್ರಥಮ ಕೊರೊನಾ ಪ್ರಕರಣ ವರದಿಯಾಗಿದ್ದ ಯುವಕ ಸಂಪೂರ್ಣ ಗುಣಮುಖನಾಗಿ ಏಪ್ರಿಲ್ 6ರಂದು ತನ್ನ ಊರಿಗೆ ತೆರಳುವುದರೊಂದಿಗೆ ಜಗತ್ತನ್ನೇ ನಲುಗಿಸಿರುವ ಕೊರೊನಾ ಸಾಂಕ್ರಾಮಿಕ ಕಾಯಿಲೆ ವಿರುದ್ಧ ವೆನ್‌ಲಾಕ್ ಜಿಲ್ಲಾಸ್ಪತ್ರೆ ಹಾಗೂ ದಕ್ಷಿಣಕನ್ನಡ ಜಿಲ್ಲಾಡಳಿತಕ್ಕೆ ಮೊದಲ ಯಶಸ್ಸು ದೊರಕಿದೆ.

ವಿದೇಶದಲ್ಲಿ ಉದ್ಯೋಗದಲ್ಲಿದ್ದ ಈ ಯುವಕನು ಮಾರ್ಚ್19ರಂದು ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದನು. ಅಲ್ಲಿ ತಪಾಸಣೆ ಸಂದರ್ಭ ರೋಗ ಲಕ್ಷಣಗಳಿರುವುದು ಪತ್ತೆಯಾದ ಹಿನ್ನೆಲೆಯಲ್ಲಿ ಅಲ್ಲಿಂದಲೇ ಅಂಬ್ಯುಲೆನ್ಸ್‌ನಲ್ಲಿ ವೆನ್‌ಲಾಕ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಯುವಕನ ಗಂಟಲ ದ್ರವ ಮಾದರಿಯನ್ನು ಪರೀಕ್ಷೆಗಾಗಿ ಕಳುಹಿಸಿ, ಮಾ.22 ರಂದು ಕೊರೊನಾ ಪಾಸಿಟಿವ್ ಇರುವುದು ದೃಢಪಟ್ಟಿತ್ತು.

ಜಿಲ್ಲೆಯ ಪ್ರಥಮ ಪ್ರಕರಣ ಇದಾಗಿದ್ದರಿಂದ ಜಿಲ್ಲಾಡಳಿತವು ಸಾಕಷ್ಟು ಮುಂಜಾಗರೂಕತಾ ಕ್ರಮಗಳನ್ನು ತಕ್ಷಣದಿಂದಲೇ ಕೈಗೊಂಡಿತು. ಅದರಲ್ಲೂ ವೆನ್‌ಲಾಕ್ ಆಸ್ಪತ್ರೆಗೆ ಇದೊಂದು ಸವಾಲಿನ ಪ್ರಕರಣವಾಗಿತ್ತು. ರೋಗಿಯನ್ನು ಸಂಪೂರ್ಣವಾಗಿ ಪ್ರತ್ಯೇಕವಾಗಿಡುವುದರೊಂದಿಗೆ ರೋಗಕ್ಕೆ ಚಿಕಿತ್ಸೆ ನೀಡುವುದೂ ಕೂಡಾ ಮಹತ್ವದ್ದಾಗಿತ್ತು. ಈ ನಿಟ್ಟಿನಲ್ಲಿ ವೆನ್‌ಲಾಕ್ ಅಧೀಕ್ಷಕರು, ವೈದ್ಯರು, ನರ್ಸ್ ಹಾಗೂ ಸಿಬ್ಬಂದಿಗಳು ತಮ್ಮ ಪೂರ್ಣ ಸೇವೆಯನ್ನು ಮೀಸಲಿಟ್ಟು, ಅಂತಿಮವಾಗಿ ರೋಗಿಯನ್ನು ಗುಣಮುಖಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ನಮ್ಮ ಓಡಾಟ ನಿಯಂತ್ರಿಸುವುದು ಪ್ರಾಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಲಾಕ್‌ಡೌನ್ ಸರಕಾರದ ದಿಟ್ಟಹೆಜ್ಜೆಯಾಗಿದ್ದು, ಸರಕಾರದ ನಿರ್ದೇಶನದಂತೆ ಎಲ್ಲರೂ ಮನೆಯೊಳಗೆ ಇರುವುದು ಅಗತ್ಯವಾಗಿದೆ. ನಾನು ವಿಮಾನ ನಿಲ್ದಾಣದಿಂದಲೇ ನೇರವಾಗಿ ಆಸ್ಪತ್ರೆಗೆ ದಾಖಲಾಗಿದ್ದರಿಂದ, ಊರಿಗೆ ತೆರಳಿ ಬಳಿಕ ಕುಟುಂಬಸ್ಥರಿಗೆ, ಊರಿನವರಿಗೆ ರೋಗ ಹರಡುವುದು ತಪ್ಪಿತು. ಇದಕ್ಕಾಗಿ ಜಿಲ್ಲಾಡಳಿತಕ್ಕೆ ತಾನು ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು ಎಂದು ಯುವಕ ಹೇಳಿದನು. ಕೊರೊನಾ ರೋಗಕ್ಕೆ ಹೆದರುವ ಅಗತ್ಯವಿಲ್ಲ. ಆತ್ಮವಿಶ್ವಾಸ ಮುಖ್ಯವಾಗಿದೆ. ರೋಗಿಯು ಪ್ರತ್ಯೇಕವಾಗಿರುವುದು ಅಗತ್ಯ. ಒಬ್ಬಂಟಿಯಾಗಿರುವುದಕ್ಕೆ ಹೆದರುವ ಅಗತ್ಯವಿಲ್ಲ. ಯಾವುದೇ ಕಾರಣಕ್ಕೂ ಆತ್ಮವಿಶ್ವಾಸ ಕಳೆದುಕೊಳ್ಳಬಾರದು, ಸೋಂಕಿನ ವಿರುದ್ಧ ಹೋರಾಡಲು ನಮ್ಮಲ್ಲಿ ಧೈರ್ಯ ಮುಖ್ಯವಾಗಿದೆ ಎಂದರು.

10 ತಿಂಗಳ ಮಗುವಿಗೆ ಕೂಡಾ ಜಿಲ್ಲೆಯಲ್ಲಿ ಕೊರೊನಾ ದೃಢಪಟ್ಟು, ವೈದ್ಯರಿಗೂ ಚಿಕಿತ್ಸೆ ನೀಡುವುದು ಸವಾಲಾಗಿತ್ತು. ಈ ಮಗೂ ಕೂಡಾ ಸಂಪೂರ್ಣ ಗುಣಮುಖವಾಗಿ ಏಪ್ರಿಲ್ 11 ರಂದು ಆಸ್ಪತ್ರೆಯಿಂದ ಬಿಡುಗಡೆಯಾಗಿದೆ. ಏಪ್ರಿಲ್ 14ರವರೆಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ 12 ಕೊರೊನಾ ಪ್ರಕರಣಗಳು ದೃಢಪಟ್ಟಿತ್ತು. ಈ ಪೈಕಿ 9 ಮಂದಿ ಈಗಾಗಲೇ ಗುಣಮುಖರಾಗಿ ಬಿಡುಗಡೆ ಹೊಂದಿದ್ದಾರೆ.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಪೊನ್ನುರಾಜ್ ಹಾಗೂ ಜಿಲ್ಲಾಧಿಕಾರಿ ಸಿಂಧೂ ಬಿ. ರೂಪೇಶ್ ಅವರ ನೇತೃತ್ವದಲ್ಲಿ ಜಿಲ್ಲಾಡಳಿತವು ಕೊರೊನಾ ನಿಯಂತ್ರಣಕ್ಕೆ ಸಾಕಷ್ಟು ಪ್ರಯತ್ನಿಸುತ್ತಿದೆ, ಜಿಲ್ಲೆಯ ಜನತೆ ಕೂಡಾ ಸರಕಾರದ ಈ ಪ್ರಯತ್ನಗಳಿಗೆ ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ.

–ಬಿ.ಎ. ಖಾದರ್ ಶಾ

Published by : S N Siddaramappa, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

Downloaded From: www.kpscvaani.com